

ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)

ಪಾಜಕ, 89/24, 3ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-19. ದೂರವಾಣಿ : (080) 26602802; 26611011

## ಸಂಪಾದಕರು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ಸಂಪುಟ -೫   ಸಂಚಿಕೆ -೫   ಶ್ರೀನಂದನ(ಆಷಾಢ-ಶ್ರಾವಣ)   ಜುಲೈ ೨೦೧೨

## ಶ್ರೀವ್ಯಾಸಸೂಕ್ತಿ

**ಅನುವ್ರತಾನಾಂ ಶಿಷ್ಯಾಣಾಂ ಪುತ್ರಾಣಾಂ ಚ ದ್ವಿಜೋತ್ತಮ ।**
**ಅನಾಪೃಷ್ಟಮಪಿ ಬ್ರೂಯುರ್ಗುರವೋ ದೀನವತ್ಸಲಾಃ ॥**

-ಶ್ರೀಮದ್ಭಾಗವತ(೩/೭/೩೬)

ವಿಧೇಯರಾದ ಶಿಷ್ಯರಿಗೆ ಹಾಗೂ ಪುತ್ರರಿಗೆ ಅವರು ಕೇಳದೇ ಇದ್ದರೂ ದೀನವತ್ಸಲರಾದ ಗುರುಹಿರಿಯರು ತತ್ವಗಳನ್ನು ಉಪದೇಶಿಸುವರು.

## ಶ್ರೀಮಧ್ವಸೂಕ್ತಿ

**ಯಾನಿ ಕಾನಿ ಚ ತೀರ್ಥಾನಿ ಬ್ರಹ್ಮಾಂಡಾಂತರ್ಗತಾನಿ ಚ ।**
**ವಿಷ್ಣುಪಾದೋದಕಸ್ಯೈತೇ ಕಲಾಂ ನಾರ್ಹಂತಿ ಷೋಡಶೀಮ್ ॥**

-ಕೃಷ್ಣಾಮೃತಮಹಾರ್ಣವ.ಶ್ಲೋ.೯

ಬ್ರಹ್ಮಾಂಡದೊಳಗಿನ ಯಾವ ಪುಣ್ಯತೀರ್ಥಗಳೂ ಸಹ ವಿಷ್ಣುಪಾದೋದಕದ ಹದಿನಾರನೆಯ ಒಂದಂಶಕ್ಕೂ ಸಾಟಿ ಎನ್ನಿಸವು.

# ವಿಷಯಾನುಕ್ರಮಣಿಕೆ


೧. ಶ್ರೀವ್ಯಾಸಸೂಕ್ತಿ – ಶ್ರೀಮಧ್ವಸೂಕ್ತಿ ೧

೨. ಹರಿದಾಸರ ಸೂಕ್ತಿರತ್ನಗಳು – ಶ್ರೀಪುರಂದರದಾಸರ ಸೂಕ್ತಿರತ್ನಗಳು ೩

೩. ಗಾಯತ್ರೀಭಾಷ್ಯರೂಪಃ ಅಸೌ – ೪೦ : – ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ೪

೪. ಶ್ರೀಕೃಷ್ಣನಾಮಾರ್ಥಚಂದ್ರಿಕಾ – ೪೩ : – ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು ೬

೫. ಪುಂಗವ – ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು ೧೨

೬. ಸಂಪಾದಕೀಯ – ಸಾಧನೆಯನ್ನು ಗುರುತಿಸದ ಮತ–ಮಾನ್ಯಗಳು ೧೪

೭. ಉಪಚಾರಾರ್ಪಣೆಯ ಅನುಸಂಧಾನ –ಪಂ.ಶ್ರೀಸಗ್ರಿರಾಘವೇಂದ್ರ ಉಪಾಧ್ಯಾಯ ೧೬

೮. ಯಲಗುರುಕ್ಷೇತ್ರ – ಸಂ : ಶ್ರೀಜಯರಾಮಾಚಾರ್ಯ ಮಳಗಿ, ಗದಗ ೨೦

೯. ಉಡುಪಿಯ ಶ್ರೀಕೃಷ್ಣನಿಗೆ ರೊಟ್ಟಿಯ ನೈವೇದ್ಯವೇಕೆ ? – ಅಡ್ಡೆ ವೇದವ್ಯಾಸಾಚಾರ್ಯ ೨೨

೧೦. ಮಂತ್ರಾಲಯದ ಮಹಾಮುನಿ ಶ್ರೀರಾಘವೇಂದ್ರರು –ವಿಪ್ರ ೨೪

೧೧. ಸುಮಧ್ವವಿಜಯದಲ್ಲಿ ಶ್ರೀಮದಾಚಾರ್ಯರ ಕಾಲ – ಜಯಂತ ವ್ಯಾಸನಕೆರೆ ೨೬

೧೨. ಚಾತುರ್ಮಾಸ್ಯದಲ್ಲಿ ವಿಹಿತವಾದ ಕೆಲವು ವಿಶೇಷವ್ರತಗಳು – ವಿಪ್ರ ೩೦

೧೩. ವಿಷ್ಣುವಿಗೆ ಪವಿತ್ರಾರೋಪಣದ ವಿಶೇಷ – ವಿಪ್ರ ೩೧

೧೪. ಶ್ರೀಕೃಷ್ಣಾಷ್ಟಮೀವ್ರತದ ಮಹಿಮೆ – ವಿಪ್ರ ೩೩

೧೫. ಶ್ರೀಕನಕದಾಸರ ಹರಿಭಕ್ತಿಸಾರ – ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೩೬

೧೬. ಮಾಸದ ವಿಶೇಷಗಳು ೪೦


*****

---

## ಚಂದಾ ವಿವರ

Bi àÊaí ¨Ý : Ãã 5000

±íaÊÝÑì Pl aí ¨Ý : Ãã. 500; ¹w ±lÉ£ : Ãã. 10

ವಿ.ಸೂ.:–

೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವ ಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

# ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಆದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

## ಶ್ರೀಪುರಂದರದಾಸರ ಸೂಕ್ತಿರತ್ನಗಳು

ಹತ್ತು ಗೋದಾನಕೆ ಸಮ ಹರಿಗೆ ವೃಷದಾನ
ಹತ್ತು ವೃಷಭಕೆ ಸಮ ಹಾರುವ ಕುದುರೆ ಕಾಣಿರೋ
ಹತ್ತು ಕುದುರೆಗೆ ಸಮ ಹಸ್ತಿದಾನ ಕಾಣಿರೋ
ಹತ್ತು ಹಸ್ತಿಗೆ ಸಮ ಒಂದು ಕ್ರತುವು
ಹತ್ತು ಕ್ರತುವಿಗೆ ಸಮ ಹರಿಭಕ್ತರಿಗೆ ಕನ್ಯಾದಾನ ಕಾಣಿರೊ
ಹತ್ತು ಕನ್ಯಾದಾನಕೆ ಸಮ ಹಸಿದವಗೆ ಅನ್ನ ಕಾಣಿರೊ
ಹತ್ತು ಅನ್ನದಾನಕೆ ಸಮ ಉದಕದಾನ ಕಾಣಿರೊ
ನಿತ್ಯ ಪುರಂದರವಿಠಲನ ನೆನೆವ ಪುಣ್ಯಕೆಣೆಯಿಲ್ಲ ಕಾಣಿರೊ ॥

******

ಕಂಡಕಂಡವರಿಗೆ ಅಲ್ಪರಿವ ಬಾಳುವೆಗಿಂತ
ಕೊಂಡವನೆ ಧುಮುಕಲಿಬಹುದು
ತಂಡತಂಡದ ನರರ ಕೊಂಡಾಡುವುದಕಿಂತ
ತುಂಡರಿಸಲಿಬಹುದು ಈ ಜಿಹ್ವೆಯನ್ನು
ಮಂಡೆಬಾಗಿ ಪರರಿಗೆ ನಮಿಸುವುದಕಿಂತ
ಗಂಡುಗತ್ತರಿ ಕೊರಳೊಳಿಟ್ಟರೆ ಘನವು
ಪಂಡಿತನೆನಿಸಲೊಲ್ಲೆನೊ ಪರಮಾತ್ಮ ನಿನ್ನ
ತೊಂಡರವನೆನಿಸುವ ಭಾಗ್ಯವೀಯೊ ಪುರಂದರವಿಠಲ ॥

******

# ಗಾಯತ್ರೀಭಾಷ್ಯರೂಪಃ ಅಸೌ - ೪೦

## (ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು**
**ಪಲಿಮಾರು ಮಠ, ಉಡುಪಿ.**

ಧ್ರುವನಿಂದ ಭೂಮಿಯಲ್ಲಿ ಉದಿಸಿದ ಸುಪುತ್ರ ವತ್ಸರ. ಅವನ ಪರಂಪರೆಯಲ್ಲಿ ಬಂದ ರಾಜ ಉಲ್ಮುಕ. ಉಲ್ಮುಕನಿಂದ ಪುಷ್ಕರಣಿಯಲ್ಲಿ ಜನಿಸಿದ ಆರು ಮಂದಿಯಲ್ಲಿ ಜೇಷ್ಠನಾದವ ಅಂಗ. ಹೆಸರೇ ಹೇಳುವಂತೆ ಮನೆಮಂದಿಗೆ ಮಾತ್ರವಲ್ಲ ಊರಿಗೆ ಊರೇ ಪ್ರೀತಿಸಿದ ಕೂಸು ''ಅಂಗ''. ನಾವು ನಮ್ಮ ಅಂಗಗಳಿಗಿಂತ ಹೆಚ್ಚು ಯಾವುದನ್ನೂ ಪ್ರೀತಿಸಲಾರೆವು. ಹಾಗಾಗಿ ಪ್ರತಿಯೊಬ್ಬರ ಹೃದಯವನ್ನು ಗೆದ್ದ ಈ ಮಗನಿಗೆ ಅಂಗ ಅನ್ನುವ ನಾಮಧೇಯವು ಅನ್ವರ್ಥಕವಾಗಿತ್ತು.

ಅಂಗರಾಜನು ಅಶ್ವಮೇಧ ಯಾಗ ಮಾಡಿದ. ಶ್ರದ್ಧಾಭಕ್ತಿಗಳಿಗೆ ಕೊರತೆಯಿರಲಿಲ್ಲ. ದ್ರವ್ಯವಂತೂ ಅಶುದ್ಧವಾಗಿರಲಿಲ್ಲ. ಮಂತ್ರ - ತಂತ್ರ ಲೋಪದ ಪ್ರಶ್ನೆಯೇ ಉದ್ಭವಿಸಲಾರದು. ಆದರೂ ಅಂಗನ ಯಾಗ ಅಂಗವೈಕಲ್ಯವುಳ್ಳದ್ದಾಗಿತ್ತು. ಅಂಗರಾಜನ ಯಾಗಕ್ಕೆ ಪ್ರಧಾನ ಅಂಗವಾದ ದೇವತೆಗಳೇ ಭಾಗವಹಿಸಿರಲಿಲ್ಲ. ಇದಕ್ಕೆ ಕಾರಣ ಅಂಗರಾಜನ ಜನ್ಮಾಂತರದ ದುರಿತ. ಅದಕ್ಕೆಂದೇ ಈತನಿಗೆ ಈ ಜನ್ಮದಲ್ಲಿ ಮಕ್ಕಳಾಗಲಿಲ್ಲ. ಜ್ಞಾನಿಗಳಾದ ಋತ್ವಿಜರು ಶ್ರೀಹರಿಗೆ ಯಾಗದ ಮೂಲಕ ಆಹುತಿಕೊಟ್ಟು, ಭಗವಂತನಿಂದ ನೇರವಾಗಿ, ಬಂಗಾರದ ಪಾತ್ರೆಯಲ್ಲಿ ಪಾಯಸ ಪ್ರಸಾದವನ್ನು ಅಂಗನಿಗೆ ಕೊಡಿಸಿ, ಅಂಗನನ್ನು ಪುತ್ರವಂತನನ್ನಾಗಿ ಮಾಡಿದರು. ಯಜ್ಞನಾರಾಯಣನ ಪ್ರಸಾದದಿಂದ ಸುನೀಥೆಯಲ್ಲಿ ಜನಿಸಿದ ಕೂಸೇ ವೇನ. ಆದರೆ ಈ ವೇನ ಮಾಡದೇ ಇದ್ದ ಅನ್ಯಾಯವೇ ಇಲ್ಲ. ಆಡುತ್ತಿದ್ದ ಹಸುಳೆಗಳನ್ನು ಬಲಾತ್ಕಾರವಾಗಿ ಹಸುಗಳೆಂಬಂತೆ ಕತ್ತುಹಿಸುಕಿ ಅಸುನೀಗುವಂತೆ ಮಾಡುತ್ತಿದ್ದ ಮಹಾಪಾಪಿ ವೇನ. ಹಿಂಸೆಗೆ ಪರ್ಯಾಯ ಪದವಾಗಿ ವೇನ ಎಂಬ ಪದವನ್ನು ಬಳಸುತ್ತಿದ್ದರು - ''ವೇನ ಹಿಂಸಾಯಾಂ''. ವೇನನ ಹಿಂಸೆಯಿಂದ ನೊಂದ ತಂದೆ, ದೇಶದ ರಾಜನಾದ ಅಂಗನು ರಾತ್ರೋರಾತ್ರಿಯಲ್ಲಿ ಊರುಬಿಟ್ಟ.

ಕಳ್ಳನ ಕೈಯಲ್ಲಿ ಬೀಗದ ಕೈ ಕೊಟ್ಟರೆ ಹೇಗೆ ಎಂದು ಆಲೋಚಿಸಿ. ದುಷ್ಟನಾದ ವೇನನನ್ನೇ ಸಿಂಹಾಸನದಲ್ಲಿ ಕೂಡಿಸಿದರು. ವೇನ ರಾಜನಾದ.

**''ನ ಯಷ್ಟವ್ಯಂ ನ ಹೋತವ್ಯಂ ನ ದಾತವ್ಯಂ ದ್ವಿಜಾಃ ಕ್ವಚಿತ್''**

ಯಾಗ, ಹೋಮ, ದಾನಕ್ಕೆಲ್ಲಾ ನಿಷೇಧಾಜ್ಞೆ ಹೊರಡಿಸಿದ. ''ನಾನೇ ದೇವರು ನನಗಿಂತ ಬೇರೆ ದೇವರೇ ಇಲ್ಲ, ಎಲ್ಲಾ ಪೂಜೆ ಬಲಿ ನನಗೇ ಸಲ್ಲಬೇಕಾದ್ದು, ಇದು ರಾಜಾಜ್ಞೆ''. ಈ ನಾಸ್ತಿಕ ನೀತಿಯಿಂದ ನಾಡಿನ ನಾಗರಿಕರೆಲ್ಲಾ ನೊಂದು ಬೆಂದರು. ಋಷಿ

– ಮುನಿಗಳಿಗೂ ವೇನನ ವರ್ತನೆ ಇಷ್ಟವಾಗಲಿಲ್ಲ. ಸಿಂಹಾಸನದಲ್ಲಿ ಕೂಡಿಸಿದ ಋಷಿ – ಮುನಿಗಳೇ ಹುಂಕಾರದಿಂದ ಕೊಂದು ಹಾಕಿದರು. ತಪಸ್ಸಿನ ತಾಕತ್ತೇ ಅಂತದ್ದು. ವೇನನ ಪೀಡೆ ತೊಲಗಿತು. ಜನತೆ ಸಂಭ್ರಮ ಆಚರಿಸಿತು.

ಅಂಗನ ಕಥೆ ಕೇಳಿದ ಮೇಲೆ, ಹೊಸ ಸಮಸ್ಯೆ ತಲೆಯಲ್ಲಿ ಸುಳಿಯಲಾರಂಭಿಸಿದೆ. ಭಾಗವತವನ್ನು ಗಾಯತ್ರೀಭಾಷ್ಯರೂಪ ಎಂದು ಚಿಂತಿಸುವವರು ನಾವು. ಗಾಯತ್ರೀಯಲ್ಲಿ ಬರುವ ''ಸವಿತಾ'' ಎಂಬ ಶಬ್ದದ ವಿವರಣೆಗೆ ಹೊರಟದ್ದೇ ಚತುರ್ಥಸ್ಕಂಧ ಭಾಗವತ. ಸವಿತಾ ಅಂದರೆ ಯಜ್ಞಮಾಡಿದವನನ್ನು ರಕ್ಷಣೆ ಮಾಡುವವನೆಂದೇ ಅರ್ಥ. ಇದಕ್ಕೆ ವಿರುದ್ಧವಾದದ್ದು ಅಂಗರಾಜನ ಕಥೆ. ಯಾಗ ಮಾಡಿದ ಅಂಗರಾಜ ಯಾಕೆ ರಕ್ಷಿತನಾಗಲಿಲ್ಲ ಅನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತೆ. ಯಾಗದ ಫಲರೂಪವಾಗಿ ಪಾಪಿಯಾದ ವೇನ ಯಾಕೆ ಹುಟ್ಟಿದ? ಯಾಗದ ಫಲ ಇದೇನಾ ಅನ್ನುವುದು ನಮ್ಮ ಮುಂದಿರುವ ಪ್ರಶ್ನೆ.

ಯಾಗದಂಥ ಸತ್ಕಾರ್ಯಗಳು ಖಂಡಿತವಾಗಿಯೂ ಒಳಿತನ್ನೇ ಮಾಡುವಂಥದ್ದು. ಹಾಗಾಗಿ ಅಂಗರಾಜನಿಗೆ ಯಾಗದಲ್ಲಿ ಅಗ್ನಿಯ ಮಧ್ಯದಲ್ಲಿ ಭಗವಂತನೇ ಒಲಿದು ಬಂದು ಪಾಯಸ ಪ್ರಸಾದ ಕೊಟ್ಟದ್ದಕ್ಕನೇ ಪುತ್ರ ರಹಿತನಾದ ಅಂಗ ಪುತ್ರವಂತನಾದ. ಹಾಗಾಗಿ ಯಾಗದಂಥ ಒಳ್ಳೆಯ ಕೆಲಸ ನಿಷ್ಫಲವಾಗಲಿಲ್ಲ.

ದುರ್ಗುಣನಾದ ಮಗ ಯಾಕೆ ಹುಟ್ಟಿದ? ಸತ್ಪುತ್ರ ಯಾಕೆ ಹುಟ್ಟಲಿಲ್ಲ? ಅದಕ್ಕೆ ಮೊದಲೇ ಉತ್ತರಿಸಿದ್ದಾರೆ ಜನ್ಮಾಂತರದ ದುರಿತವೂ ಒಂದು ಪ್ರಧಾನ ಕಾರಣ.

ನಿಜವಾಗಿ ವೇನನು ಯಾಗದ ಫಲ ಅಲ್ಲ. ಸತ್ತ ವೇನನ ಶವ ಶರೀರದ ದಕ್ಷಿಣ ಭುಜವನ್ನು ಋಷಿಗಳೆಲ್ಲಾ ಸೇರಿ ಮಥಿಸಿದಾಗ ಆವಿರ್ಭವಿಸಿದ ಗಂಡು – ಹೆಣ್ಣು ಜೋಡಿಮಕ್ಕಳೇ ನಿಜವಾದ ಫಲ. ಗಂಡು ಅದೇ ಪೃಥು. ಹೆಣ್ಣು ಕೂಸೇ ಅರ್ಚಿಸ್. ಪೃಥುವಿನಲ್ಲಿ ಭಗವಂತನ ರಾಜರಾಜೇಶ್ವರ ರೂಪದ ವಿಶೇಷ ಸನ್ನಿಧಾನ. ಅರ್ಚಿಯಲ್ಲಿ ಮಹಾಲಕ್ಷ್ಮಿಯ ಅಪೂರ್ವ ಸನ್ನಿಧಿ. ಹಾಗಾಗಿ ಅಂಗರಾಜನ ಯಜ್ಞದಲ್ಲಿ ದೇವರು ಕೊಟ್ಟ ಪ್ರಸಾದ ನೇರವಾಗಿ ಸತ್ಫಲಪ್ರದವಾಗದಿದ್ದರೂ ಪರಂಪರೆಯಿಂದ ಅಂದರೆ ಮೊಮ್ಮಕ್ಕಳ ರೂಪದಿಂದ ಸರ್ವೋತ್ಕೃಷ್ಟ ಫಲವನ್ನು ನೀಡಿದ್ದಾನೆ. ದೇವರಲ್ಲಿ ವೈಷಮ್ಯಾದಿ ದೋಷಗಳಿಗೆ ಸ್ವಲ್ಪವೂ ಅವಕಾಶವಿಲ್ಲ. ಆದ್ದರಿಂದ ಸವ (ಯಾಗ) ಮಾಡಿದ ಸವಿ ಅಂದರೆ ಅಂಗರಾಜ. ಅವನನ್ನು ಸಮಸ್ಯೆಯ ಸಾಗರದಿಂದ ತಾರಣೆ ಮಾಡಿದ ದೇವರು ನಿಜವಾಗಿಯೂ ಸವಿತಾ. ಆದ್ದರಿಂದ ಭಾಗವತವು ಗಾಯತ್ರೀಭಾಷ್ಯರೂಪ ಹೌದು.

******

ಗ್ರಂಥವೆಂದರೆ ೩೨ ಅಕ್ಷರಗಳು, ದ್ವಾತ್ರಿಂಶಲ್ಲಕ್ಷಣೋಪೇತರಾದ ಶ್ರೀಮದಾಚಾರ್ಯರ ಸರ್ವಮೂಲ ಗ್ರಂಥಗಳು ಹಾಗೂ ಅವುಗಳ ವಿವರಣೆಗಳಿಗೆ ಗ್ರಂಥವೆಂಬ ಹೆಸರು ಅನ್ವರ್ಥವೆನಿಸುವುದು.

# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೪೩

## (ಅನುಗ್ರಹ ಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು**
**ಭಂಡಾರಕೇರಿಮಠ**

## ಪೂತನಾಜೀವಿತಹರಃ

ಪೂತಾನ್ ಋಷಿತಂತೂನ್ (ಋಷಿಬಾಲಕಾನ್) ನುದತಿ = ನಾಶಯತೀತಿ ಪೂತನಾ ಬಾಲಘಾತಿನೀ ತಾಟಕಾಖ್ಯಾ ರಾಕ್ಷಸೀ । ನಾಶನಾರ್ಥಕ'ನುದ್'ಧಾತೋಃ ಕರ್ತರಿ ಡಪ್ರತ್ಯಯೇ ಸತಿ ಡಿತ್‌ಕರಣಸಾಮರ್ಥ್ಯಾತ್ ''ನುದ್'' ಇತ್ಯತ್ರ ''ಉದ್'' ಇತಿ ಟೇಃ ಲೋಪೇ ಸತಿ ಸ್ತ್ರೀತ್ವವಕ್ಷಾಯಾಂ ಟಾಪ್‌ಪ್ರತ್ಯಯೇ ಸತಿ ''ಪೂತನಾ'' ಇತಿ ರೂಪಂ ಸಿದ್ಧ್ಯತಿ । ಋಷಿಬಾಲಕಾದೀನ್ ನಿಘ್ನಂತೀ ಪುರಗ್ರಾಮವ್ರಜಾದಿಷು ಪೂತನಾ ಚಚಾರೇತಿ ಭಾಗವತೇ ಉಕ್ತಮ್ –

> **ಕಂಸೇನ ಪ್ರಹಿತಾ ಘೋರಾ ಪೂತನಾ ಬಾಲಘಾತಿನೀ ।**
> **ಶಿಶೂಂಶ್ಚಚಾರ ನಿಘ್ನಂತೀ ಪುರಗ್ರಾಮವ್ರಜಾದಿಷು ॥ ಇತಿ (೧೦/೬/೨)**

ಅತ್ರ ಆದಿಪದೇನ ಋಷ್ಯಾಶ್ರಮಾದಿಕಂ ಗ್ರಾಹ್ಯಮ್ । ತದುಕ್ತಂ ಸುಮಧ್ವಜಯೇ –

> **ಮುನಿಸಪ್ತತಂತುಕೃತವೈರಬಂಧನಂ**
> **ಕಟುಕೇಶ್ಯರಿಷ್ಟಪದಮುಖ್ಯದುರ್ಜನಮ್ ।**
> **ಕ್ಷಪಯಂತಮುದ್ಯತಸುಬಾಹುಮಾಹವೇ .... ॥**

ಅತ್ರ ಮುನೀನಾಂ ಜಟಾ(ಚೂಡಾ)ಸಹಿತಬಾಲಕೇಷು ಕೃತದ್ವೇಷಾಃ ಕೇಶ್ಯರಿಷ್ಟ-ಪೂತನಾದಯಃ ತೇಷಾಂ ವಧಂ ಚಕ್ರುರಿತಿ ಸೂಚಿತಮ್ । ಅಥವಾ ಕೃಷ್ಣನಿರ್ಭುಕ್ತಸ್ತನ್ಯೇನ ಅಪಹತಪಾಪಾ ಕೃಷ್ಣಸ್ಪರ್ಶಪೂತಾತ್ ದಹ್ಯಮಾನಾತ್ ಸ್ವದೇಹತಃ ಪೂತಂ = ಅಗರು ಸೌರಭಂ ಪವಿತ್ರಂ ಧೂಮಂ ಸರ್ವದಿಕ್ಷು ನಯತೀತಿ ಪೂತನಾ ಪೂತನಾದೇಹಾವಿಷ್ಟಾ ಉರ್ವಶೀ ।

ಪ್ರಥಮತಃ ಉಕ್ತನಿರ್ವಚನಾನುಸಾರೇಣ ಪೂತನಾಶಬ್ದೇನ ಪೂತಋಷಿಸಂತಾನಘಾತಿನೀ ತಾಟಕಾ ಗೃಹ್ಯತೇ । ತಸ್ಯಾಃ ಜೀವಿತಂ = ಜೀವನಂ ಹರತೀತಿ ಪೂತನಾಜೀವಿತಹರಶಬ್ದೇನ ಭಗವಾನ್ ಶ್ರೀಕೃಷ್ಣಃ ಸಾರ್ಥಂ ನಿಗದ್ಯತೇ ।

ಅಥವಾ 'ಅಜೀವಿತಂ' ಇತಿ ಪದಂ ವಿಚ್ಛಿದ್ಯ ನ ವಿದ್ಯತೇ ಜೀವಿತಂ (ಜೀವನಂ) ಯಸ್ಮಾತ್ ತತ್ ಅಜೀವಿತಮಿತಿ ನಿಗದ್ಯತೇ । ಜೀವನಹಾರಿಸ್ತನ್ಯವಿಷಮೇವ ಅಜೀವಿತಮ್ । ತಸ್ಯಾಃ ತಾಟಕಾಯಾಃ ಸ್ತನಾಕ್ತವಿಷಂ ಚ ಪ್ರಾಣೇನ ಸಾಕಂ ಹರತೀತಿ ಶ್ರೀಕೃಷ್ಣಃ ಪೂತನಾಜೀವಿತಹರ ಇತಿ ಸಾರ್ಥಂ ನಿಗದ್ಯತೇ । ತಥಾ ಚೋಕ್ತಂ ದಶಮೇ ಭಾಗವತೇ –

**ತಸ್ಮಿನ್ ಸ್ತನಂ ದುರ್ಜರವೀರ್ಯಮುದ್ಬಣಂ ಘೋರಾಂಕಮಾದಾಯ ಶಿಶೋರ್ದದಾವಥ।**
**ಗಾಢಂ ಕರಾಭ್ಯಾಂ ಭಗವಾನ್ ಪ್ರಪೀಡ್ಯ ತತ್ಪ್ರಾಣೈಃ ಸಮಂ ರೋಷಸಮನ್ವಿತೋಽಪಿಬತ್ ॥**
ಇತಿ (೧೦/೭/೧೧)

ಅಥವಾ ಉಕ್ತನಿರ್ವಚನಾನುಸಾರೇಣ 'ಪೂತನಾ'ಶಬ್ದೇನ ಉರ್ವಶೀ ಗೃಹ್ಯತೇ । ತಸ್ಯಾಃ ಅಜೀವಿತಂ = ಅಪ್ರಶಸ್ತಜೀವನಂ (ತಾಟಕಯಾ ಸಾಕಂ ಏಕಸ್ಮಿನ್ ದೇಹೇ ಜೀವನಂ) ತದ್ದೇಹಾತ್ ವಿಮೋಚ್ಯ ಹರತೀತಿ ಪೂತನಾಜೀವಿತಹರ ಇತಿ ಭಗವಾನ್ ಶ್ರೀಕೃಷ್ಣಃ ಸಾರ್ಥಂ ಕೀರ್ತಿತಃ ।

**'ಸಾದೃಶ್ಯಂ ತದಭಾವಶ್ಚ ತದನ್ಯತ್ವಂ ತದಲ್ಪತಾ ।**
**ಅಪ್ರಾಶಸ್ತ್ಯಂ ವಿರೋಧಶ್ಚ ನಞರ್ಥಾಃ ಷಟ್ ಪ್ರಕೀರ್ತಿತಾಃ ॥'**

ಇತಿ ವಚನಾತ್ ಅಜೀವಿತಮಿತ್ಯತ್ರ ನಞಃ ಅಪ್ರಾಶಸ್ತ್ಯರೂಪಾರ್ಥಃ ಪ್ರಾಮಾಣಿಕತ್ವಾತ್ ಸಾಧುರಿತಿ ಬೋಧ್ಯಮ್ ।

ಅಥವಾ ಪೂತಂ = ಸ್ವಲೋಕಪ್ರಾಪ್ತಿಸಾಧನಯಜ್ಞಾಂಗಾಗ್ನಿಸ್ಥಾಪನಪಾತ್ರವಿಶೇಷಂ (ಅಗ್ನಿಸ್ಥಾಲೀಂ) ಸ್ವಪ್ರೇರಿತಪುರೂರವಃಕರ್ತೃಕಸ್ತುತಿಪ್ರಸನ್ನಗಂಧರ್ವದ್ವಾರಾ ನಯತಿ = ಪುರೂರವಸಂ ಪ್ರಾಪಯತೀತಿ ಪೂತನಾ = ಉರ್ವಶೀ । ಸಾ ಹಿ ಸ್ವಪ್ರಾಪ್ತ್ಯರ್ಥಂ ಗಂಧರ್ವಾನ್ ಸ್ತೋಷ್ಟುಂ ಪುರೂರವಸಂ ಪ್ರೇರಯತಿ । ತದಾ ತೇನ ಸ್ತುತೌ ಕೃತಾಯಾಂ ಪ್ರಸನ್ನಾ ಗಂಧರ್ವಾಃ ತಸ್ಮೈ ''ಅನೇನ ಅಗ್ನಿನಾ ಯಜ್ಞಂ ಕೃತ್ವಾ ಉರ್ವಶೀಲೋಕಂ ಪ್ರಾಪ್ನುಹಿ'' ಇತ್ಯನುಗ್ರಹೇಣ ಪೂತಂ (ಪವಿತ್ರಂ) ಅಗ್ನಿಸ್ಥಾಲ್ಯಾಖ್ಯಪಾತ್ರವಿಶೇಷಂ ದದುಃ ಇತಿ ನವಮೇ ಭಾಗವತೇ । ತಸ್ಮಾತ್ ಪೂತಂ ಪತ್ರಾಗ್ನಿಸ್ಥಾಪನಪಾತ್ರವಿಶೇಷಂ ಅಥವಾ ಯಜ್ಞಾಂಗಾಗ್ನಿಂ ವಾ ನಯತಿ ಪ್ರಾಪಯತಿ ಪುರೂರವಸಂ ಗಂಧರ್ವಮುಖೇನ ಇತಿ ಪೂತನಾ ಉರ್ವಶೀತಿ ಸಾಧೂಕ್ತಮ್ । ಶಿಷ್ಟಾರ್ಥಸ್ತು ಪೂರ್ವೋಕ್ತ ಏವೇತಿ ಬೋಧ್ಯಮ್।

ಅಥವಾ ಪೂತಾ ನ ಯಸ್ಯಾಃ ಸಾ ಪೂತನಾ – ಜೀವಗುಣಾಚ್ಛಾದಿಕಾ ದುಷ್ಟಪ್ರಕೃತಿಃ । ತಸ್ಯಾಃ ಪ್ರಭಾವಾದೇವ ಹಿ ಸಜ್ಜೀವಾಃ ಸಂಸಾರಮಲನಿರ್ಮುಕ್ತತ್ವೇನ ಪೂತಾಃ ಪವಿತ್ರಾಃ ನ ಭವಂತಿ । ತಸ್ಮಾತ್ ಸಾ ಪ್ರಕೃತಿಃ ''ಪೂತನಾ'' ಇತಿ ಸಾರ್ಥಂ ನಿಗದ್ಯತೇ । ಪೂತನಾ ಇತ್ಯತ್ರ ನಞ್ ನ । ನಿಷೇಧಾರ್ಥಕ–ನ ಇತಿ ಅವ್ಯಯಂ ಇತಿ ಬೋಧ್ಯಮ್ । 'ಅಮಾನೋನಾಃ ಪ್ರತಿಷೇಧೇ' ಇತ್ಯುಕ್ತೇಃ । ತಸ್ಯಾಃ ಸಜ್ಜೀವಗುಣಾಚ್ಛಾದಿಕಾಯಾಃ ಪ್ರಕೃತೇಃ ಜೀವಿತಮಪಿ ಹರತಿ (ತಾಮಪಿ ವಿನಾಶಯತಿ) ಇತಿ ಅಯಂ ಭಗವಾನ್ ಬಾಲಕೃಷ್ಣಃ ಪೂತನಾಜೀವಿತಹರ ಇತಿ ಸಾರ್ಥಂ ನಿಗದ್ಯತೇ ।

ಅಯಮತ್ರಾಶಯಃ ।

**'ಅಥಾನ್ಯೇ ಪ್ರಕೃತೀ ದುಷ್ಟೇ ನೃಷು ಪ್ರಾತಿಸ್ವಿಕಂ ಸ್ಥಿತೇ ।**
**ಸ್ವಗುಣಾಚ್ಛಾದಿಕಾ ತ್ವೇಕಾ ಪರಮಾಚ್ಛಾದಿಕಾಪರಾ ।**
**ಸ್ವಗುಣಾಚ್ಛಾದಿಕಾಂ ಹತ್ವಾ ಪರಮಾಚ್ಛಾದಿಕಾಂ ಪರಃ ।**
**ವ್ಯಾಘುಟ್ಯ ಮೋಕ್ಷಪದಂ ದದಾತಿ ಪುರುಷೋತ್ತಮಃ ॥'**

ಇತಿ ಭಾಗವತತಾತ್ಪರ್ಯೋದಾಹೃತ'ಮಹಾತತ್ತ್ವವೇಕ'ವಚನೋಕ್ತದಿಶಾ,

'ಮೋಕ್ಷಾಧಿಕಾರಿಣಾಮೇವ ಜ್ಞಾನೈಶ್ವರ್ಯಾದಯೋ ಗುಣಾಃ ।
ತಾನ್ ಸಮಾಚ್ಛಾದಯತ್ಯೇಕಾ ತಮೋಗಾ ಸಾ ಪ್ರಕೀರ್ತಿತಾ ।
ಜೀವಂ ಪ್ರತಿ ಮಹಾಷ್ಣುಂ ಯಾ ತ್ವಾಚ್ಛಾದಯತಿ ಪ್ರಭೋ ।
ಸಾಽಪರಾ ಪ್ರಕೃತಿರ್ಜ್ಞೇಯಾ ಪರಮಾಚ್ಛಾದಿಕಾ ಸ್ಮೃತಾ ।
ತತ್ರ ವಿಷ್ಣೋ ಮಹಾಭಾಗ ಸ್ವಗುಣಾಚ್ಛಾದಿಕಾಂ ಹನ ।
ಪರಮಾಚ್ಛಾದಿಕಾಂ ದುಷ್ಟಾಂ ವ್ಯಾಘುಟ್ಯ (ಅಪಸಾರ್ಯ) ಚ ಮಹಾಪ್ರಭೋ ।
ಮೋಕ್ಷಂ ದೇಹಿ ಮಹಾಭಾಗ ತ್ವದ್ಭಕ್ತಾನಾಂ ಸದಾತ್ಮನಾಮ್ ॥

ಇತಿ ವಿಷ್ಣುರಹಸ್ಯೋಕ್ತದಿಶಾ ಚ ಭಗವಾನ್ ಪರಮಾಚ್ಛಾದಿಕಾಂ ದುಷ್ಟಾಂ ಪ್ರಕೃತಿಂ ನಿತ್ಯಸಂಸಾರಿತ್ವೇನ ಜೀವದೇಹಾತ್ ಕೇವಲಂ ಅಪಸಾರ್ಯ (ನ ತು ಹತ್ವಾ, ತಮೋಗಮಯತೀತಿ ಭಾವಃ) ಸಜ್ಜೀವಸದ್ಗುಣಾಚ್ಛಾದಿಕಾಂ ತಮೋಗಾಂ ದುಷ್ಟಾಂ ಪ್ರಕೃತಿಂ ತು ಹತ್ವಾ ತಮೋ ಗಮಯತಿ, ತತಃ ಸಜ್ಜೀವಾನಾಂ ಮೋಕ್ಷಪದವೀಂ ದದಾತಿ ಇತಿ ।

ಏವಂ ಚ ಭಗವಾನ್ ಬಾಲಕೃಷ್ಣಃ ನ ಕೇವಲಂ ಕಂಸಧಾತ್ರಿಪೂತನಾಜೀವಿತಹರಣೇನ ತತ್ಪೀಡಾಯಾಃ ಸಜ್ಜನಾನ್ ಮೋಚಯಿತ್ವಾ ಆನಂದಯತಿ, ಅಪಿ ತು ಸಜ್ಜೀವಗುಣಾ-ಚ್ಛಾದಿಕಾಂ ದುಷ್ಟಪ್ರಕೃತಿಪೂತನಾಮಪಿ ಹತ್ವಾ ತತ್ಪೀಡಾಯಾಃ ಸಜ್ಜನಾನ್ ಮೋಚಯಿತ್ವಾ ಆನಂದಯತಿ ಇತಿ ಪೂತನಾಜೀವಿತಹರಶಬ್ದಸ್ಯ ತಾತ್ಪರ್ಯಂ ಇತಿ ಸಿದ್ಧಮ್ ।

*****

## ಪೂತನಾಜೀವಿತಹರಃ

ಪೂತಾನ್ ಋಷಿತಂತೂನ್ (ಋಷಿಬಾಲಕಾನ್) ನುದತಿ = ನಾಶಯತಿ ಇತಿ ''ಪೂತನಾ'' ಇತಿ ನಿರ್ವಚನಾನುಸಾರೇಣ ಬಾಲಘಾತಿನೀ ತಾಟಕಾಖ್ಯಾ ರಾಕ್ಷಸೀ ಗೃಹ್ಯತೇ । ಪವಿತ್ರಋಷಿಸಂತಾನವನ್ನು ನಾಶಪಡಿಸುವುದರಿಂದ ''ಪೂತನಾ'' ಶಬ್ದದಿಂದ ತಾಟಕಾರೂಪಿ-ರಾಕ್ಷಸಿಯನ್ನು ಸ್ವೀಕರಿಸಬೇಕು. ವಿನಾಶನ ಎಂಬರ್ಥವನ್ನು ನೀಡುವ ನುದ್ ಧಾತುವಿನ ಮೇಲೆ ಕರ್ತೃ ಅರ್ಥದಲ್ಲಿ ಡಪ್ರತ್ಯಯ ಬಂದು ''ನುದ್''ನ ''ಉದ್'' ಎಂಬ ''ಟಿ''ಗೆ ಲೋಪವಾದ ಬಳಿಕ ಸ್ತ್ರೀತ್ವವಿವಕ್ಷೆಯಿಂದ ಟಾಪ್‌ಪ್ರತ್ಯಯವನ್ನು ಸ್ವೀಕರಿಸಿದರೆ ''ಪೂತನಾ'' ಎಂಬ ರೂಪವು ಸಿದ್ಧವಾಗುತ್ತದೆ. ಋಷಿಬಾಲಕಾದಿಗಳನ್ನು ಕೊಲ್ಲುತ್ತಾ ಪೂತನೆಯು ಪುರ ಗ್ರಾಮ ವ್ರಜ ಆಶ್ರಮಾದಿಗಳಲ್ಲಿ ಸಂಚರಿಸಿದಳೆಂದು ಭಾಗವತವು ಹೇಳುತ್ತದೆ –

**ಕಂಸೇನ ಪ್ರಹಿತಾ ಘೋರಾ ಪೂತನಾ ಬಾಲಘಾತಿನೀ ।**
**ಶಿಶೂಂಶ್ಚಚಾರ ನಿಘ್ನಂತೀ ಪುರಗ್ರಾಮವ್ರಜಾದಿಷು ॥ ಇತಿ (೧೦/೬/೨)**

ಇಲ್ಲಿ ಆದಿಪದದಿಂದ ಋಷ್ಯಾಶ್ರಮಾದಿಗಳನ್ನು ಸ್ವೀಕರಿಸಬೇಕು. ಇನ್ನೂ ಚೂಡಾ-ಕರ್ಮಸಂಸ್ಕಾರವಾಗದ ಚೂಡೆಯಿಂದ ಕೂಡಿದ ಪವಿತ್ರಋಷಿಕುಮಾರಾದಿಗಳನ್ನು ಪೂತನಾ, ಕೇಶಿ, ಅರಿಷ್ಟಾಸುರ ಮುಂತಾದ ಕಂಸನ ಪರಿವಾರದ ದೈತ್ಯರು ಸಂಹರಿಸಿದರೆಂದು ಸುಮಧ್ವಜಯದಲ್ಲಿ ಉಲ್ಲೇಖವಿದೆ –

**ಮುನಿಸಪ್ತತಂತುಕೃತವೈರಬಂಧನಂ ಕಟುಕೇಶ್ಯರಿಷ್ಟಪದಮುಖ್ಯದುರ್ಜನಮ್ ।**
**ಕ್ಷಪಯಂತಮುದ್ಯತಸುಬಾಹುಮಾಹವೇ .... ॥** ಇತಿ ।

ಇಲ್ಲಿ ಮುನಿಗಳ ಜಟಾಸಹಿತವಾದ ಸಂತಾನದಲ್ಲಿ ದ್ವೇಷಭಾವವನ್ನು ಹೊಂದಿದ ಈ ಹಿಂದೆ ಹೇಳಿದ ಪೂತನಾದಿದುಷ್ಟರು ಪುರಗ್ರಾಮಾದಿಗಳನ್ನು ಸಂಚರಿಸಿ ಅಲ್ಲಿನ ಬಾಲಕರನ್ನು ಸಂಹರಿಸಿದರೆಂದು ಸೂಚಿತವಾಗಿದೆ.

ಅಥವಾ ಶ್ರೀಕೃಷ್ಣನಿಂದ ಕುಡಿಯಲ್ಪಟ್ಟ ಸ್ತನ್ಯಕ್ಷೀರವುಳ್ಳ ಪೂತನೆ (ಆಕೆಯಲ್ಲಿರುವ ಊರ್ವಶೀ) ಪಾಪದೂರಳಾದಳು. ಕೃಷ್ಣಾಂಗಸ್ಪರ್ಶದಿಂದ ದೇಹಪಾವಿತ್ರ್ಯವನ್ನು ಪಡೆದ ಆಕೆ ತನ್ನ ದೇಹವನ್ನು ಸುಡುವ ಕಾಲದಲ್ಲಿ ಆ ದೇಹದಿಂದ ಅಗರುಬತ್ತಿಪರಿಮಳಭರಿತವಾದ ಪವಿತ್ರಧೂಮವನ್ನು ಎಲ್ಲೆಡೆ ಪಸರಿಸಿದಳು. ಈ ನಿಮಿತ್ತ ''ಪೂತಂ = ಅಗರುಸೌರಭಂ ಪವಿತ್ರಂ ಧೂಮಂ ನಯತಿ ಸರ್ವತ್ರ ಇತಿ ಪೂತನಾ'' ಎಂಬ ನಿರ್ವಚನಾನುಸಾರವಾಗಿ ಪೂತನಾಪದದಿಂದ ಊರ್ವಶಿಯನ್ನು ಸ್ವೀಕರಿಸುವುದು ಯುಕ್ತವಾಗಿದೆ.

ಪೂರ್ವದಲ್ಲಿ ಹೇಳಿದ ಪ್ರಥಮನಿರ್ವಚನಾನುಸಾರವಾಗಿ ಪೂತನಾಶಬ್ದದಿಂದ ಪವಿತ್ರಋಷ್ಯಾದಿಬಾಲಕರನ್ನು ಸಂಹರಿಸಿದ ಪೂತನಾದೇಹಾವಿಷ್ಟಳಾದ ತಾಟಕೆಯನ್ನು ಸ್ವೀಕರಿಸಬೇಕು. ''ತಸ್ಯಾಃ ಪೂತನಾಯಾಃ ಜೀವಿತಂ = ಜೀವನಂ, ಹರತಿ = ದೂರೀಕರೋತಿ'' ಎಂಬ ವಿಗ್ರಹಾನುಸಾರವಾಗಿ ಪೂತನಾದೇಹಾವಿಷ್ಟಳಾದ ತಾಟಕೆಯ ಪ್ರಾಣವನ್ನು ಹರಣ ಮಾಡಿದ ಭಗವಾನ್ ಶ್ರೀಕೃಷ್ಣನು ಪೂತನಾಜೀವಿತಹರ ಶಬ್ದದಿಂದ ಕೀರ್ತಿತನಾಗಿದ್ದಾನೆ. ಅಥವಾ ''ಪೂತನಾ+ಅಜೀವಿತಂ'' ಎಂಬುದಾಗಿ ಪದಗಳನ್ನು ವಿಂಗಡಿಸಿಕೊಂಡರೆ ಇಲ್ಲಿ ಇನ್ನೊಂದು ಮುಖದ ಅರ್ಥವನ್ನೂ ಹೇಳಬಹುದು. ''ನ ವಿದ್ಯತೇ ಜೀವಿತಂ ಯಸ್ಮಾತ್ ತತ್ ಅಜೀವಿತಂ'' ಎಂಬುದಾಗಿ ಬಹುವ್ರೀಹಿಸಮಾಸವನ್ನು ಸ್ವೀಕರಿಸಿದರೆ 'ಅಜೀವಿತ' ಪದವು ಜೀವನಕ್ಕೆ ಕುತ್ತು ತರುವ ಪೂತನಾಸ್ತನ್ಯಕಾಲಕೂಟವಿಷವನ್ನು ಹೇಳುತ್ತದೆ. ಅಜೀವಿತ ಎನಿಸಿದ ಅಂತಹ ವಿಷವನ್ನು ಕೂಡಾ ಭಗವಾನ್ ಶ್ರೀಕೃಷ್ಣನು ಪ್ರಾಣದ ಜೊತೆಗೆ ಹರಣ ಮಾಡಿದ್ದಾನೆ –

**ತಸ್ಮಿನ್ ಸ್ತನಂ ದುರ್ಜರವೀರ್ಯಮುಲ್ಬಣಂ ಘೋರಾಂಕಮಾದಾಯ ಶಿಶೋರ್ದದಾವಥ ।**
**ಗಾಢಂ ಕರಾಭ್ಯಾಂ ಭಗವಾನ್ ಪ್ರಪೀಡ್ಯ ತತ್ಪ್ರಾಣೈಃ ಸಮಂ ರೋಷಸಮನ್ವಿತೋಽಪಿಬತ್ ॥**
– ಇತಿ (೧೦/೭/೧೧)

ಹೀಗಾಗಿ ''ಪೂತನಾಯಾಃ ಅಜೀವಿತಂ (ವಿಷಂ) ಹರತೀತಿ ಪೂತನಾಜೀವಿತಹರಃ'' ಎಂಬ ನಿರ್ವಚನಾನುಸಾರ ''ಪೂತನಾಜೀವಿತಹರ'' ಶಬ್ದದಿಂದ ಪೂತನೆಯ (ತಾಟಕೆಯ) ಪ್ರಾಣದ ಜೊತೆಗೆ ವಿಷವನ್ನೂ ಹರಣ ಮಾಡಿದ ಭಗವಾನ್ ಶ್ರೀಕೃಷ್ಣನನ್ನು ಸ್ವೀಕರಿಸುವುದು ಸಮಂಜಸವಾಗುತ್ತದೆ.

ಅಥವಾ ಹಿಂದೆ ಹೇಳಿದ ಎರಡನೇ ನಿರ್ವಚನಾನುಸಾರವಾಗಿ ಪೂತನಾಶಬ್ದದಿಂದ ಊರ್ವಶಿಯನ್ನು ಸ್ವೀಕರಿಸಬಹುದು. ಪೂತನಾಯಾಃ = ಊರ್ವಶ್ಯಾಃ ಅಜೀವಿತಂ = ಅಪ್ರಶಸ್ತಜೀವನವನ್ನು ಅರ್ಥಾತ್ ತಾಟಕಾರಾಕ್ಷಸಿಯ ಜೊತೆಗೆ ಏಕದೇಹದಲ್ಲಿ ಜೀವನವನ್ನು

ಹರತಿ = ದೂರಮಾಡುತ್ತಾನೆ ಎಂಬ ನಿರ್ವಚನಾನುಸಾರವಾಗಿ ಪೂತನಾಜೀವಿತಹರ – ಶಬ್ದದಿಂದ ತನ್ನ ಭಕ್ತೆಯಾದ ಉರ್ವಶಿಯ ತಾಟಕಾಸಹವಾಸಜೀವನವನ್ನು ದೇಹದಿಂದ ಬಿಡುಗಡೆಗೊಳಿಸಿ ದೂರಮಾಡಿದ ಭಗವಾನ್ ಬಾಲಕೃಷ್ಣನು ಅನ್ವರ್ಥವಾಗಿಯೇ ಕೀರ್ತಿತನಾಗಿದ್ದಾನೆ. ''ಅಜೀವಿತಂ'' ಎಂಬ ಪದದಲ್ಲಿ ಘಟಕವಾದ ನಞ್‌ಗೆ ಅಪ್ರಾಶಸ್ತ್ಯ ಎಂಬ ಅರ್ಥವು –

**'ಸಾದೃಶ್ಯಂ ತದಭಾವಶ್ಚ ತದನ್ಯತ್ವಂ ತದಲ್ಪತಾ ।**
**ಅಪ್ರಾಶಸ್ತ್ಯಂ ವಿರೋಧಶ್ಚ ನಞರ್ಥಾಃ ಷಟ್ ಪ್ರಕೀರ್ತಿತಾಃ ॥'**

ಎಂಬ ವಚನಾನುಸಾರ ಪ್ರಾಮಾಣಿಕವಾದುದರಿಂದ ಅಜೀವಿತಪದಕ್ಕೆ ''ಅಪ್ರಶಸ್ತಜೀವನ'' ಎಂಬ ವಿವರಣೆ ಸಮಂಜಸವೆನಿಸುತ್ತದೆ.

ಅಥವಾ ಇನ್ನೊಂದು ಮುಖದ ನಿರ್ವಚನಾನುಸಾರವಾಗಿ ಪೂತನಾಶಬ್ದದಿಂದ ಉರ್ವಶಿಯನ್ನು ಸ್ವೀಕರಿಸಬಹುದು. ಪೂತಂ = ತನ್ನ ಲೋಕದ ಪ್ರಾಪ್ತಿಗೆ ಸಾಧನವಾದ ಯಜ್ಞಕ್ಕೆ ಅಂಗವಾದ ಅಗ್ನಿಯ ಸ್ಥಾಪನಪಾತ್ರವಿಶೇಷವನ್ನು ತನ್ನಿಂದ ಪ್ರೇರಿತನಾದ ಪುರೂರವಸ್ಸಿನಿಂದ ಮಾಡಿದ ಸ್ತುತಿಯಿಂದ ಪ್ರಸನ್ನರಾದ ಗಂಧರ್ವರ ದ್ವಾರಾ ನಯತಿ = ಪುರೂರವಸ್ಸಿಗೆ ಪ್ರಾಪ್ತವಾಗುವಂತೆ ಮಾಡುತ್ತಾಳೆ. ಹೀಗಾಗಿ ಈ ನಿರ್ವಚನಾನುಸಾರ ಪೂತನಾಶಬ್ದದಿಂದ ಉರ್ವಶಿಯನ್ನು ಸ್ವೀಕರಿಸಬಹುದು. ಉರ್ವಶಿಯು ತನ್ನಲ್ಲಿ ಮೋಹಿತನಾದ ಪುರೂರವಸ್ಸಿಗೆ ತನ್ನ ಪ್ರಾಪ್ತಿಗೋಸ್ಕರ ಗಂಧರ್ವರನ್ನು ಸ್ತೋತ್ರ ಮಾಡಲು ಪ್ರೇರಿಸುತ್ತಾಳೆ. ಈ ಪ್ರೇರಣಾನುಸಾರ ಆತ ಗಂಧರ್ವರನ್ನು ಸ್ತುತಿಸಿದಾಗ ಗಂಧರ್ವರು ಪ್ರಸನ್ನರಾಗಿ ''ಈ ಅಗ್ನಿಯಿಂದ ಯಜ್ಞವನ್ನು ಮಾಡಿ ಉರ್ವಶಿಯ ಲೋಕವನ್ನು ಹೊಂದು'' ಎಂಬ ಅನುಗ್ರಹಬುದ್ಧಿಯಿಂದ ಆತನಿಗೆ ಅಗ್ನಿಸ್ಥಾಪನಪತ್ರಪಾತ್ರವಿಶೇಷವನ್ನು ಅನುಗ್ರಸಿದ್ದಾರೆ. ಈ ವಿಷಯ ನವಮಭಾಗವತದಲ್ಲಿ ಪ್ರತಿಪಾದಿತವಾಗಿದೆ.

ಹೀಗಾಗಿ ''ಪೂತಂ = ಪವಿತ್ರಂ ಅಗ್ನಿಸ್ಥಾಪನಪಾತ್ರವಿಶೇಷಂ ಅಥವಾ ಯಜ್ಞಾಂಗಾಗ್ನಿಂ ವಾ ನಯತಿ ಪ್ರಾಪಯತಿ ಪುರೂರವಸಂ ಗಂಧರ್ವಮುಖೇನ ಇತಿ ಪೂತನಾ'' ಎಂಬ ನಿರ್ವಚನಾನುಸಾರ ಪೂತನಾಶಬ್ದದಿಂದ ಉರ್ವಶಿಯ ಸ್ವೀಕಾರವು ಸಮಂಜಸವಾಗುತ್ತದೆ. ಉಳಿದ ಅರ್ಥವನ್ನು ಹಿಂದೆ ಹೇಳಿದಂತೆ ಸ್ವೀಕರಿಸಬೇಕು.

ಅಥವಾ ''(ಸಜ್ಜೀವಾಃ) ಪೂತಾಃ ನ ಯಸ್ಯಾಃ ಸಾ ಪೂತನಾ'' ಎಂಬ ವಿಗ್ರಹಾನುಸಾರ ಪೂತನಾಶಬ್ದವು ಸದ್ಗುಣಾಚ್ಛಾದಕವಾದ ದುಷ್ಟಪ್ರಕೃತಿಯನ್ನು ಹೇಳುತ್ತದೆ. ಈ ದುಷ್ಟಪ್ರಕೃತಿಯ ಪ್ರಭಾವದಿಂದಲೇ ಸಜ್ಜೀವರು ಸಂಸಾರಮಲದಿಂದ ನಿರ್ಮುಕ್ತರಾಗಿ ಪವಿತ್ರರಾಗುವುದಿಲ್ಲ. ಹೀಗಾಗಿ ಪೂತನಾಶಬ್ದದಿಂದ ಆ ದುಷ್ಟಪ್ರಕೃತಿಯು ಅನ್ವರ್ಥವಾಗಿ ಪ್ರತಿಪಾದಿತವಾಗಿದೆ. ''ಪೂತನಾ'' ಎಂಬ ಶಬ್ದದಲ್ಲಿ ಘಟಕವಾದ ''ನ'' ಎನ್ನುವುದು ನಞ್ ಅಲ್ಲ. ನಿಷೇಧಾರ್ಥಕ ''ನ'' ಎಂಬ ಅವ್ಯಯವೆಂದು ಸ್ವೀಕರಿಸಬೇಕು. ''ಅಮಾನೋನಾಃ ಪ್ರತಿಷೇಧೇ'' ಎಂಬ ವಿದ್ವಾಂಸರ ನುಡಿಯು ನಿಷೇಧಾರ್ಥಕ ''ನ'' ಎಂಬ ಅವ್ಯಯವಿದೆಂದು ತೋರಿಸಿದೆ.

ಒಟ್ಟಿನಲ್ಲಿ ಹಿಂದೆ ಹೇಳಿದ ರೀತಿಯಲ್ಲಿ ಪೂತನಾಶಬ್ದದಿಂದ ಜೀವಸದ್ಗುಣಗಳನ್ನು ಆವರಿಸುವ ದುಷ್ಟಪ್ರಕೃತಿಯೂ ಉಕ್ತವಾಗಿದೆ. ಆ ದುಷ್ಟಪ್ರಕೃತಿರೂಪ ಪೂತನೆಯ (ಅದು ದುಷ್ಟಚೇತನವಾದುದರಿಂದ) ಜೀವಿತ = ಜೀವನವನ್ನು ಹರಣ ಮಾಡುವುದರಿಂದ ಪೂತನಾಜೀವಿತಹರಶಬ್ದದಿಂದ ಭಗವಾನ್ ಬಾಲಕೃಷ್ಣನು ಕೀರ್ತಿತನಾಗಿದ್ದಾನೆ.

''ಪೂತನಾಜೀವಿತಹರ'' ಎಂಬ ಶಬ್ದದ ಒಟ್ಟು ಸಾರಾಂಶ –

**'ಅಥಾನ್ಯೇ ಪ್ರಕೃತೀ ದುಷ್ಟೇ ನೃಷು ಪ್ರಾತಿಸ್ವಿಕಂ ಸ್ಥಿತೇ ।**
**ಸ್ವಗುಣಾಚ್ಛಾದಿಕಾ ತ್ವೇಕಾ ಪರಮಾಚ್ಛಾದಿಕಾಪರಾ ।**
**ಸ್ವಗುಣಾಚ್ಛಾದಿಕಾಂ ಹತ್ವಾ ಪರಮಾಚ್ಛಾದಿಕಾಂ ಪರಃ ।**
**ವ್ಯಾಘುಟ್ಯ ಮೋಕ್ಷಪದೇಂ ದದಾತಿ ಪುರುಷೋತ್ತಮಃ ॥'**

ಇತಿ ಭಾಗವತತಾತ್ಪರ್ಯದಲ್ಲಿ ತೋರಿಸಿದ ವಿವರಣೆಗನುಸಾರವಾಗಿ ಮತ್ತು –

**'ಮೋಕ್ಷಾಧಿಕಾರಿಣಾಮೇವ ಜ್ಞಾನೈಶ್ವರ್ಯಾದಯೋ ಗುಣಾಃ ।**
**ತಾನ್ ಸಮಾಚ್ಛಾದಯತ್ಯೇಕಾ ತಮೋಗಾ ಸಾ ಪ್ರಕೀರ್ತಿತಾ ।**
**ಜೀವಂ ಪ್ರತಿ ಮಹಾಷ್ಣುಂ ಯಾ ತ್ವಾಚ್ಛಾದಯತಿ ಪ್ರಭೋ ।**
**ಸಾಽಪರಾ ಪ್ರಕೃತಿರ್ಜ್ಞೇಯಾ ಪರಮಾಚ್ಛಾದಿಕಾ ಸ್ಮೃತಾ ।**
**ತತ್ರ ವಿಷ್ಣೋ ಮಹಾಭಾಗ ಸ್ವಗುಣಾಚ್ಛಾದಿಕಾಂ ಹನ ।**
**ಪರಮಾಚ್ಛಾದಿಕಾಂ ದುಷ್ಟಾಂ ವ್ಯಾಘುಟ್ಯ (ಅಪಸಾರ್ಯ) ಚ ಮಹಾಪ್ರಭೋ ।**
**ಮೋಕ್ಷಂ ದೇಹಿ ಮಹಾಭಾಗ ತ್ವದ್ಭಕ್ತಾನಾಂ ಸದಾತ್ಮನಾಮ್ ॥**

ಎಂಬ ವಿಷ್ಣುರಹಸ್ಯದಲ್ಲಿ ತೋರಿಸಿದ ವಿವರಣೆಗನುಸಾರವಾಗಿ ಭಗವಂತನು ಭಗವತ್ ಸ್ವರೂಪಾವರಕವಾದ ದುಷ್ಟಪ್ರಕೃತಿಯನ್ನು ನಿತ್ಯಸಂಸಾರಿಯಾದುದರಿಂದ ಜೀವದೇಹದಿಂದ ಕೇವಲ ದೂರ ಸರಿಸಿ (ಕೊಂದು ತಮಸ್ಸಿಗೆ ಕಳುಹಿಸುವುದಿಲ್ಲ) ಸಜ್ಜೀವಸದ್ಗುಣಾವರಕವಾದ ದುಷ್ಟಪ್ರಕೃತಿಯು ತಮೋಯೋಗ್ಯವಾದುದರಿಂದ ಅದನ್ನು ಕೊಂದು ತಮಸ್ಸಿಗೆ ಕಳುಹಿಸು–ತ್ತಾನೆ. ಬಳಿಕ ಸಜ್ಜೀವರಿಗೆ ಮೋಕ್ಷವನ್ನು ಕರುಣಿಸುತ್ತಾನೆಂದು.

ಒಟ್ಟಿನಲ್ಲಿ ಭಗವಾನ್ ಬಾಲಕೃಷ್ಣನು ಕೇವಲ ಕಂಸನ ಸಾಕುತಾಯಿಯಾದ ಪೂತನೆಯ ಪ್ರಾಣವನ್ನು ಹರಣಮಾಡಿ ಅವಳ ಪೀಡೆಯಿಂದ ಸಜ್ಜನರನ್ನು ಮುಕ್ತಿಗೊಳಿಸಿ ಆನಂದವನ್ನು ನೀಡುವುದಿಲ್ಲ, ಮತ್ತೇನೆಂದರೆ ಸಜ್ಜೀವರ ಸದ್ಗುಣಾವರಕವಾದ ದುಷ್ಟಪ್ರಕೃತಿಪೂತನೆಯನ್ನು ಸಂಹರಿಸಿ ಈ ಪೂತನೆಯ ಪೀಡೆಯಿಂದಲೂ ಸಜ್ಜನರನ್ನು ಮುಕ್ತಿಗೊಳಿಸಿ ಅವರಿಗೆ ಆನಂದವನ್ನು ನೀಡುತ್ತಾನೆ. ಆದುದರಿಂದ ಆತ 'ಪ್ರಕೃತಿಪೂತನಾಬಂಧಮೋಚಕಪರಬ್ರಹ್ಮ' ವೆನ್ನುವುದು ''ಪೂತನಾಜೀವಿತಹರ'' ಎಂಬ ಶಬ್ದದ ಅಧ್ಯಾತ್ಮಾರ್ಥವೆಂದು ಸಿದ್ಧವಾಯಿತು. ಈ ವಿಶಿಷ್ಟಾರ್ಥದ ವಿವಕ್ಷೆಯಿಂದ ಪೂತನಾಸಂಹಾರವನ್ನು ''ಪೂತನಾಮೋಕ್ಷ'' ಎಂದೇ ಭಾಗವತವು ಬಣ್ಣಿಸಿದೆ.

*****

# ಪುಂಗವ

## (ಅನುಗ್ರಹ ಲೇಖನ)

**ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

ಗೋವು, ಗೋಪೂಜೆ, ಗೋದಾನ ಎಂಬಾಗೆಲ್ಲ ನಮ್ಮ ನೆನಪಿಗೆ ಬರುವುದು ಹಾಲುತುಂಬಿದ ಕೆಚ್ಚಲುಳ್ಳ ಹಸು ಮಾತ್ರ. ಭಾರದ ಗಾಡಿಯನ್ನೆಳೆಯುತ್ತಿರುವ, ಹೊಲ-ದಲ್ಲಿ ಉಳುತ್ತಿರುವ, ನೇಗಿಲ ನೊಗದ ಭಾರವನ್ನು ಹೊತ್ತಿರುವ, ಪರಮೇಶ್ವರನಿಗೆ ವಾಹನವಾಗಿರುವ ವೃಷಭದ ನೆನಪಾಗುವುದು ವಿರಳ. ಪ್ರಾಯಶಃ ಗೋ ಶಬ್ದಕ್ಕೆ ವಿಶೇಷಣವಾಗಿ ಜೊತೆ ಸೇರಿರುವ ಮಾತೆ ಎಂಬ ಶಬ್ದ ನಮ್ಮ ಭ್ರಾಂತಿಗೆ ಕಾರಣ-ವಾಗಿರಲೂಬಹುದು.

ಏಕಾದಶೀವ್ರತವನ್ನು ಮಾಡಬೇಕು ಎಂದಾಗ ಕೃಷ್ಣಪಕ್ಷದ್ದೋ ಶುಕ್ಲಪಕ್ಷದ್ದೋ ಎಂದೆ ಕೇಳದೆ ಎರಡನ್ನೂ ಹೇಗೆ ಆಚರಿಸಬೇಕೋ, ಗೋವನ್ನು ಹಿಂಸಿಸಬಾರದು ಎಂದಾಗ ಬಿಳಿಯದ್ದನ್ನೋ, ಕಪ್ಪದ್ದನ್ನೋ ಎಂದು ಕೇಳದೆ ಎರಡನ್ನೂ ಹೇಗೆ ಹಿಂಸಿಸಬಾರದೋ, ಅದರಂತೆ ಹೆಣ್ಣನ್ನೋ ಗಂಡನ್ನೋ ಎಂದೂ ವಿಮರ್ಶಿಸದೆ ಎರಡನ್ನೂ ಹಿಂಸಿಸಬಾರದು, ಎರಡನ್ನೂ ಪೂಜಿಸಬೇಕು ಎಂಬುದು ಶಾಸ್ತ್ರಕಾರರ ಅಭಿಪ್ರಾಯ. ದಾನಪ್ರಸಂಗದಲ್ಲಿ ವೃಷಭದ ಮಹತ್ವವನ್ನು ತಿಳಿಸುವ ಪದ್ಮಪುರಾಣದ ಮಾತಿದು :

**ದಶಧೇನೂಶ್ಚ ಯೋ ದದ್ಯಾತ್ ಏಕಂ ಚೈವ ಧುರಂಧರಮ್ ।**
**ಸಮಾನಂ ತು ಫಲಂ ಪ್ರೋಕ್ತಂ ಬ್ರಹ್ಮಣಾ ಸಮುದಾಹೃತಮ್ ॥**

ಒಂದು ವೃಷಭವನ್ನು ದಾನಮಾಡಿದರೆ ಹತ್ತು ಗೋವುಗಳನ್ನು ದಾನ ನೀಡಿದುದಕ್ಕೆ ಸಮನಾದ ಫಲ ಎಂಬುದು ಅದರ ತಾತ್ಪರ್ಯ. ಇಂತಹ ಮಾತುಗಳನ್ನು ಮಹಾಭಾರತ-ದಲ್ಲೂ, ಇತರ ಧರ್ಮಶಾಸ್ತ್ರಗಳಲ್ಲೂ ಕಾಣಬಹುದು.

**ಪಿತೃನುದ್ದಿಶ್ಯ ಯಃ ಪುತ್ರೋ ವೃಷಭಂ ಮೋಕ್ಷಯೇದ್ಭುವಿ ।**
**ಪಿತರೋ ವಿಷ್ಣುಲೋಕೇಷು ಮಹೀಯಂತೇ ಯಥೇಪ್ಸಿತಮ್ ॥**

ಪಿತೃಗಳ ಪ್ರೀತ್ಯರ್ಥವಾಗಿ ಒಂದೇ ಒಂದು ವೃಷಭವನ್ನು ಬಂಧಮುಕ್ತವನ್ನಾಗಿ ಮಾಡಿದರೂ ಅದರ ಪುಣ್ಯಫಲವಾಗಿ ಪಿತೃಗಳು ವಿಷ್ಣುಲೋಕಗಳಲ್ಲಿ ಬಹು ಸಂತೋಷವನ್ನು ಅನುಭವಿಸುವರು.

ವೃಷಭದೊಂದಿಗೆ ಒಂದೇ ವೃಷಭದ ನಾಲ್ಕು ಕರುಗಳನ್ನೂ ಬಂಧಮೋಚನಗೊಳಿಸಿದಲ್ಲಿ, ಆ ವೃಷಭ ಹಾಗೂ ಆ ಕರುಗಳ ಮೈಯಲ್ಲಿ ಎಷ್ಟು ರೋಮಗಳಿರುವವೋ ಅದಕ್ಕೆ ಸಹಸ್ರಪಟ್ಟು ವರ್ಷಗಳ ಕಾಲ ದೇವಲೋಕದಲ್ಲಿ ಅಂತಹ ಮಾನವನು ಸುಖವನ್ನುಣ್ಣುವನು.

**ಲಾಂಗೂಲೇನ ವೃಷೋ ಯಚ್ಚ ಜಲಂ ಚೇತ್ ಕ್ಷಿಪತಿ ಧ್ರುವಮ್ ।**
**ತತ್ತೋಯಂ ತು ಸಹಸ್ರಾಬ್ದಂ ಪಿತೄಣಾಮಮೃತಂ ಭವೇತ್ ॥**

ದಾನಮಾಡಲ್ಪಟ್ಟ ವೃಷಭವು ತನ್ನ ಒದ್ದೆಯಾದ ಬಾಲವನ್ನು ಕೊಡವಿಕೊಂಡಾಗ ಏನು, ಎಷ್ಟು ನೀರಹನಿಗಳು ಮೇಲೆ ಹಾರುವವೋ, ಅವು ಸಹಸ್ರಗುಣಿತವಾದ ಸಂವತ್ಸರಗಳಕಾಲ ಅಮೃತಾಶನವಾಗಿ ಪರಿಣಮಿಸುವವು.

ಗಂಡು ಹೆಣ್ಣೆಂಬ ಭೇದವಿಲ್ಲದೆ ಗೋವುಗಳೆರಡನ್ನೂ ಪೋಷಿಸೋಣ.

*****

## ಪಾದಯಾತ್ರೆ

**ಶ್ರೀವಿಶ್ವಪ್ರಸನ್ನತೀರ್ಥರು, ಕಿರಿಯಪಟ್ಟ, ಶ್ರೀಪೇಜಾವರ ಅಧೋಕ್ಷಜಮಠ, ಉಡುಪಿ**

ಇವರ ನೇತೃತ್ವದಲ್ಲಿ ಬೃಂದಾವನದಿಂದ ಕುರುಕ್ಷೇತ್ರದವರೆಗೆ
ದಿನಾಂಕ 28.10.2012 ರಿಂದ ಹತ್ತು ದಿನಗಳ ಪಾದಯಾತ್ರೆ.

**ಪಾದಯಾತ್ರೆ ಪ್ರಾರಂಭವಾಗುವ ಸ್ಥಳ :** ಇಸ್ಕಾನ್ ಮಂದಿರ, ಬೃಂದಾವನ
(ಯಾತ್ರಿಗಳು 27ರ ರಾತ್ರಿಯೇ ಬೃಂದಾವನ ಇಸ್ಕಾನ್ ಮಂದಿರದ ಗೋಶಾಲೆಗೆ ಬರತಕ್ಕದ್ದು)

27.10.12ರಂದು ಬೆಳಿಗ್ಗೆ ಗೋವರ್ಧನಗಿರಿಯ ಪರಿಕ್ರಮ ಸೇವೆ.

ಪರಿಕ್ರಮ ಸೇವೆಗೆ ಬರಲಿಚ್ಛಿಸುವವರು 26.10.12ರ ರಾತ್ರಿಯೇ
ಬೃಂದಾವನದ ಇಸ್ಕಾನ್ ಮಂದಿರದ ಗೋಶಾಲೆಗೆ ಬರತಕ್ಕದ್ದು.

**ಆಸಕ್ತರು ಸಂಪರ್ಕಿಸಬೇಕಾದವರ ಹೆಸರು ಹಾಗೂ ದೂರವಾಣಿ ಸಂಖ್ಯೆ :**

**ಚಿ.ದಾ. ರಘುನಾಥ – 99862 58076**
**ಕೃಷ್ಣಮೂರ್ತಿ – 94490 82198**

## ದಧಿವ್ರತ ಸಂಕಲ್ಪ ಮಂತ್ರ (ಶ್ರಾವಣ ಶುಕ್ಲ ದ್ವಾದಶೀ):

**ದಧಿ ಭಾದ್ರಪದೇ ಮಾಸಿ ವರ್ಜಯಿಷ್ಯೇ ಸದಾ ಹರೇ ।**
**ಇಮಂ ಕರಿಷ್ಯೇ ನಿಯಮಂ ನಿರ್ವಿಘ್ನಂ ಕುರು ಕೇಶವ ॥**

**ಸಂಕರ್ಷಣಾರವಿಂದಾಕ್ಷ ಕರಿಷ್ಯೇಽಹಂ ದಧಿವ್ರತಮ್ ।**
**ದ್ವಿತೀಯೇ ಮಾಸಿ ದೇವೇಶ ನಿರ್ವಿಘ್ನಂ ಕುರು ಮೇ ಪ್ರಭೋ ॥**

## ಸಂಪಾದಕೀಯ -

## ಸಾಧನೆಯನ್ನು ಗುರುತಿಸದ ಮಠ-ಮಾನ್ಯಗಳು

ಈ ಕಾಲದಲ್ಲೂ ಸಹ ಸಕಲ ಸರ್ಕಾರಿ ಸವಲತ್ತುಗಳಿಂದ ವಂಚಿತರಾಗಿರುವ ಬ್ರಾಹ್ಮಣವರ್ಗವು ಮಾಡುತ್ತಿರುವ ಸಾಧನೆ ಅಚ್ಚರಿ ಹುಟ್ಟಿಸುವಂತಹುದು; ಇತರರ ಪಾಲಿಗಂತೂ ದಿಗ್ಭ್ರಮೆ ತರಿಸುವಂತಹುದು. ಹೊರಗಿನ ಪ್ರತಿಕೂಲವಾತಾವರಣ- ದಲ್ಲೂ ಬ್ರಾಹ್ಮಣರು, ಅದರಲ್ಲೂ ಯುವವರ್ಗ ವಿಭಿನ್ನ ಕಾರ್ಯಕ್ಷೇತ್ರಗಳಲ್ಲಿ ಮಿಂಚುತ್ತಿರುವುದು ಹೆಮ್ಮೆಪಡುವಂತಹ ಸಾಧನೆ. ಆದರೆ ಇಂತಹ ಸಾಧನೆಯನ್ನು ಗುರುತಿಸಿ ಉತ್ತೇಜಿಸುವ ವ್ಯವಸ್ಥೆಯನ್ನು ನಮ್ಮ ಮಠ-ಮಾನ್ಯಗಳು ಹೊಂದಿಲ್ಲ ಎಂಬುದು ವಿಷಾದದ ಸಂಗತಿ.

ಸಿದ್ಧಾಂತಕ್ಕೆ ಬದ್ಧತೆಹೊಂದಿರುವ ಮಠ-ಮಾನ್ಯಗಳು ಸಹಜವಾಗಿಯೇ ಸಿದ್ಧಾಂತದ ಪ್ರಸಾರದಲ್ಲಿ ಸಾಧನೆಮಾಡಿದ ಪ್ರತಿಭಾವಂತರನ್ನು ಸೂಕ್ತರೀತಿಯಲ್ಲಿ ಕಾಲಕಾಲಕ್ಕೆ ಗುರುತಿಸುವ ಕಾರ್ಯವನ್ನು ಮಾಡುವುದು ಸಾಧಕರಿಗೆ ಮಾತ್ರವಲ್ಲದೆ ಸಮಾಜಕ್ಕೇ ಸ್ಫೂರ್ತಿನೀಡುವಂತಹ ಮಹತ್ಕಾರ್ಯ. ಅದರಿಂದಾಗಿ ಸಿದ್ಧಾಂತದ ಮಹತ್ತ್ವ ಸಕಲರಿಗೂ ತಿಳಿಯುವಂತಾಗಿ ಅದರ ಅನುಸರಣೆಯತ್ತ ತೆರೆದುಕೊಳ್ಳಲು ಅವರಿಗೆ ಸಾಧ್ಯವಾಗುವುದು. ಸಂಶೋಧನೆ, ಲೇಖನ, ಗ್ರಂಥರಚನೆ, ಗ್ರಂಥಸಂಪಾದನೆ, ಪಾಠ, ಪ್ರವಚನ, ವಾಕ್ಯಾರ್ಥ, ಸಂಗೀತ, ದಾಸವಾಣಿ, ರಸಪ್ರಶ್ನೆ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ವಾಣಿಜ್ಯ ಮೊದಲಾದ ವಿಭಿನ್ನಪ್ರಾಕಾರಗಳಲ್ಲಿ ಸಾಧನೆಮಾಡಿದವರ ದಂಡೇ ಇದೆ. ಕೆಲವರದಂತೂ ಅದ್ಭುತವೆನ್ನಿಸು- ವಂತಹ ಸಾಧನೆಯಾಗಿರುತ್ತದೆ. ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಮಿಂಚುವ ಪ್ರತಿಭೆಗಳಿಗೆ ಇಂದು ಕೊರತೆ ಇಲ್ಲ. ಆದರೆ ಅದನ್ನು ಗುರುತಿಸಿ ಉತ್ತೇಜಿಸುವ ವ್ಯವಸ್ಥೆ ಸಾಂಕೇತಿಕವಾಗಿಯೂ ಸಹ ನಮ್ಮಲ್ಲಿ ಕಂಡುಬರುತ್ತಿಲ್ಲ ಎಂಬುದು ಸಣ್ಣ ಲೋಪವೇನಲ್ಲ.

ಸಿದ್ಧಾಂತದ ಪ್ರಸಾರವೆಂದರೆ ಕೇವಲ ಉತ್ಸವ, ಭೂರಿಭೋಜನ ಎಂದು ಮಾತ್ರ ತಿಳಿಯುವುದು ವಿವೇಕವೆನ್ನಿಸದು. ಸಿದ್ಧಾಂತವು ಸಮಾಜದ ಎಲ್ಲ ಸ್ತರಗಳಲ್ಲೂ ಪ್ರಾಣ- ವಾಯುವಿನಂತೆ ವ್ಯಾಪಿಸುವುದು ಮೂಲಭೂತವಾದ ಅಗತ್ಯ. ಯಾವುದೇ ಸಾಧನೆಗೂ ಅದು ಅತ್ಯಗತ್ಯ. ಇನ್ನು ಕೇವಲ ಸಿದ್ಧಾಂತಪ್ರಸಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರನ್ನೂ ಸಹ ಗುರುತಿಸುವಲ್ಲಿ ಮಠ-ಮಾನ್ಯಗಳು ಆಸಕ್ತಿ ತೋರಿಸುತ್ತಿಲ್ಲ. ಮೇಲ್ನೋಟಕ್ಕೆ ಹೆಚ್ಚಿನ ಮಠ-ಮಾನ್ಯಗಳು ಹಾಗೂ ಸಂಸ್ಥೆಗಳು ಹಲವು ಪ್ರಶಸ್ತಿಗಳನ್ನು ಯೋಜಿಸಿರುವುದು ಸ್ತುತ್ಯವೆನ್ನಿಸುವುದು ನಿಜ; ಆದರೆ ಈ ಕಾಲದಲ್ಲಿ ಮಾಧ್ವೇತರ ಸಂಸ್ಥೆಗಳು ನೀಡುವ ಪ್ರಶಸ್ತಿಗಳ ಮೊತ್ತಕ್ಕೆ ಹೋಲಿಸಿದಾಗ ಇವುಗಳು ಅಷ್ಟೇನೂ ಉತ್ತೇಜಿಸುವಂತೇನಿಲ್ಲ. ಕೆಲವು ದಶಕಗಳ ಹಿಂದೆ ಇಂತಹ ಪ್ರಶಸ್ತಿಗಳೂ ಇರಲಿಲ್ಲ. ಅತ್ಯಂತ ಶ್ರೇಷ್ಠಪ್ರಶಸ್ತಿಗೆ ಅರ್ಹರಾಗಿದ್ದ ಅಸಂಖ್ಯ ಪ್ರಾಚೀನವಿದ್ವಾಂಸರು ತಮ್ಮ ಇಡೀ ಜೀವಮಾನದಲ್ಲಿ ಒಂದು ಪ್ರಶಸ್ತಿಯನ್ನೂ ಸಹ ಗಳಿಸದೆ ಗತಿಸಿದ್ದು ಸಮಾಜಕ್ಕೆ ಭೂಷಣವೆನ್ನಿಸುವ ಸಂಗತಿಯಲ್ಲ. ಈ ಕಾಲದಲ್ಲಿ ಆ ಕೊರತೆ ಸ್ವಲ್ಪಮಟ್ಟಿಗೆ ತುಂಬಿದೆ ಎಂಬುದು ನಿಜ. ಆದರೆ ಇಂತಹ ಪ್ರಶಸ್ತಿಗಳ ಮೊತ್ತ ಈ

ಮೊದಲೇ ತಿಳಿಸಿದಂತೆ ಸಾಧಕರಿಗೆ ವಿಶೇಷ ಆಕರ್ಷಣೆ ಹುಟ್ಟಿಸುವಂತಹುದಲ್ಲ. ಅಗಾಧ ಪ್ರತಿಭಾಶಾಲಿಗಳನ್ನು ಸೆಳೆಯಲು ಪ್ರಶಸ್ತಿಗಳೂ ಸಹ ಆಕರ್ಷಕವೇ ಆಗಿರಬೇಕು

ಪ್ರಶಸ್ತಿಗಳು ಹೆಚ್ಚಿನ ಸಂದರ್ಭಗಳಲ್ಲಿ ಅರ್ಹರಿಗಿಂತ ಅನರ್ಹರಿಗೇ ಸಲ್ಲುವುದು ಇತರ ಪ್ರಸಂಗಗಳಲ್ಲಿ ಹೇಗೋ ನಮ್ಮ ಸಮಾಜದಲ್ಲೂ ಹಾಗೆಯೇ. ಸಾಮಾನ್ಯವಾಗಿ ಬಂಧು-ಬಾಂಧವರಿಗೆ, ವಿಶೇಷ ದಾನಿಗಳಿಗೆ, ಯಾವುದೋ ರೀತಿಯಲ್ಲಿ ಉಪಕಾರಮಾಡಿದ ಪ್ರಭಾವಿಗಳಿಗೆ ಹೆಚ್ಚಿನ ವಿದ್ವತ್ಪ್ರಶಸ್ತಿಗಳು ಸಂದಿರುವುದು ರಹಸ್ಯವೇನಲ್ಲ. ಸಮಾನಸಾಧನೆ ಮಾಡಿದವರಲ್ಲೂ ಮೇಲೆ ಹೇಳಿದ ಕಾರಣದಿಂದಾಗಿ ಪಕ್ಷಪಾತಧೋರಣೆಯಿಂದ ಕೆಲವರಿಗೆ ಮಾತ್ರ ಪ್ರಶಸ್ತಿ ನೀಡಿ ಗೌರವಿಸುವ ಪರಿಪಾಠವೂ ಕೆಲವರಲ್ಲುಂಟು. ಕೆಲವು ಪ್ರಶಸ್ತಿಗಳಂತೂ ಆಯಾ ಮಠದ ಅನುಯಾಯಿಗಳಿಗೆ ಹಾಗೂ ಹತ್ತಿರದ ಸಂಬಂಧಿಗಳಿಗಷ್ಟೇ ಮೀಸಲು ಎಂಬುದೂ ಸಹ ಗುಟ್ಟಿನ ಸಂಗತಿಯೇನಲ್ಲ. ಸಾಧನೆಯ ಪ್ರಶ್ನೆ ಬಂದಾಗ ಇತರ ಎಲ್ಲವೂ ಗೌಣವಾಗಿ ಸಾಧನೆಯಷ್ಟೇ ಪ್ರಧಾನವೆನ್ನಿಸುವ ದೃಷ್ಟಿ ಬೆಳೆಯುವವರೆಗೂ ಇಂತಹ ಆಭಾಸಗಳು ತಪ್ಪಿದ್ದಲ್ಲ. ಈ ದೃಷ್ಟಿಯಿಂದ ಸರ್ಕಾರ ನೀಡುವ ಪ್ರಶಸ್ತಿಗಳೇ ಹೆಚ್ಚು ಪಾರದರ್ಶಕ ಎನ್ನಬಹುದು. ಅಲ್ಲಿಯೂ ಮೇಲಿನ ಆಭಾಸಗಳಿಗೆ ಎಡೆಯಿದೆಯಾದರೂ, ಒಂದು ಹಂತದಲ್ಲಾದರೂ ವಿಶಿಷ್ಟಸಾಧಕರಿಗೆ ನ್ಯಾಯಸಲ್ಲುವ ಪ್ರಸಂಗಕ್ಕೆ ಎಡೆಯಿದೆ. ನಿಜವಾದ ಪ್ರತಿಭಾಶಾಲಿಯನ್ನು ಉಲ್ಲೇಖಿಸಿಯೂ ಅಸಂಬದ್ಧವಾದ ಬೇರೊಂದು ಕಾರಣವನ್ನು ನೀಡಿ ಆ ಮಟ್ಟವನ್ನು ತಲುಪದ ಇತರರಿಗೆ ಅಂತಹ ಪ್ರಶಸ್ತಿಯನ್ನು ನೀಡಿದ ಪ್ರಸಂಗವನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಇದರ ಒಟ್ಟು ಪರಿಣಾಮವಾಗುವುದು ನಿಜವಾದ ಸಾಧಕರ ಮೇಲೆ; ಅದರಿಂದಾಗುವ ನಷ್ಟ ಸಿದ್ಧಾಂತ ಹಾಗೂ ಸಮಾಜಗಳಿಗೆ ಎಂಬುದನ್ನು ಗಮನಿಸಬೇಕು. ಮೇಲ್ನೋಟಕ್ಕೆ ಇದು ಕೆಲವು ವ್ಯಕ್ತಿಗಳಿಗೆ ಆಗುವ ಅನ್ಯಾಯ ಎನ್ನಿಸಿದರೂ, ಒಟ್ಟು ಪರಿಣಾಮ ಮಾತ್ರ ಮೇಲೆ ಹೇಳಿದಂತೆ ಇಡೀ ಸಮಾಜಕ್ಕೆ ಬೀಳುವ ಕೊಡಲಿಯ ಪೆಟ್ಟು ಎಂಬುದು ನಿಶ್ಚಿತ. ಇನ್ನು ಸಿದ್ಧಾಂತಪ್ರಸಾರಕ್ಕೆ ಸಂಬಂಧಿಸದೆಯೂ ಮೇಲೆ ತಿಳಿಸಿದ ಇತರ ಪ್ರಾಕಾರಗಳಲ್ಲಿ ಸೇವೆ ಸಲ್ಲಿಸಿದವರನ್ನು ಗುರುತಿಸಿ ಉತ್ತೇಜಿಸುವುದಂತೂ ತುಂಬಾ ವಿರಳವೇ. ಅದರಲ್ಲೂ ಸ್ವಜನಪಕ್ಷಪಾತದ್ದೇ ಮೇಲುಗೈ. ನಿಜವಾದ ಸಾಧಕರನ್ನು ಸೂಕ್ತರೀತಿಯಲ್ಲಿ ಗೌರವಿಸಿ ಅವರನ್ನು ಸಿದ್ಧಾಂತದ ಪರಿಧಿಗೆ ಕರೆತರುವಲ್ಲಿ ಯಶಸ್ಸನ್ನು ಗಳಿಸಿದಲ್ಲಿ , ಅದರ ಒಟ್ಟು ಪ್ರಯೋಜನ ಇಡೀ ಸಮಾಜಕ್ಕೆ ಸಲ್ಲುವುದು ಖಚಿತ. ಕೆಲವು ಸಂದರ್ಭಗಳಲ್ಲಂತೂ ಪ್ರಶಸ್ತಿಯನ್ನು ವಿತರಿಸಲೇಬೇಕು ಎಂಬ ಕಾರಣದಿಂದ ಯಾವ ಸಾಧನೆಯನ್ನೂ ಮಾಡದ ಸಾಮಾನ್ಯರಿಗೆ ವಿತರಿಸಿದ ಪ್ರಸಂಗಗಳು ಅನೇಕ. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಸಿ.ಇ.ಟಿ. ಮೊದಲಾದವುಗಳಲ್ಲಿ ರಾಜ್ಯಮಟ್ಟದಲ್ಲಿ ಮಿಂಚಿದವರನ್ನು ಗುರುತಿಸಿ ಸನ್ಮಾನಿಸಿ-ದಲ್ಲಿ ಅವರ ಗಮನ ಸಿದ್ಧಾಂತದತ್ತ ಬರುವುದು ಅಸಹಜವೇನಲ್ಲ. ಈ ಬಗ್ಗೆ ಇನ್ನಾದರೂ ಸೂಕ್ತಪ್ರಯತ್ನ ನಡೆದಲ್ಲಿ ಸಿದ್ಧಾಂತಪ್ರಸಾರಕ್ಕೆ ಅನುಕೂಲತೆ ಉಂಟಾಗುವುದು ನಿಶ್ಚಿತ.

*****

# ಉಪಚಾರಾರ್ಪಣೆಯ ಸೂಕ್ಷ್ಮಾನುಸಂಧಾನ

- ಸಗ್ರಿ ರಾಘವೇಂದ್ರ ಉಪಾಧ್ಯಾಯ

ಸಮಗ್ರಜೀವನವನ್ನೇ ದೇವರಿಗೆ ಸಮರ್ಪಿಸುವಲ್ಲಿ ಸಾಂಕೇತಿಕವಾಗಿ ಪ್ರತಿನಿಧಿಸಬಲ್ಲ ದೇವರಪೂಜೆಗೆ ಆಧ್ಯಾತ್ಮಿಕಸಾಧನೆಗಳಲ್ಲೆಲ್ಲ ಹಿರಿಯಸ್ಥಾನ ಇರುವುದಾದರೆ, ಅಂತಹ ದೇವರಪೂಜೆಯಲ್ಲಿ ಅದಕ್ಕೆ ಮೆರಗು ತುಂಬಬಲ್ಲ ಷೋಡಶೋಪಚಾರಗಳಿಗೆ ಬಹಳ ಮಹತ್ತ್ವ ಇದೆ. ಆದುದರಿಂದ ಅಂತಹ ಉಪಚಾರಗಳನ್ನು 'ಅರ್ಘ್ಯಂ ಸಮರ್ಪಯಾಮಿ; ಪಾದ್ಯಂ ಸಮರ್ಪಯಾಮಿ...' ಎಂದು ಉದ್ಧರಣೆಯಿಂದ ನೀರು ಬಿಡುವಷ್ಟಕ್ಕೇ ಚುಟುಕುಗೊಳಿಸದೆ ಆದಷ್ಟು ಪರಿಷ್ಕೃತವಾಗಿ, ವೈಭವೋಪೇತವಾಗಿ ನಡೆಸಲು ಯತ್ನಿಸಬೇಕು. ವಿಧಾನಕ್ಕೆ ಸಂಬಂಧಿಸುವ ಪರಿಷ್ಕಾರ ಒಂದು ಬಗೆಯದ್ದಾದರೆ, ಅನುಸಂಧಾನಕ್ಕೆ ಸಂಬಂಧಿಸುವ ಪರಿಷ್ಕಾರ ಮತ್ತೊಂದು ಬಗೆಯದ್ದು. ವಿಧಾನಕ್ಕೆ ಸಂಬಂಧಿಸುವ ಪರಿಷ್ಕಾರ ಮತ್ತೊಂದು ಬಗೆಯದ್ದು. ವಿಧಾನಕ್ಕೆ ಸಂಬಂಧಿಸಿದಂತೆ ಬರೇ ಉದ್ಧರಣೆಯ ನೀರಿನಿಂದ ಅರ್ಘ್ಯಾದಿಗಳನ್ನೇ ಪೂರೈಸದೆ '...ದತ್ವಾಽರ್ಘ್ಯಂ ಶಂಖವಾರಿಣಾ । ಬ್ರೂಯಾದರ್ಘ್ಯಮಿದಂ ನ್ಯಾಯ್ಯಂ...' ಎಂದು ಯೋಗದೀಪಿಕಾದಲ್ಲಿ (೩-೨೦) ತಿಳಿಸಿರುವಂತೆ ಶಂಖದ ನೀರಿನಿಂದ 'ಇದಂ ನ್ಯಾಯ್ಯಂ ಅರ್ಘ್ಯಂ' - ಎಂದು ಹೇಳಿ ಅರ್ಘ್ಯವನ್ನು ನೀಡಬೇಕು. '...ಪಾದ್ಯಾದ್ವೇಷ್ವೇವಮೇವ ಹಿ' - ಎಂದಿರುವಂತೆ ಪಾದ್ಯಾದಿಗಳನ್ನೂ ಶಂಖಜಲದಿಂದ 'ಇದಂ ನ್ಯಾಯ್ಯಂ ಪಾದ್ಯಂ...' ಎಂದು ಹೇಳಿ ನೀಡಬೇಕಾದದ್ದು. 'ಪುಷ್ಪಾಗ್ರೇಣ ಜಲಂ ದದ್ಯಾದಪಿ ಗಂಧಂ ತ್ರಿಶಸ್ತ್ರಿಶಃ' ಎಂದು ಯೋಗದೀಪಿಕಾದಲ್ಲಿ (೩-೨೩) ತಿಳಿಸಿರುವಂತೆ ಗಂಧವನ್ನು ಪುಷ್ಪದ ತುದಿಯಿಂದ ನೀಡಬೇಕಾದುದು. '......ಕಿಂಚಿನ್ನವಮಪ್ಯರ್ಪಯೇತ್ ಸುಧೀಃ' - ಎಂದು ಪದ್ಯ-ಮಾಲಾದಲ್ಲಿ(೭೬) ತಿಳಿಸಿರುವಂತೆ 'ಭೂಷಣಂ ಸಮರ್ಪಯಾಮಿ' - ಎಂದು ಭೂಷಣಗಳನ್ನು ಅರ್ಪಿಸುವಾಗ ಹಿಂದಿನ ಆಭರಣಗಳ ಜೊತೆಗೆ ನೂತನವಾದ ಆಭರಣವನ್ನೂ ಅರ್ಪಿಸಬೇಕು. ಪ್ರತಿನಿತ್ಯ ಅಲ್ಲದಿದ್ದರೂ ಹಬ್ಬಹರಿದಿನಗಳಲ್ಲಾದರೂ ಈ ವೈಭವವನ್ನು ಅಳವಡಿಸಿಕೊಳ್ಳಬಹುದು.

**ತತ್ತತ್ಕರ್ಮಸು ಶ್ರೀಪತಿಂ ಸ್ಮರನ್ :**

ಹೀಗೆ ಲೌಕಿಕವೈಭವದೊಂದಿಗೆ ಆಯಾ ಉಪಚಾರಕ್ಕೆ ಸಂಬಂಧಿಸಿದಂತೆ ಶ್ರೀಪತಿಯ ಪಾತ್ರವನ್ನು ಅನುಸಂಧಾನಕ್ಕೆ ತಂದುಕೊಳ್ಳಬೇಕೆಂದು ನಾರಾಯಣಪಂಡಿತರು ಯೋಗ-ದೀಪಿಕಾದಲ್ಲಿ(೩-೨೩) ಎಚ್ಚರಿಸಿರುವರು - '....ತತ್ತತ್ಕರ್ಮಸು ಶ್ರೀಪತಿಂ ಸ್ಮರನ್...' - ಇಲ್ಲಿ ಶ್ರೀಪತಿಯ ಸ್ಮರಣೆ ಎಂದರೆ ಶ್ರೀಪತಿಯ ಅನುಸಂಧಾನ ಎಂದೇ ಅರ್ಥ.

ಶ್ರೀಪತಿಯು ಆಯಾ ಉಪಚಾರದಿಂದ ಹೇಗೆ ಸತ್ಕರಿಸಲ್ಪಡುವನೆಂಬುದೇ ಅವನ ಅನುಸಂಧಾನ.

ಯಾವುದೇ ವಸ್ತುವನ್ನು ದೇವರಿಗೆ ಅರ್ಪಿಸುವಾಗ ಅದರ ಅಭಿಮಾನಿದೇವತೆಗಳು ಆ ಪದಾರ್ಥದ ಜೊತೆಗೆ ಆಯಾ ಆಕಾರದಲ್ಲಿ ಇರುವ ತಮ್ಮ ಸ್ವರೂಪವನ್ನೂ ದೇವರಿಗೆ ಅರ್ಪಿಸುವರು – **ತತ್ತದಾಕಾರಸಂಯುಕ್ತಾ ದೇವಾಃ ಸರ್ವೇಽಪಿ ಸರ್ವದಾ । ಸ್ಥಿತಾ ಭೋಜ್ಯ-ಪದಾರ್ಥೇಷು ಹ್ಯರ್ಪಯೇಯುಃ ಸ್ವರೂಪಕಾನ್**(ಯೋಗದೀಪಿಕಾ – ೧೦-೫೬)

ಬೃಹದಾರಣ್ಯಕೋಪನಿಷತ್ತು ತಿಳಿಸುವಂತೆ 'ಅರ್ಕ' – ಎನಿಸುವ ನೀರು ಭಗವಂತನ ಅರ್ಚನೆಯ ಸಾಧನವಾಗಿಯೇ ಅವನಿಂದ ಸೃಷ್ಟಿಸಲ್ಪಟ್ಟಿರುವುದರಿಂದ ಅಂತಹ ನೀರಿನ ಮೂಲಕವೇ ಅರ್ಘ್ಯಾದಿಗಳನ್ನು ನೀಡುವುದು ಔಚಿತ್ಯಪೂರ್ಣ.

ಛಾಂದೋಗ್ಯೋಪನಿಷತ್ತು ಪ್ರಸ್ತುತಪಡಿಸುವ 'ತ್ರಿವೃತ್‌ಕರಣ' ಪ್ರಕ್ರಿಯೆಗನುಗುಣವಾಗಿ ಜಲಾಭಿಮಾನಿ ವಾಯುದೇವನಾದುದರಿಂದ ನೀರಿನ ಮೂಲಕ ಅರ್ಪಿಸಲಾಗುವ ಅರ್ಘ್ಯಾದಿಗಳನ್ನು ನೀರಿನಲ್ಲಿ ಅದೇ ಆಕಾರದಲ್ಲಿದ್ದು ವಾಯುದೇವ ತನ್ನ ಸ್ವರೂಪವನ್ನು ಅರ್ಪಿಸುವನು.

ದೇವರ ಕೈಗೆ ಅರ್ಘ್ಯ, ಕಾಲುಗಳಿಗೆ ಪಾದ್ಯ, ಆಚಮನ ಹಾಗೂ ಪುನರಾಚಮನಕ್ಕೆ ನೀರು ನೀಡುವ ಮೂಲಕ ಆ ಉಪಚಾರವನ್ನು ಹೀಗೆ ಪ್ರತಿಮಾರೂಪದಲ್ಲೋ, ಸಾಲಿಗ್ರಾಮರೂಪದಲ್ಲೋ ಇರುವ ದೇವರಿಗೆ ಉಪಚಾರಾರ್ಪಣೆಯನ್ನು ಕೇವಲ ಯಾಂತ್ರಿಕವಾಗಿ ನಡೆಸದೆ, ಕಣ್ಣಿಗೆ ಕಟ್ಟುವಂತೆ ನಡೆಸಬೇಕೆಂದರೆ ಇಂದ್ರಪ್ರಸ್ಥದಲ್ಲಿ ನಡೆದ ರಾಜಸೂಯಯಾಗದಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆಯನ್ನು ಸಲ್ಲಿಸುವಾಗ ಅದರ ಅಂಗವಾಗಿ ಯುಧಿಷ್ಠಿರ ಭಾವೋದ್ವಿಗ್ನನಾಗಿ ಶ್ರೀಕೃಷ್ಣನಿಗೆ ಅರ್ಘ್ಯ, ಪಾದ್ಯ ಮುಂತಾದ ಉಪಚಾರ-ಗಳನ್ನು ಅರ್ಪಿಸಿದ್ದನ್ನು ಅನುಸಂಧಾನಕ್ಕೆ ತಂದುಕೊಳ್ಳಬೇಕು.

ಪಾದ್ಯವನ್ನು ಅರ್ಪಿಸುವಾಗ ಬಲಿಚಕ್ರವರ್ತಿ ವಿಂಧ್ಯಾವಲಿ ನೀರು ಹಾಕುತ್ತಿರಲು ವಾಮನನ ಪುಟ್ಟಪಾದವನ್ನು ತೊಳೆದದ್ದನ್ನೂ, ಅದೇ ವಾಮನ ತ್ರಿವಿಕ್ರಮನಾಗಿ ಬೆಳೆಯಲು ಸತ್ಯಲೋಕದವರೆಗೆ ವ್ಯಾಪಿಸಿದ ಅವನ ಪಾದಗಳನ್ನು ಚತುರ್ಮುಖ ತನ್ನ ಕಮಂಡಲು ಜಲದಿಂದ ತೊಳೆದದ್ದನ್ನೂ ಅನುಸಂಧಾನಕ್ಕೆ ತಂದುಕೊಳ್ಳಬೇಕು.

'ಯದನ್ನಃ ಪುರುಷಃ ತದನ್ನಾಃ ದೇವತಾಃ' – ಎಂಬ ನ್ಯಾಯಕ್ಕನುಗುನವಾಗಿ ಪೂಜಕನು ಯಾವ ಆಚಮನವನ್ನು ರೂಢಿಸಿಕೊಂಡಿರುವನೋ ಆ ಆಚಮನವನ್ನೇ ದೇವರಿಗೂ ಆಚಮನ ಮತ್ತು ಪುನರಾಚಮನ ಉಪಚಾರಗಳನ್ನಾಗಿ ಅರ್ಪಿಸಬೇಕು. ಅದು ಒಂದು-ವೇಳೆ 'ಕೇಶವಾಯ ಸ್ವಾಹಾ..' ಇತ್ಯಾದಿಯಾಗಿ ಆರಂಭವಾಗುವ ಸ್ಮಾರ್ತಾಚಮನ-ವಾದರೆ ಭಗವಂತನು ತನ್ನ ಕೇಶವಾದಿರೂಪಗಳ ಐಕ್ಯಾನುಸಂಧಾನ ಮಾಡಿಕೊಳ್ಳುವನೆಂದೂ, 'ಋಗ್ವೇದಾಯ ಸ್ವಾಹಾ...' ಇತ್ಯಾದಿಯಾಗಿ ಆರಂಭವಾಗುವ ಶ್ರೌತಾಚಮನವಾದರೆ ಭಗವಂತನು ಋಗ್ವೇದಾದಿಗಳ ಅಭಿಮಾನಿದೇವತೆಗಳನ್ನು ತನ್ನ ಶರೀರದಲ್ಲಿ ಆಧಾರ-ರೂಪದಿಂದ ಸೇರಿಸಿಕೊಳ್ಳುವನೆಂದೂ ಅನುಸಂಧಾನ ತಂದುಕೊಳ್ಳಬೇಕು.

ಯಜ್ಞೋಪವೀತವನ್ನು ಅರ್ಪಿಸುವಾಗ 'ಪ್ರಜಾಪತೇರ್ಯತ್ ಸಹಜಂ ಪುರಸ್ತಾತ್' - ಎಂದಿರುವಂತೆ ಚತುರ್ಮುಖನನ್ನು ಯಜ್ಞೋಪವೀಪಸಹಿತನನ್ನಾಗಿಯೇ ಸೃಷ್ಟಿಸಿರುವನೆಂದೂ, ಆ ಯಜ್ಞೋಪವೀತದ ಓಂಕಾರ ಮುಂತಾದ ತಂತುದೇವತೆಗಳಿಗೂ, ಋಗ್ವೇದ ಮುಂತಾದ ದೋರಕದೇವತೆಗಳಿಗೂ ಯಜ್ಞೋಪವೀತದ ಮೂಲಕ ಆಧಾರನಾಗಿ ತನ್ನ ಶರೀರದಲ್ಲಿ ಧರಿಸಿಕೊಂಡಿರುವನೆಂದೂ, ವಾಮನನಿಗೆ ಉಪನಯನದ ಪ್ರಸಂಗದಲ್ಲಿ ಕಶ್ಯಪರು ಯಜ್ಞೋಪವೀತಧಾರಣೆ ಮಾಡಿಸಿರುವರೆಂದೂ ಅನುಸಂಧಾನಕ್ಕೆ ತಂದುಕೊಳ್ಳಬೇಕು.

ಆಸನವನ್ನು ಅರ್ಪಿಸುವಾಗ ಭವಿಷ್ಯೋತ್ತರಪುರಾಣದ ವೇಂಕಟೇಶಮಾಹಾತ್ಮ್ಯದಲ್ಲಿ (೬-೨) '...ಉಪಾಸರ್ಪತ್ ಸ್ವಯಂ ಲಕ್ಷ್ಮೀಃ' - ಎಂದಿರುವಂತೆ ವೇಂಕಟೇಶ ಕುದುರೆಯಲ್ಲಿ ಕುಳಿತುಕೊಳ್ಳಲು ಬೇಕಾದ ಆಸನ ಹೇಗೆ ಲಕ್ಷ್ಮೀದೇವಿಯೇ ಆಗಿದ್ದಳೋ ಹಾಗೆಯೇ ನಾವು ದೇವರಿಗಾಗಿ ನೀಡುವ ಆಸನದಲ್ಲೂ ಲಕ್ಷ್ಮಿಯ ಸನ್ನಿಧಾನವನ್ನು ಅನುಸಂಧಾನ ಮಾಡಬೇಕು.

ಭಗವಂತನ ಶರೀರವನ್ನು ಪೂರ್ಣವಾಗಿ ಆಲಂಗಿಸಿಕೊಳ್ಳುವ ಸೌಭಾಗ್ಯಕ್ಕೆ ಒಳಗಾಗುವ ಅವನ ಪಟ್ಟೆಪೀತಾಂಬರರೂಪವಾದ ಬಟ್ಟೆಯಾಗಿ ಅವನ ಆಲಿಂಗನಕ್ಕೆ ಮುಖ್ಯಾರ್ಹಳಾದ ಲಕ್ಷ್ಮಿಯೇ ರೂಪತಾಳುವಳೆಂದು ಅನುಸಂಧಾನ ತಂದುಕೊಳ್ಳಬೇಕು. 'ಶ್ರೀದೇವೀ ವೇಣುಮಾವಿಶ್ಯ ರೇಮೇ ಕೃಷ್ಣಮುಖಾಂಬುಜೇ। ಪಪೌ ಚ ತದ್ಗತಂ ಗೀತಂ...' - ಎಂದು ತಂತ್ರಭಾಗವತ(ಭಾ.ತಾ.ನಿ.-೧೦/೧೯/೧೦) ನಿರ್ಣಯಿಸಿರುವಂತೆ ಶ್ರೀಕೃಷ್ಣ ಬಾರಿಸುತ್ತಿದ್ದ ಕೊಳಲಿನಲ್ಲಿ ಶ್ರೀದೇವಿ ಸನ್ನಿಹಿತಳಾಗಿ ಅವನ ಬಾಯಿಯ ವಿಶೇಷ ಸಂಪರ್ಕಕ್ಕೆ ಹೇಗೆ ಒಳಗಾಗಿದ್ದಳೋ ಹಾಗೆ.

ಹೂವನ್ನು ಅರ್ಪಿಸುವಾಗ 'ಕೀರ್ತಿಃ ಶ್ರೀರ್ವಾಕ್ ಚ....' ಇತ್ಯಾದಿ ಗೀತೆಯಲ್ಲಿ ತಿಳಿಸಿದಂತೆ ಸೌಂದರ್ಯಕ್ಕೆ ನಿಯಾಮಕಳಾಗಿ ಶ್ರೀ ಎನಿಸುವ ಭಗವಂತನ ವಿಭೂತಿರೂಪವಾದ ಲಕ್ಷ್ಮೀದೇವಿಯ ರೂಪ ಆ ಹೂವಿನ ಸೌಂದರ್ಯಕ್ಕೆ ಕಾರಣವಾಗಿ ಭಗವದರ್ಪಿತವಾಗುತ್ತಿದೆ ಎಂಬ ಅನುಸಂಧಾನ ತಾಳಬೇಕು.

ಗಂಧವನ್ನು ಅರ್ಪಿಸುವಾಗ 'ವಾಯುರ್ಗಂಧವಹಶ್ಚಾಸ್ಯ...' - ಎಂದು ಐತರೇಯಭಾಷ್ಯದಲ್ಲಿ(೧-೫-೬) ತಿಳಿಸಿರುವಂತೆ ವಾಯುದೇವ ಆ ಗಂಧವನ್ನು ಅರ್ಪಿಸುತ್ತಿರುವನೆಂಬ ಅನುಸಂಧಾನ ತಾಳಬೇಕು.

ಆಭರಣಗಳನ್ನು ಅರ್ಪಿಸುವಾಗ 'ಏಕ ಏವ ಪರೋ ವಿಷ್ಣುರ್ಭೂಷಾಹೇತಿಧ್ವಜೇಷ್ವಜಃ। ತತ್ತಚ್ಛಕ್ತಿಸ್ವರೂಪೇಣ ಸ್ವಯಮೇವ ವ್ಯವಸ್ಥಿತಃ' - (ಭಾ.ತಾ.ನಿ. -೬/೮-೩೩) ಎಂದಿರುವಂತೆ ಅವನ ಆಭರಣಗಳಲ್ಲಿ ಅವುಗಳ ಸೌಂದರ್ಯಾದಿಗಳನ್ನು ನಿಯಂತ್ರಿಸುತ್ತ ಅವನೇ ನೆಲೆಸಿರುವನು. ಅಲ್ಲದೆ 'ಶ್ರೀವತ್ಸಃ ಪ್ರಕೃತಿರ್ಜ್ಞೇಯಾ ಬ್ರಹ್ಮಾಖ್ಯಃ ಕೌಸ್ತುಭಃ ಪುಮಾನ್'(ಭಾ.ತಾ.ನಿ. - ೬/೯/೨೯) ಎಂದಿರುವಂತೆ ಲಕ್ಷ್ಮ್ಯಾದಿದೇವತೆಗಳೇ ಅವನ

ಕೌಸ್ತುಭಾದಿ ಆಭರಣಗಳಾಗಿ ಸೇವೆ ಸಲ್ಲಿಸುತ್ತಿರುವರೆಂಬ ಅನುಸಂಧಾನ ತಾಳಬೇಕು. ಆ ಆಭರಣಗಳಿಂದ ಭಗವಂತ ಹೇಗೆ ಶೋಭಿಸುವನೆಂಬುದನ್ನು ಶ್ರೀಮಧ್ವರು ಶ್ರೀರಾಮಚಂದ್ರನ ಮಹಾಪ್ರಸ್ಥಾನದ ಪ್ರಸಂಗದಲ್ಲಿ 'ಸಹಸ್ರಸೂರ್ಯಮಂಡಲಜ್ವಲ-ತ್ಕಿರೀಟಮೂರ್ಧಜಃ....' ಇತ್ಯಾದಿಯಾಗಿ ಹನ್ನೆರಡುಶ್ಲೋಕಗಳಲ್ಲಿ (ಮ.ಭಾ.ತಾ.ನಿ. - ೯/೭೬-೮೭) ವರ್ಣಿಸಿದ್ದನ್ನು ಅನುಸಂಧಾನಕ್ಕೆ ತಂದುಕೊಳ್ಳಬೇಕು.

ಹೀಗೆ ಬೇರೆ ಬೇರೆ ಬಗೆಯ ಅನುಸಂಧಾನ ತಾಳುವ ಮೂಲಕ ಉಪಚಾರಾರ್ಪಣೆಗೆ ಮೆರುಗು ಕೊಟ್ಟಂತಾಗುವುದು.

(ಮುಂದಿನ ಸಂಚಿಕೆಯಲ್ಲಿ: **ಪ್ರಣಾಮದ ಅನುಸಂಧಾನ**)

*****


**ಗೋಮಾತೆಯ ಸೇವೆಗೆ ಒಂದು ಸುವರ್ಣಾವಕಾಶ**

## ಗೋವರ್ಧನ ಗಿರಿ ವಿಶ್ವಸ್ತ ಮಂಡಳಿ

**ಶ್ರೀಪೇಜಾವರ ಅಧೋಕ್ಷಜ ಮಠ, ಉಡುಪಿ**

ಶ್ರೀಮನ್ಮಧ್ವಾಚಾರ್ಯರಿಂದ ಸಂದರ್ಶಿತವಾದ ಕೊಡವೂರಿನಲ್ಲಿ ಸುಮಾರು ಎರಡು ಎಕರೆ ಜಾಗದಲ್ಲಿ ಗೋಶಾಲೆಯನ್ನು ಹದಿನೇಳು ವರ್ಷಗಳಿಂದ ನಡೆಸುತ್ತಿರುವ ಗೋವರ್ಧನಗಿರಿ ವಿಶ್ವಸ್ತ ಮಂಡಳಿಯು ಉಡುಪಿಯಿಂದ ಇಪ್ಪತ್ತು ಕಿ.ಮೀ. ದೂರದ ನೀಲಾವರದಲ್ಲಿ ಇಪ್ಪತ್ತೆಂಟು ಎಕರೆ ಪ್ರದೇಶದಲ್ಲಿ ನಾಲ್ಕು ಹಟ್ಟಿಗಳುಳ್ಳ ಗೋಶಾಲೆಯೊಂದನ್ನು ತೆರೆದಿದೆ. ಈಗ ಅಲ್ಲಿ ಒಟ್ಟು ೬೫೦ಕ್ಕಿಂತ ಹೆಚ್ಚು ಗೋವುಗಳ ಸಂರಕ್ಷಣೆ ನಡೆದಿದೆ. ಅದಕ್ಕೆ ಪ್ರತಿ ತಿಂಗಳು ಸುಮಾರು ಎರಡು ಲಕ್ಷ ರುಪಾಯಿಗಳ ಖರ್ಚು ತಗಲುತ್ತಿದೆ. ಅದನ್ನು ನಿರ್ವಹಿಸಲು ನಮ್ಮ ವಿಶ್ವಸ್ತ ಮಂಡಳಿಯು ಯೋಜನೆಯೊಂದನ್ನು ರೂಪಿಸಿದ್ದು ಅದರ ಸದುಪಯೋಗ ಪಡೆಯಲು ಆಸ್ತಿಕರನ್ನು ವಿನಂತಿಸಿಕೊಳ್ಳಲಾಗಿದೆ. ಗೋವುಗಳಲ್ಲಿ ಸಮಸ್ತ ದೇವತೆ-ಗಳ ಸನ್ನಿಧಾನ ಹಾಗೂ ಶ್ರೀಲಕ್ಷ್ಮೀನಾರಾಯಣರ ವಿಶೇಷ ಸನ್ನಿಧಾನ. ಈ ಗೋಸೇವೆಯ ಅವಕಾಶ ಜನ್ಮಜನ್ಮಾಂತರದ ಸುಕೃತದ ಫಲ.

| | |
|---|---|
| **೧. ಮಹಾಪೋಷಕರು (ಆಜೀವ ಸದಸ್ಯರು)** | **ರೂ. ೧,೦೦,೦೦೦** |
| **೨. ಪೋಷಕರು (೧೦ ವರ್ಷಗಳ ಸದಸ್ಯತ್ವ)** | **ರೂ. ೫೦,೦೦೦** |
| **೩. ವಾರ್ಷಿಕ ಸದಸ್ಯರು** | **ಪ್ರತಿವರ್ಷ ರೂ. ೧೦,೦೦೦** |
| **೪. ಸಾಮಾನ್ಯ ಸದಸ್ಯರು** | **ಪ್ರತಿವರ್ಷ ರೂ. ೨,೫೦೦** |

**ವಿ.ಸೂ. :** BÓPÃá **'ಗೋವರ್ಧನಗಿರಿ ವಿಶ್ವಸ್ತ ಮಂಡಳಿ'**, ÎÌà±àhÝÊÃÊás, Evá² & CÊÄW ®W¨á, aP…, ww ÊáãÆP ÓàÊ ÓÈÓÝÖá¨á.

# ಯಲಗುರಕ್ಷೇತ್ರ

ಸಂ: [೧]ಜಯರಾಮಾಚಾರ್ಯ ಮಳಗಿ, ಗದಗ.

ಪುಣ್ಯವಾಹಿನಿಯಾದ ಕೃಷ್ಣಾ ತಟಾಕ. ಪ್ರಾಣದೇವರ ಸನ್ನಿಧಾನ ವಿಶೇಷ. ಹೀಗಾಗಿ ಶ್ರೀಯಲಗುರಕ್ಷೇತ್ರ ಪರಮಪಾವನವಾಗಿದೆಯಲ್ಲದೆ ಬಹು ಜಾಗೃತಸ್ಥಾನವಾಗಿದೆ. ಇಲ್ಲಿ ನೆಲೆ ನಿಂತಿರುವ ಪ್ರಾಣದೇವರು ಯಲಗುರೇಶನೆಂದು ಪ್ರಸಿದ್ಧರಾಗಿದ್ದಾರೆ.

ಇಲ್ಲಿ ಯಲಗುರೇಶನ ಸೇವೆ ಮಾಡುವುದರಿಂದ ಭಕ್ತರ ಅಭೀಷ್ಟಗಳು ಈಡೇರುತ್ತಲಿವೆ. ಇವನ ಸೇವೆಯಿಂದ ಡಾಕ್ಟರರು, ವೈದ್ಯರು ಅಸಾಧ್ಯವೆಂದು ಹೇಳಿ ಕೈಬಿಟ್ಟ ರೋಗಗಳು ಗುಣಪಡುತ್ತಲಿವೆ. ಸಂತಾನಬಾಧೆಗೊಳಗಾದವರು ಈ ಪ್ರಾಣದೇವರ ಸೇವೆಯಿಂದ ಈ ಬಾಧೆಗಳಿಂದ ಮುಕ್ತರಾಗಿದ್ದಾರೆ. ಯಲಗುರೇಶನ ಅನುಗ್ರಹದಿಂದ ಇಷ್ಟಾರ್ಥಗಳನ್ನು ಪೂರ್ಣಮಾಡಿಕೊಂಡವರು ಸಾವಿರಾರು ಭಕ್ತರು ತಮ್ಮ ಮಕ್ಕಳಿಗೆ ಅವನ ಹೆಸರಿಟ್ಟು ನಿತ್ಯ ನೆನೆಯುತ್ತಾರೆ. ಇವನ ಕರುಣೆಯಿಂದ ನಡೆಯುವ ಅಘಟನಾ ಘಟನೆಗಳು ಇಂಥ ಚಿಕಿತ್ಸಕ ವಿಜ್ಞಾನಯುಗದಲ್ಲಿಯ ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡುತ್ತಲಿವೆ. ಅವರವರ ಭಕ್ತಿ ಶ್ರದ್ಧಾ ನಿಷ್ಠೆಗಳನುಸಾರವಾಗಿ ಮನೋಭೀಷ್ಟಗಳನ್ನು ಪಡೆಯುತ್ತಾರೆ. ಹೀಗೆ ಭಕ್ತರ ಅಭೀಷ್ಟಗಳನ್ನು ಪೂರೈಸಿ ಕೈಹಿಡಿದು ಕಾಯುತ್ತಿರುವುದರಿಂದ ಈ ಯಲಗುರದಪ್ಪನನ್ನು ''ಮಾತಾಡುವ ದೇವ''ರೆಂದು ಕರೆಯುತ್ತಾರೆ.

ಈ ಯಲಗುರ ಕ್ಷೇತ್ರವು ರಾಮಾಯಣ ಕಾಲದಿಂದಲೂ ಪ್ರಸಿದ್ಧ. ವಾಸಿಷ್ಠ ರಾಮಾಯಣದಲ್ಲಿ ಈ ಕ್ಷೇತ್ರದ ಉಲ್ಲೇಖ ಬಂದಿದೆ.

''ಒಂದು ದಿನ ಶ್ರೀರಾಮಚಂದ್ರನು ಏಕಾಂತದಲ್ಲಿರುವಾಗ ಸೀತೆಗೆ ವಿನೋದದಿಂದ 'ಹೇ ಪ್ರಿಯೆ, ರಾವಣನಿಂದ ಅಪಹೃತಳಾಗಿ ಲಂಕೆಯಲ್ಲಿರುವಾಗ ರಾವಣನ ಐಶ್ವರ್ಯಾದಿ-ಗಳಿಂದ ನಿನ್ನ ಮನಸ್ಸಿನಲ್ಲಿ ಯಾವ ವಿಚಾರಗಳು ಬಂದವು? ಆಗ ನನ್ನನ್ನು ನೆನೆದೆಯಾ' ಎಂದು ಕರ್ಣಕಠೋರವಾಗಿ ನುಡಿದಂತೆ ನಟಿಸಿದನು. ಲೋಕವಿಡಂಬನಾರ್ಥವಾಗಿ ಸೀತಾಮಾತೆಯೂ ಶ್ರೀರಾಮಚಂದ್ರನ ಈ ಮಾತುಗಳನ್ನು ಕೇಳಿ ಮೂರ್ಛಿತಳಾದಳು. ಶ್ರೀರಾಮನು ಕರುಣೆಯಿಂದ ಉಪಚರಿಸಿದನು. ಸಾವಕಾಶವಾಗಿ ಮೂರ್ಛೆಯಿಂದ ಎದ್ದು ''ಪ್ರಭೋ, ನನ್ನ ಶೀಲದ ಬಗ್ಗೆ ನಿನಗೆ ಸಂಶಯವಿದ್ದರೆ ದುಷ್ಟ ರಾವಣನು ನನ್ನನ್ನು ಎಳೆದೊಯ್ಯುವಾಗ ಅಲ್ಲಿಯೇ ಸಮೀಪದಲ್ಲಿದ್ದ ಶ್ರೀವೆಂಕಟೇಶನು ಸಾಕ್ಷಿಯಾಗಿದ್ದಾ''ನೆಂದು ಹೇಳಿದಳು.

ಕೂಡಲೇ ಪ್ರಭು ರಾಮಚಂದ್ರನು ಲಕ್ಷ್ಮಣ, ಸುಗ್ರೀವ, ಹನುಮಂತರೊಡನೆ ಸೀತಾಗಿರಾ(ಸೀತಿಮನಿ ಗುಡ್ಡ)ಗೆ ಬಂದನು. ಶ್ರೀವೆಂಕಟೇಶನು ದುಷ್ಟ ಖಳನಾದ ರಾವಣನು

---

1. ©. g¿áÃÝÊÞaÝ¿áì ÊáÙX AÊÃá PÆÊâPÝÆ "ññ$ÌÊÝ¨' ÊÞÓ±£ÌP¿á E±& Óí±Ý¨PÃÝX ÓàÊÓÈÓ¨ÊÃá.

ಸೀತೆಯನ್ನು ಬಲಾತ್ಕಾರವಾಗಿ ಒಯ್ದನು. ಅಸಾಹಯಕಳಾದ ಸೀತೆಯು ಆಕ್ರೋಶ ಮಾಡಿದರೂ ಲಕ್ಷಿಸಲಿಲ್ಲ. ಈ ಮಾತು ಸತ್ಯ. ಜಾನಕಿಯು ಪೂರ್ಣ ನಿರ್ದೋಷಿ ಎಂದು ಹೇಳಿದನು. ಇದರಿಂದ ಮತ್ತೊಮ್ಮೆ ಜಗತ್ತಿಗೆ ಸೀತಾಮಾತೆಯ ಪಾತಿವ್ರತ್ಯ ಪ್ರಕಾಶಿತವಾಯಿತು. ಶ್ರೀರಾಮ ಪ್ರೀತನಾಗಿ ಸೀತಾದೇವಿಗೆ ವರವನ್ನು ಕೇಳೆನಲು ಸೀತಾದೇವಿಯು ''ನಿನ್ನ ಅನುಜರೊಂದಿಗೆ ನನ್ನ ಕೂಡ ಇದೇ ಸ್ಥಳದಲ್ಲಿ ಬಹುಕಾಲವಿರಬೇಕು. ಈ ಗಿರಿಯು ಮುಂದೆ ನನ್ನ ಹೆಸರಿನಿಂದಲೇ 'ಸೀತಾಗಿರಿ' ಎಂದು ಪ್ರಸಿದ್ಧವಾಗಬೇಕು.'' ಎಂದು ಪ್ರಾರ್ಥನೆ ಮಾಡಿಕೊಳ್ಳಲು ಶ್ರೀರಾಮನು 'ತಥಾಸ್ತು' ಎಂದು ವರವಿತ್ತನು.

ಶ್ರೀರಾಮಚಂದ್ರನು ವರವಿತ್ತ ಪ್ರಕಾರ ಸೀತಿಮನೆ ಗುಡ್ಡದಲ್ಲಿ ಇಂದಿಗೂ ಇಲ್ಲಿಯೇ ವಾಸವಾಗಿದ್ದಾನೆ. ಆ ಗಿರಿಯ ಮೇಲೆ ರಾಮಾಶ್ರಮವಿದೆ. ಅದರ ಹತ್ತಿರವೇ ರಾಮತೀರ್ಥವಿದೆ. ಜಾನಕಿಯು ಸ್ನಾನ ಮಾಡಿದ ಗುರುತುಗಳಿವೆ. ಜನಕನು ತಪಸ್ಸು ಮಾಡಿ ಸೀತೆಯನ್ನು ಪಡೆದ ಸೀತಾಹೃದವಿದೆ. ಹೀಗೆ ಶ್ರೀರಾಮನು ನೆಲೆಯಾಗಿ ನಿಂತ ಗುರುತುಗಳಿವೆ. ಶ್ರೀರಾಮಚಂದ್ರಪ್ರಭುವು ಸೀತಾಲಕ್ಷ್ಮಣಸಹಿತ ಇಲ್ಲಿ ವಾಸಮಾಡಿದ ಮೇಲೆ ಮಾರುತಿಯು 'ಸ್ವಾಮಿ, ತಾವು ಕಲ್ಪಾಂತದವರೆಗೆ ಇಲ್ಲಿ ಇರುವಿರಿ. ನಿಮ್ಮ ಸನ್ನಿಧಿ-ಯಲ್ಲಿ ನನಗೊಂದು ಸ್ಥಾನ ಮಾಡಿಕೊಡಬೇಕೆಂದು ಪ್ರಾರ್ಥಿಸಿದನು. ವಾಯುಪುತ್ರನ ಬಿನ್ನಹವನ್ನು ಮನ್ನಿಸಿ, ಶ್ರೀರಾಮಚಂದ್ರನು ನಾವು ಲೋಕೋದ್ಧಾರಾರ್ಥವಾಗಿ ಕೃಷ್ಣವೇಣಿಯ ದಕ್ಷಿಣ ತಟಾಕದಲ್ಲಿದ್ದೇವೆ. ನೀನು ನಮ್ಮ ಸಮ್ಮುಖದಲ್ಲಿ ಕೃಷ್ಣೆಯ ಉತ್ತರದಡದಲ್ಲಿ ನೆಲೆ ನಿಂತು ಭಕ್ತರನ್ನು ಉದ್ಧರಿಸೆಂದು ಆಜ್ಞೆ ಮಾಡಿದನು.

ಶ್ರೀರಾಮಚಂದ್ರನ ಆಜ್ಞಾನುಸಾರವಾಗಿ ಸಾಕ್ಷಾತ್ ವಾಯುದೇವರು ಕೃಷ್ಣಾ ನದಿಯ ಉತ್ತರ ತಟಾಕದಲ್ಲಿ ''ಸಪ್ತಗ್ರಾಮ'' ''ಏಳ್ಹೂರು'' ಯಲಗುರಕ್ಷೇತ್ರದಲ್ಲಿ ನೆಲೆ ನಿಂತು ಭಕ್ತರನ್ನು ಅನುಗ್ರಹಿಸುತ್ತಲಿದ್ದಾನೆ.

ವಾಸಿಷ್ಠ ರಾಮಾಯಣದ ಪ್ರಕಾರ ಸೀತಿಮನೆಯಲ್ಲಿ ಸೀತಮ್ಮನ ಗುಡ್ಡ, ಸೀತಾರಾಮರ ಶಿಲಾವಿಗ್ರಹಗಳು, ಸೀತಾದೇವಿಯಂತೆ ಸಾಕ್ಷಿ ಹೇಳುವ ಸಾಕ್ಷಿ ವೆಂಕಟೇಶ ಗುಡಿಗಳಿವೆ.

## ಯಲಗುರ ಶಬ್ದಾರ್ಥ

ಕೃಷ್ಣೆಯ ದಡದಲ್ಲಿರುವ ನಾಗಸಂಪಿಗೆ, ಚಂದ್ರಗಿರಿ, ಅಳಲದಿನ್ನಿ, ಯಲಗೂರ, ಕಾಶಿನಕುಂಟ, ಬೂದಿಹಾಳ, ಮಸೂತಿ ಈ ಏಳು ಊರುಗಳಿಗೆ ಅಧಿಪತಿ ಆಂಜನೇಯನು ಶ್ರೀರಾಮನಾಜ್ಞಾನುಸಾರವಾಗಿ ನಿಂತ ಕ್ಷೇತ್ರವೇ ಯಲಗೂರ. ಯಲಗೂರವನ್ನುಳಿದ ಆರು ಊರುಗಳಲ್ಲಿ ಶ್ರೀಹನುಮಂತದೇವರ ಗುಡಿಗಳಿಲ್ಲ. ಏಳು+ಊರು+ಗುರು+ಈಶನೇ = ಯಲಗುರೇಶನು. ಏಳು+ಊರು+ಗುರು+ಅಪ್ಪ = ಯಲಗುರಪ್ಪ.

*****

# ಉಡುಪಿ ಕೃಷ್ಣನಿಗೆ ರೊಟ್ಟಿಯ ನೈವೇದ್ಯವೇಕೆ?

**ಲೇಖಕರು :- ಶ್ರೀ ಅಡ್ಡೆ ವೇದವ್ಯಾಸಾಚಾರ್ಯ**

ಶ್ರೀಕೃಷ್ಣನ ನೈವೇದ್ಯದಲ್ಲಿ ಕನಕದಾಸನ ಕೈವಾಡವಿದ್ದ ಒಂದು ಕೌತುಕದ ಘಟನೆ :

ಕನಕದಾಸರು ಉಡುಪಿಯಲ್ಲಿದ್ದಾಗ ಹರಿದಿನವೊಂದು ಬಂದಿತ್ತು. ಕನಕದಾಸನು ಆ ದಿನ ಏಕಾಹ ಭಜನೆಯಿಂದ ಇಂದಿನ ದಿನವನ್ನು ಸಾರ್ಥಕಪಡಿಸುವೆನೆಂದು ನಿರ್ಧರಿಸಿದನು. ಬೆಳಿಗ್ಗೆ ಬೇಗನೆ ಎದ್ದನು. ಮಧ್ವಸರೋವರದಲ್ಲಿ ತನ್ನ ದೇಹವನ್ನದ್ದಿಕೊಂಡನು. ಹರಕು ಮುರಕಾದ ತನ್ನ ತಂಬೂರಿಯನ್ನು ತೆಗೆದುಕೊಂಡನು. ಅದನ್ನು ಮೀಟುತ್ತ ಹರಿಕೀರ್ತನೆಗಾರಂಭಿಸಿದನು. ರಾತ್ರಿಯೂ ಆಯಿತು. ಬೆಳಗಿನ ಜಾವವೂ ಆಯಿತು. ಆಗ ಕಣ್ಣು ತೆರೆದ ಕನಕದಾಸನು, ಇಂದು ಶ್ರೀದೇವರಿಗೆ ತಾನೇ ಮೊದಲು ಪಾರಣೆ ಮಾಡಿಸಿಬಿಡಬೇಕೆಂದು ಬಯಸಿದನು. ಕೂಡಲೇ ತನ್ನ ಗಂಟನ್ನು ಬಿಚ್ಚಿ ಸಂಗ್ರಹಸಿಟ್ಟು-ಕೊಂಡಿರುವ ಹಿಟ್ಟನ್ನೀಚೆಗೆ ತೆಗೆದನು. ಮಿಂದು ಬಂದನು. ಹಿಟ್ಟನ್ನು ನೀರಿನಿಂದ ಕಲಸಿದನು. ರೊಟ್ಟಿ ತಟ್ಟಿದನು. ಕಟ್ಟಕಡೆಗೆ ಬೆಂಕಿಯನ್ನು ಮಾಡಿ ಹಸಿಬಿಸಿ ಸುಟ್ಟನು. ಅನಂತರ ಆ ರೊಟ್ಟಿಯನ್ನು ಇಟ್ಟು ಭಕ್ತಿ ಪರವಶನಾಗಿ ದೇವರಿಗರ್ಪಿಸಿದನು. ಹೀಗೆ ಕನಕದಾಸನು ಶ್ರೀಕೃಷ್ಣದೇವರಿಗೆ ಅಂದಿನ ಪಾರಣೆಯನ್ನು ಮೊದಲು ಮಾಡಿಸಿಬಿಟ್ಟನು. ಶ್ರೀಶ್ರೀಗಳವರು ಆಗ ಶ್ರೀಕೃಷ್ಣನ ಪೂಜೆಗೆಂದು ಗುಡಿಯೊಳಗೆ ಮಿಂದು ಬಂದರು. ನಿರ್ಮಾಲ್ಯ-ವಿಸರ್ಜನೆಯನ್ನು ಮಾಡತೊಡಗಿದರು. ಆಗ ಆ ನಿರ್ಮಾಲ್ಯದಲ್ಲಿರುವ ರೊಟ್ಟಿಯ ತುಣುಕನ್ನು ಕಂಡು ಬೆರಗಾದರು. ಭಕ್ತನಾದ ಕನಕದಾಸನು ಭಕ್ತಿ ಪರವಶನಾಗಿ ಗುಡಿಯ ಹೊರವಲಯದಲ್ಲಿ ಅರ್ಪಿಸಿದ ರೊಟ್ಟಿಯನ್ನು ಭಗವಂತನು ಪ್ರೀತಿಯಿಂದ ಸ್ವೀಕರಿಸಿ ಕುರುಹಿಗಾಗಿ ಒಂದು ರೊಟ್ಟಿಯ ಚೂರನ್ನು ಒಳಗೆ ತನ್ನ ಸಮೀಪದಲ್ಲಿ ತೋರಿಸಿದ್ದನು. ಇದನ್ನು ಕಂಡ ಶ್ರೀಗುರುವರ್ಯರು, ಇದು ಕನಕನ ಇಂದಿನ ಭಕ್ತಿಯ ಕಾಣಿಕೆಯೆಂದು ಬಗೆದು ಕನಕನನ್ನು ಕರೆಯಿಸಿ, ಕನಕಾ ! ಇಂದು ಮೊದಲೇ ದೇವನಿಗೆ ಏನನ್ನಾದರೂ ಅರ್ಪಿಸಿ ಪಾರಣೆ ಮಾಡಿಸಿರುವೆಯಾ? ಎಂದು ಕೇಳಿದರು. ಆಗವನು, ದೇವರಿಗಿಂದು ಹಿಟ್ಟಿನ ಹಸಿಬಿಸಿ ರೊಟ್ಟಿಯನ್ನರ್ಪಿಸಿರುವೆನು ಸ್ವಾಮಿ ಎಂದನು. ಆಗ ಅಲ್ಲಿರತಕ್ಕ ಜನರೆಲ್ಲರೂ ಇದನ್ನು ಕಂಡು ಕನಕನ ಮಾತನ್ನು ಕೇಳಿ ಆಶ್ಚರ್ಯಚಕಿತರಾದರು.

ಶ್ರೀಕೃಷ್ಣದೇವರ ಗುಡಿಯ ಉತ್ತರಭಾಗದಲ್ಲಿ ಶ್ರೀದೇವರ ನೈವೇದ್ಯಪದಾರ್ಥಗಳನ್ನು ತಯಾರಿಸುವ ಸ್ಥಳವಿರುವುದು. ಅಲ್ಲಿಂದ ಹೊರ ರಥಬೀದಿಗೆ ಬಂದು ಬೀಳುವಂತಹ ಒಂದು ಚಿಕ್ಕ ಮೋರಿಯನ್ನು ಮಾಡಿರುವರು. ದೇವರ ನೈವೇದ್ಯವನ್ನು ತಯಾರಿಸುವವರು ಆ ಮೋರಿಯಲ್ಲಿ ಮಿಕ್ಕಿದ ಗಂಜಿಯನ್ನು ಚೆಲ್ಲುವುದು, ಕೈ ತೊಳೆಯುವುದು,

---

1. Evá²¿á PĐ¯W Ããq¿á ®Êà¨Â¨ ×®Ç¿á®á ËÊÄÓáÊ D ÇàS® A¨à ûàñ¨ Ë¨ÝÌíÓÃÝ¨ ©.Av ÎàÊà¨ÊÝÓÝaÝ¿áìÃ¨á. AÈ¿á ±Ãí±Ã¿á®á ËÊÄÓáÊ ¨ÑÀáí¨ AÊÃ A¼ÊÞ¯ÁãÝÃá PÙá×Ô¨ D ÇàS® ÊáÖñ$Ì±ä | ìÊ¯ÓáÊà¨á.

ಮೊದಲಾದವುಗಳನ್ನು ಮಾಡುತ್ತಿದ್ದರು. ಅದು ರಥಬೀದಿಯ ಉತ್ತರಭಾಗಕ್ಕೆ ಬಂದು ಬೀಳುತ್ತಲೂ ಇದ್ದಿತ್ತು. ಒಂದು ದಿನ ನೈವೇದ್ಯ ಪದಾರ್ಥಗಳನ್ನು ತಯಾರಿಸತಕ್ಕವರು ಮಹಾಪೂಜೆಯ ನೈವೇದ್ಯಕ್ಕಿಡಬೇಕಾದ ಶಾಲ್ಯನ್ನದ ಗಂಜಿ ಮಿಕ್ಕಿದ್ದನ್ನು ಆ ಮೋರಿಯಲ್ಲಿ ಬಸಿದರು. ಅಲ್ಲಿಯೇ ಸ್ವಲ್ಪದೂರದಲ್ಲಿ ಕನಕದಾಸನು ಕುಳಿತು ಶ್ರೀಕೃಷ್ಣನಿಗೆ ಮಾನಸ-ಪೂಜೆಯನ್ನು ಮಾಡುತ್ತಿದ್ದನು. ಆ ಪೂಜೆಯ ನೈವೇದ್ಯಕಾಲದಲ್ಲಿ ದೈವಪ್ರೇರಣೆಯಿಂದ ಕಣ್ಣು ತೆರೆದು ಒಮ್ಮೆ ನೋಡಿದನು. ಆಗ ಬಿಸಿಬಿಸಿಯಾಗಿ ಹೊರ ಬರುತ್ತಿರುವ ದಪ್ಪವಾದ ಗಂಜಿಯನ್ನು ಕಂಡು ಇದರಿಂದಲೇ ಆ ಹರಿಪೂಜೆಯ ನೈವೇದ್ಯವನ್ನು ಮುಗಿಸುವೆನೆಂದು ಸಂಕಲ್ಪಿಸಿದನು. ಕೂಡಲೇ ತೆಂಗಿನ ಚಿಪ್ಪನ್ನೊಂದನ್ನಾರಿಸಿ ಚೆನ್ನಾಗಿ ತೊಳೆದನು. ಅದರಿಂದ ಬಸಿಯುತ್ತಿರುವ ದಪ್ಪವಾದ ಗಂಜಿಯನ್ನು ಶೇಖರಿಸಿದನು. ಸ್ವಲ್ಪ ತನ್ನಲ್ಲಿದ್ದ ಹಿಟ್ಟನ್ನು ತೆಗೆದು ಅದೇ ಗಂಜಿಯಿಂದ ಕಲಸಿ ಹಸಿಬಿಸಿಯಾದ ರೊಟ್ಟಿಗಳನ್ನು ತಯಾರಿಸಿದನು. ಅನಂತರ ಆ ರೊಟ್ಟಿಯನ್ನೂ ಕರಟದಲ್ಲಿ ಹಿಡಿದಿಟ್ಟ ಗಂಜಿಯನ್ನೂ ತನ್ನ ಮಾನಸಮೂರ್ತಿಗೆ ಅರ್ಪಿಸಿದನು. ಅಂದು ಪರ್ಯಾಪಪೀಠದಲ್ಲಿದ್ದ ಶ್ರೀಮದ್ವಾದಿರಾಜಯತಿವರೇಣ್ಯರು ಮಹಾಪೂಜೆ ಮಾಡಲು ಕುಳಿತು ಶ್ರೀಕೃಷ್ಣನನ್ನು ಭಕ್ತಿಯಿಂದ ಅರ್ಚಿಸಿ, ಧೂಪವನ್ನೂ ದೀಪವನ್ನೂ ಅರ್ಪಿಸಿದರು. ಆಗ ದೇವರ ನೈವೇದ್ಯ ಪದಾರ್ಥಗಳನ್ನು ಗುಡಿಯೊಳಗೆ ತಂದಿರಿಸಿದರು. ಶ್ರೀಗುರುಗಳು, ಕನಕದಾಸನು ಅರ್ಪಿಸಿರುವ ಗಂಜಿಯು ಯಾವ ನೈವೇದ್ಯ ಪದಾರ್ಥವಾಗಿದ್ದಿತೋ ಅಂತಹ ಮುಖ್ಯ ಶಾಲ್ಯನ್ನವನ್ನು ಕಂಡು ಮೊದಲೇ ಶ್ರೀದೇವರಿಗಿದು ಅರ್ಪಿತವಾಗಿರುವುದನ್ನರಿತು, ಅದನ್ನು ಹೊರಗೆ ಕಳುಹಿಸಿ ಬೇರೆ ನೈವೇದ್ಯವನ್ನು ತಯಾರಿಸಿ ತರಹೇಳಿದರು. ಅಂತೆಯೇ ಬೇರೆ ತಯಾರಾದ ಶಾಲ್ಯನ್ನವನ್ನು ದೇವರಿಗರ್ಪಿಸಿ, ತಮ್ಮ ಮಹಾಪೂಜೆಯನ್ನು ಮುಗಿಸಿ ಮುಂದಿನ ಎಲ್ಲ ಕಾರ್ಯ-ಕಲಾಪಗಳನ್ನು ಮುಗಿಸಿ, ಭಿಕ್ಷೆಯನ್ನು ಸ್ವೀಕರಿಸಿದರು. ತೀರ್ಥಕಾಲದಲ್ಲಿ ಗುರುಗಳು ಕನಕದಾಸನನ್ನು ಕರೆದು, 'ಕನಕ ! ದೇವರಿಗಿಂದೇನನ್ನು ಅರ್ಪಿಸಿರುವೆ? ಎಂದು ಮಂದಸ್ಮಿತರಾಗಿ ಕೇಳಿದರು. ಆಗ ಅವನು 'ಬಡವನಾದ ನಾನು ಆ ದೇವರಿಗಿನ್ನೇ-ನರ್ಪಿಸಬಲ್ಲೆ? ವ್ಯರ್ಥವಾಗುವ ಹೊರಬರುತ್ತಿರುವ ಗಂಜಿಯನ್ನು ಕಂಡೆನು. ಬಡವರು ಕುಡಿಯುವ ಗಂಜಿಯನ್ನು ಕಂಡು ಆಶೆಯಾಯಿತು. ಇದನ್ನೇ ತೆಗೆದಿಟ್ಟು ದೇವರಿಗ-ರ್ಪಿಸಿದರಾಯಿತೆಂದು ಬಗೆದು ಕರಟದಲ್ಲಿ ಹಿಡಿದು, ಅದರಿಂದಲೇ ಹಿಟ್ಟನ್ನು ಕಲಸಿ, ರೊಟ್ಟಿ ಮಾಡಿ ಇವೆರಡನ್ನು ದೇವರಿಗೆ ಅರ್ಪಿಸಿಬಿಟ್ಟೆನು. ಆಗದು ಕೃಷ್ಣಾರ್ಪಣವಾಗಿ ಹೋಯಿತು ಎಂದಂದುಬಿಟ್ಟನು. ಇದನ್ನು ಕೇಳಿದ ಗುರುರಾಜರು ಇವನ ಭಕ್ತಿಯ ಮಹಾಮಹಿಮೆಯನ್ನು ಕಂಡು ಕೊಂಡಾಡಿ ಅಂದಿನಿಂದ ಈ ವಿಚಾರದ ಕುರುಹಾಗಿ ಪ್ರತಿದಿನ ಶ್ರೀದೇವರ ಮಹಾನೈವೇದ್ಯ ಕಾಲದಲ್ಲಿ ಹಸಿಬಿಸಿ ರೊಟ್ಟಿ ಹಾಗೂ ಗಂಜಿಗಳನ್ನು ನೈವೇದ್ಯಕ್ಕಿಡಲು ಅಣತಿ ಮಾಡಿಬಿಟ್ಟರು. ಅಂದಿನಿಂದ ಇದುವರೆಗೂ ಆ ಪದ್ಧತಿಯು ಶ್ರೀಕೃಷ್ಣದೇವರ ಮಹಾಪೂಜಾ ಕಾಲದಲ್ಲಿ ನಡೆದುಬರುತ್ತಿರುವುದು.

*****

# ಮಂತ್ರಾಲಯದ ಮಹಾಮುನಿ ಶ್ರೀರಾಘವೇಂದ್ರರು

## (೦೪-೦೮-೧೨ರಂದು ಆರಾಧನೆಯ ನಿಮಿತ್ತ ವಿಶೇಷಲೇಖನ)

ಲೇ – ವಿಪ್ರ

ಜಾಗತಿಕಮಟ್ಟದಲ್ಲಿ ಕೇಳಿಬರುವ ಒಬ್ಬ ಮಾಧ್ವಯತಿಯ ಹೆಸರು ಎಂದರೆ ಶ್ರೀರಾಘವೇಂದ್ರಸ್ವಾಮಿಗಳದ್ದೇ. ದೇಶ,ಭಾಷೆ, ಮತ, ಕೋಮು ಮೊದಲಾದವುಗಳನ್ನು ಮೀರಿ ಅವರು ಪೂಜ್ಯರು ಎನಿಸಿರುವುದು ಈ ಕಾಲದ ಅದ್ಭುತಗಳಲ್ಲೊಂದು. ವೃಂದಾವನಸ್ಥರಾಗಿ ೩೩೭ವರ್ಷಗಳು ಕಳೆದಿದ್ದರೂ ಅವರ ಮಹಿಮೆ ಇನ್ನೂ ಅತಿಶಯವಾಗಿ ಕಂಗೊಳಿಸುತ್ತಿರುವುದು ಅವರ ಅಗಾಧವಾದ ಹಿರಿಮೆಗೆ ಸಾಕ್ಷಿ. ಮಂಚಾಲೆ ಎಂಬ ಹೆಸರಿನ ಕುಗ್ರಾಮ ಮಂತ್ರಾಲಯ ಎಂಬ ಮಾಂತ್ರಿಕಸಿದ್ಧಿಕ್ಷೇತ್ರವಾಗಿ ಬದಲಾದದ್ದು ಇವರ ವ್ಯಕ್ತಿತ್ವದ ಹಿರಿಮೆಗೆ ಮತ್ತೊಂದು ಸಾಕ್ಷಿ.

ತಂದೆ ತಿಮ್ಮಣ್ಣಭಟ್ಟರು, ತಾಯಿ ಗೋಪಿಕಾಂಬಾ, ವಂಶ ವೀಣಾ ಎಂಬ ಪ್ರಸಿದ್ಧ ಶ್ರೋತ್ರಿಯ ವಂಶ ; ತಾತ ಕನಕಾಚಲಭಟ್ಟರು, ಮುತ್ತಾತ ವೀಣಾಕೃಷ್ಣಭಟ್ಟರು ; ಅವರು ವಿಜಯನಗರದ ಕೃಷ್ಣದೇವರಾಯನಂತಹ ಚಕ್ರವರ್ತಿಗೆ ವೀಣೆಯ ಗುರುಗಳಾಗಿದ್ದವರು. ಜನನ ತಿರುಪತಿಯ ವೇಂಕಟೇಶನ ಅನುಗ್ರಹದ ಫಲ. ಆದಕ್ಕೆಂದೇ ವೇಂಕಟನಾಥ ಎಂದು ನಾಮಕರಣ. ಚಿಕ್ಕಂದಿನಲ್ಲಿಯೇ ಪಿತೃವಿಯೋಗ. ಅಣ್ಣ ಗುರುರಾಜಾಚಾರ್ಯರ ಮೇಲ್ವಿಚಾರಣೆಯಲ್ಲಿ ವಿದ್ಯಾಭ್ಯಾಸ; ಭಾವ ಲಕ್ಷ್ಮೀನರಸಿಂಹಾಚಾರ್ಯರೇ ಆರಂಭದ ಗುರುಗಳು. ಮುಂದಿನ ವಿದ್ಯಾಭ್ಯಾಸ ಶ್ರೀವಿಜಯೀಂದ್ರತೀರ್ಥರಂತಹ ಮಹಾವಿದ್ವದ್ವರೇಣ್ಯರ ಶಿಷ್ಯವರ್ಯರಾದ ಶ್ರೀಸುಧೀಂದ್ರತೀರ್ಥರಲ್ಲಿ. ಹದಿನಾರರ ವೇಳೆಗೆ ಸರಸ್ವತಿ ಎಂಬ ಕನ್ಯೆಯೊಂದಿಗೆ ವಿವಾಹ. ಇಪ್ಪತ್ತರ ತಾರುಣ್ಯದಲ್ಲೇ ಮಹಾಭಾಷ್ಯ ಎಂಬ ಅಪೂರ್ವವಾದ ವಿದ್ಯಾಪ್ರಶಸ್ತಿ. ಪೂರ್ವಾಶ್ರಮದಲ್ಲೇ ಗ್ರಂಥರಚನೆಗೆ ನಾಂದಿ. ಕಿರಿಯವಯಸ್ಸಿನ ಪತ್ನಿ, ಹಸುಗೂಸು ಲಕ್ಷ್ಮೀನಾರಾಯಣರೊಂದಿಗೆ ಚಿಕ್ಕಸಂಸಾರದ ನಿರ್ವಹಣೆಯೂ ದುಸ್ತರವೆನ್ನಿಸಿದ್ದ ಭಯಂಕರದಾರಿದ್ರ್ಯ. ಆ ಸಮಯದಲ್ಲೂ ಎಡಬಿಡದೆ ಶ್ರೀಸುಧೀಂದ್ರತೀರ್ಥರ ಪದತಲದಲ್ಲಿ ವಿದ್ಯಾಭ್ಯಾಸ. ಸಕಲಶಾಸ್ತ್ರಗಳಲ್ಲೂ ತಲಸ್ಪರ್ಶಿಪಾಂಡಿತ್ಯ. ಪಕ್ಷಕ್ಕೆ ಐದಾರು ಪೂರ್ಣೋಪವಾಸಗಳ ಮಧ್ಯೆ ಸಾಧನೆ. ಅಪಾರಮಂತ್ರಸಿದ್ಧಿಯಿದ್ದರೂ ಅವುಗಳ ಫಲವನ್ನು ಅಪೇಕ್ಷಿಸದ ನಿಸ್ಪೃಹಜೀವನ. ಮತ್ತೊಬ್ಬರಿಗೆ ಕೈಚಾಚದೇ ಬದುಕುವ ಶಾಸ್ತ್ರೋಕ್ತವಾದ ಭಾಗವತಧರ್ಮದ ಅನುಷ್ಠಾನ. ಇದೆಲ್ಲದರ ಫಲಶ್ರುತಿ ಎಂಬಂತೆ ಸನ್ಯಾಸಕ್ಕೆ ಕರೆ. ಗುರುಗಳ ಆದೇಶದ ಹಿನ್ನೆಲೆಯಲ್ಲೂ ಸಂಸಾರದ ಜವಾಬ್ದಾರಿಯ ಎಚ್ಚರ, ಸಾಕ್ಷಾದ್ವಿದ್ಯಾಲಕ್ಷ್ಮಿಯಾದ ಸರಸ್ವತಿಯ ಅನುಗ್ರಹ, ಸನ್ಯಾಸಕ್ಕೆ ಆದೇಶ. ಅದರ ಫಲವಾಗಿ ಶ್ರೀರಾಘವೇಂದ್ರತೀರ್ಥರೆಂದು ಶ್ರೀಸುಧೀಂದ್ರತೀರ್ಥರಿಂದ ಸನ್ಯಾಸ ದೀಕ್ಷೆ. ಮುಂದಿನದು ಇತಿಹಾಸ. ಸನ್ಯಾಸದ ಬಳಿಕ ಎರಡು ವರ್ಷಗಳ ಅನಂತರ ಶ್ರೀಸುಧೀಂದ್ರತೀರ್ಥರ ಉತ್ತರಾಧಿಕಾರಿಯಾಗಿ ಪೀಠಾರೋಹಣ. ತಂಜಾವೂರಿಗೆ ಒದಗಿದ್ದ

ಹನ್ನೆರಡು ವರ್ಷಗಳ ಭೀಕರಕ್ಷಾಮಕಾಲದಲ್ಲಿ ಇಡೀ ಊರಿಗೆ ನಿತ್ಯಾನ್ನದಾನ ಮಾಡಿದ ಅಪೂರ್ವಸಿದ್ಧಿ. ಅನಂತರಕಾಲದಲ್ಲಿ ಎಡೆಬಿಡದ ಪಾಠಪ್ರವಚನ, ದೇಶಸಂಚಾರ, ವಾದಿಜಯ, ಶಿಷ್ಯೋಪದೇಶ, ಗ್ರಂಥರಚನೆ. ಫಲವಾಗಿ ಅಸಂಖ್ಯ ಸುಜೀವಿಗಳನ್ನು ಭಗವತ್ಪರರನ್ನಾಗಿಸಿದ ಸಾಧನೆ. ದೀನದಲಿತರಿಗೆ ನೆಮ್ಮದಿಯ ನೆಲೆಯಾದ ಇವರ ಭವ್ಯಜೀವನ ಅಧ್ಯಾತ್ಮಕ್ಷೇತ್ರದ ಒಂದು ಪವಾಡ. ಪವಾಡಚಕ್ರವರ್ತಿಯೆಂದೇ ಖ್ಯಾತರಾದ ಇವರದು ಶುದ್ಧ ವೈದಿಕಸಿದ್ಧಿ. ಜ್ಞಾನಭಕ್ತಿಗಳ ಹಿನ್ನೆಲೆಯಲ್ಲಿ ರೂಪುಗೊಳ್ಳುವ ಇವರ ಪವಾಡಗಳು ಇಹ ಜೀವನಕ್ಕೆ ಮಾತ್ರವಲ್ಲದೇ ಪರಜೀವನಕ್ಕೂ ಭದ್ರತೆ ಒದಗಿಸುವ ಅದ್ಭುತಗಳು.

ಶ್ರೀಮಧ್ವಶಾಸ್ತ್ರದ ಪ್ರಸಾರದ ದೃಷ್ಟಿಯಲ್ಲಿ ಟಿಪ್ಪಣ್ಯಾಚಾರ್ಯಚಕ್ರವರ್ತಿ ಎಂಬ ಅಪೂರ್ವಖ್ಯಾತಿ. ಸರಳತೆಯ ಹಿನ್ನೆಲೆಯಲ್ಲಿ ಮೈದಳೆದಿರುವ ಇವರ ಕೃತಿಗಳು ವಿಷಯದ ಸಮಗ್ರತೆ, ಚಿಂತನೆಯ ಗಾಂಭೀರ್ಯ, ನಿರೂಪಣೆಯ ನಿಖರತೆಗಳಿಂದಾಗಿ ವಿದ್ವ-ನ್ಮಾನ್ಯವಾಗಿವೆ. ಕೃತಿರಚನೆಯ ವೈವಿಧ್ಯವು ಸಹ ಅನನ್ಯವಾದದ್ದು. ವೈದಿಕಸಾಹಿತ್ಯದಿಂದ ಸ್ತೋತ್ರಸಾಹಿತ್ಯದ ವರೆಗೆ ಎಲ್ಲ ಬಗೆಯ ಪ್ರಾಕಾರಗಳಿಗೂ ಇವರ ಕಾಣಿಕೆ ವಿಶಿಷ್ಟ ರೀತಿಯಲ್ಲಿ ಸಂದಿದೆ. ಪರಿಮಳಾಚಾರ್ಯರು ಎಂಬ ಹೆಸರು ಇವರ ವಿದ್ವತ್ಖ್ಯಾತಿಗೆ ಸಾಕ್ಷಿಯಾದರೆ ಕಲಿಯುಗದ ಕಲ್ಪವೃಕ್ಷ, ಕಾಮಧೇನು ಎಂಬ ಪ್ರಶಸ್ತಿಗಳು ಇವರ ಮಂತ್ರಸಿದ್ಧಿ, ಲೋಕಕಾರುಣ್ಯಗಳಿಗೆ ಹಿಡಿದ ಕನ್ನಡಿಯಾಗಿವೆ. ಇಂದಿಗೂ ನೊಂದ ಜನ ಆಧ್ಯಾತ್ಮಿಕ ನೆಮ್ಮದಿಯನ್ನು ಕಂಡುಕೊಳ್ಳಲು ಸಾಲುಸಾಲಾಗಿ ಇವರತ್ತ ಧಾವಿಸುವುದು ಇವರ ಜ್ಞಾನಸಿದ್ಧಿಯ ಮತ್ತೊಂದು ಮುಖ.

ಸಶರೀರಬೃಂದಾವನಪ್ರವೇಶ ಇವರ ಮತ್ತೊಂದು ಅದ್ಭುತಪವಾಡ. ಕ್ರಿ.ಶ.೧೬೭೧-ರಲ್ಲಿ ಶ್ರೀವಾದಿರಾಜಸ್ವಾಮಿಗಳು ತೋರಿಸಿದ್ದ ಗೀತೋಕ್ತವಾದ ಜ್ಞಾನಿಗಳ ದೇಹತ್ಯಾಗದ ಸಿದ್ಧಿಯನ್ನು ಪುನರಾವರ್ತಿಸಿದ ಹಿರಿಮೆ ಇವರದಾಯಿತು. ಇವರ ಮೇಲೆ ರಚಿತವಾದ ಅಪ್ಪಣಾಚಾರ್ಯರ ಶ್ರೀರಾಘವೇಂದ್ರಸ್ತೋತ್ರ, ವಾಯುಸ್ತುತಿಯ ನಂತರ ಹೆಚ್ಚು ಪ್ರಖ್ಯಾತಿ ಪಡೆದಿರುವ ವಿಶಿಷ್ಟವಾದ ಗುರುಸ್ತೋತ್ರ. ತಮ್ಮ ಬೃಂದಾವನಪ್ರವೇಶದ ದಿನವನ್ನು ವರ್ಷಗಟ್ಟಲೆ ಮುಂಚಿತವಾಗಿ ತಿಳಿಸುವುದರೊಂದಿಗೆ ತಮ್ಮ ಬೃಂದಾವನದ ರೂಪು-ರೇಖೆಗಳನ್ನು ಸಹ ನೀಡಿ ಅದರ ನಿರ್ಮಾಣಕ್ಕೆ ಮಾರ್ಗದರ್ಶನ ಮಾಡಿದ ಹಿರಿಮೆಯೂ ಇವರದು.

ಎಲ್ಲಕ್ಕಿಂತ ಮುಖ್ಯವಾಗಿ ಸಮಾಜದ ಉನ್ನತಿಗೆ ಅಗತ್ಯವಾದ ಅಂತರ್ದೃಷ್ಟಿಯನ್ನು ಮೆರೆದ ಹಿರಿಮೆ ಇವರದು. ಜ್ಞಾನಿಗಳು, ತಪಸ್ಸಿದ್ಧರೂ, ವಾಕ್ಯಾರ್ಥಕೋವಿದರೂ, ಕಾಲಕಾಲಕ್ಕೆ ದೊರೆಯಬಹುದು. ಆದರೆ ಶ್ರೀರಾಘವೇಂದ್ರಸ್ವಾಮಿಗಳಂತೆ ಸಮಾಜದ ಸರ್ವಾಂಗೀಣ ಅಭ್ಯುದಯಕ್ಕೆ ಚಿಂತನೆ ನಡೆಸಿ, ಅದನ್ನು ಕಾರ್ಯರೂಪಕ್ಕೆ ತರುವ ಋಷಿಚೈತನ್ಯ ಎಲ್ಲರಿಗೂ ಸಿದ್ಧಿಸದು. ಇದು ರಾಘವೇಂದ್ರರಂತಹವರನ್ನು ಇತರ ಅನೇಕ-

ರಿಗಿಂತ ಭಿನ್ನರಾಗಿ ನಿಲ್ಲಿಸುವ ವಿಶಿಷ್ಟವಾದ ಸಾಧನೆ. ತಮ್ಮ ಪ್ರತಿಯೊಂದು ಕಾರ್ಯದಲ್ಲೂ ಶ್ರೀಮಧ್ವಾಚಾರ್ಯರ ಸಂದೇಶವನ್ನು ಪೂರ್ಣಪ್ರಮಾಣದಲ್ಲಿ ಅಳವಡಿಸಿಕೊಂಡು ಭಗವಂತನ ಪಾರಮ್ಯದ ಚಿಂತನೆಯ ಹಿನ್ನೆಲೆಯಲ್ಲಿ ಸಕಲಸಿದ್ಧಿಗಳನ್ನು ಸಾಧಿಸುವ ಇವರ ಜೀವನವೈಖರಿ ಸಹಸ್ರ ಸಹಸ್ರವರ್ಷಗಳ ಕಾಲ ಅಧ್ಯಾತ್ಮಜಗತ್ತಿನಲ್ಲಿ ಕಂಗೊಳಿಸುವುದು ಸುನಿಶ್ಚಿತ. ಮಧ್ವಸಿದ್ಧಾಂತದ ಪ್ರಾಯೋಗಿಕಮುಖದಂತೆ ಶ್ರೀರಾಘವೇಂದ್ರರಂತಹವರ ಮಹಿಮೆ ಕಂಗೊಳಿಸುತ್ತದೆ.

ಸಾಮಾನ್ಯಸಿದ್ಧಿಯ ಜನರೇ ತಮ್ಮನ್ನು ಭಗವಂತ ಎಂದು ಕರೆದುಕೊಳ್ಳುವ ಇಂತಹ ದುರ್ದಿನಗಳಲ್ಲಿ ಅಸಾಮಾನ್ಯಸಿದ್ಧಿಯ ಈ ಮಹನೀಯರು ತಮ್ಮನ್ನು ಕೇವಲ ಭಗವಂತನ ದಾಸಾನುದಾಸ ಎಂದು ಸಾರಿದ್ದು ಮಧ್ವಸಿದ್ಧಾಂತದ ಹಿರಿಮೆಗೆ ಜ್ವಲಂತ ನಿದರ್ಶನ. ಹಿಂದೆ ಹನುಮಂತನಾಗಿ ರಾಮಸೇವೆಗೈದಿದ್ದ ಶ್ರೀಮಧ್ವಾಚಾರ್ಯರ ಸರ್ವಮಾನ್ಯವಾದ ಸಿದ್ಧಾಂತವನ್ನು ಜನತೆಗೆ ತಮ್ಮ ಜೀವನಾದರ್ಶದ ಮೂಲಕವೇ ಸಾರುವ ಇವರ ರೀತಿ ಅನನ್ಯವಾದುದು.

ಸತ್ಯಧರ್ಮರತರಾದವರಿಗೆ ಪೂಜ್ಯತೆ ಲಭಿಸುವುದಕ್ಕೂ, ಅಂತಹವರು ಜನಗಳ ಪಾಲಿಗೆ ಕಲ್ಪವೃಕ್ಷ ಕಾಮಧೇನುಗಳಂತೆ ಅಭೀಷ್ಟಸಾಧಕರಾಗುವುದಕ್ಕೂ ಶ್ರೀರಾಘವೇಂದ್ರರ ಜೀವನ ಅತ್ಯಂತ ಅಪೂರ್ವವಾದ ಸ್ಫೂರ್ತಿಕೇಂದ್ರ. ಈ ಹಿನ್ನೆಲೆಯಲ್ಲಿ ಅವರ ಆರಾಧನೆಗೆ ಇರುವ ಮಹತ್ತ್ವ ಅಪೂರ್ವವಾದುದು, ಅಪಾರವಾದುದು.

ಸಮಗ್ರಜನತೆಯಲ್ಲಿ ನಾಡ ಹಬ್ಬದಂತೆ ಆಚರಿಸಲ್ಪಡುವ ಅವರ ಆರಾಧನೆ ಈ ನಾಸ್ತಿಕ್ಯದ ಯುಗದಲ್ಲೂ ಆಸ್ತಿಕ್ಯದ ಕಂಪನ್ನು ಎಲ್ಲೆಡೆ ಬೀರುವ ಅದ್ಭುತ ಮಂತ್ರಶಕ್ತಿ. ಲಕ್ಷಾಂತರ ಜನಗಳಿಗೆ ಅನ್ನದಾನವನ್ನು ಶತಮಾನಗಳಿಂದ ಮಾಡುತ್ತಾ ಬಂದಿರುವ ಈ ಉತ್ಸವ ಜನಕೋಟಿಯ ಚಿಂತನೆಯ ದಿಕ್ಕನ್ನೇ ಬದಲಿಸುವಂತಹ ಅಪೂರ್ವ ಪುಣ್ಯಕಾರ್ಯ.

ಈ ಆರಾಧನೆಯ ಸುಸಂದರ್ಭವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಭಗವಂತನ ಪಾರಮ್ಯವನ್ನು, ಸತ್ಯಧರ್ಮಗಳ ಮಹತ್ತ್ವವನ್ನೂ ವಿವರಿಸುವ ಜ್ಞಾನಕಾರ್ಯಕ್ಕೆ ಪ್ರಾಧಾನ್ಯನೀಡಿದಲ್ಲಿ ಜನತೆಯ ಬದುಕು ಹಸನಾದೀತು !

*****

**ಸುಗ್ರೀವನ ಪಟ್ಟಾಭಿಷೇಕಕ್ಕೆ ವನವಾಸದ ಕಾರಣವನ್ನು ಮುಂದಿಟ್ಟು ಶ್ರೀರಾಮ ತಾನು ಸ್ವತಃ ತೆರಳಲು ನಿರಾಕರಿಸುತ್ತಾನೆ. ಆದರೆ ತನ್ನ ಪ್ರತಿನಿಧಿಯಾಗಿ ಹನುಮಂತ ಆ ಕಾರ್ಯವನ್ನು ನಿರ್ವಹಿಸುವುದಾಗಿ ತಿಳಿಸುತ್ತಾನೆ. ಅದರಂತೆ ಕಲಿಯುಗ ಎಂಬ ಕಾರಣವನ್ನು ಮುಂದಿಟ್ಟು ಸ್ವತಃ ಅವತರಿಸದ ಭಗವಂತ ಆ ಹನುಮಂತನೇ ಆದ ಶ್ರೀಮದ್ವಾಚಾರ್ಯರನ್ನು ಸಜ್ಜನರ ಸಂರಕ್ಷಣೆಯಾಗಿ ಕಳುಹಿಸಿದ್ದಾನೆ. ಹೀಗೆ ಸರ್ವೋತ್ತಮನಾದ ಶ್ರೀಹರಿಯ ಪ್ರತಿನಿಧಿಯಾಗಿ ಜೀವೋತ್ತಮರಾದ ಶ್ರೀವಾಯು-ದೇವರು ಕಾಣಿಸಿಕೊಳ್ಳುತ್ತಾರೆ ಎಂಬುದು ವಿಶೇಷ.**

# ಸುಮಧ್ವವಿಜಯದಲ್ಲಿ ಶ್ರೀಮದಾಚಾರ್ಯರ ಅವತಾರಕಾಲ

- ಜಯಂತ ವ್ಯಾಸನಕೆರೆ

ತಮ್ಮ ಅವತಾರಕಾಲವು ಕ್ರಿ.ಶ. 1200 ಎಂಬುದಾಗಿ ಶ್ರೀಮದಾಚಾರ್ಯರೇ ಬಹುಬಾರಿ[1] ಹೇಳಿಕೊಂಡಿದ್ದಾರೆ. ಪ್ರಾಚೀನವ್ಯಾಖ್ಯಾನಗಳಲ್ಲಿ ಈ ವಾಕ್ಯಗಳಿಗೆ ಅರ್ಥಾಂತರವಾಗಲೀ, ಸಂಕೋಚವಾಗಲೀ, ಪ್ರಕ್ಷೇಪಶಂಕೆಯಾಗಲೀ ಕಂಡುಬರುವುದಿಲ್ಲ. ಇಂದು ಉಪಲಬ್ಧವಿರುವ ಅನೇಕ ಶಾಸನಗಳು, ಕೈಫಿಯತ್ತುಗಳು, ಸೂರ್ಯಗ್ರಹಣದ ಪ್ರಸಂಗ, ಮುಂತಾದವುಗಳೂ ಈ ಕಾಲಕ್ಕೆ ಸಂವಾದಿಯಾಗಿವೆ.

ಪರಿಸ್ಥಿತಿ ಹೀಗಿರುವುದರಿಂದ ಮುಂದಿನ ಪೀಳಿಗೆಗಳಲ್ಲಿ ಆ ವಿಷಯವಾಗಿ ಗೊಂದಲಕ್ಕೆ ಅವಕಾಶವೇ ಇಲ್ಲವೆಂಬ ಆಶಯದಿಂದಲೋ ಏನೋ ಶ್ರೀನಾರಾಯಣಪಂಡಿತಾಚಾರ್ಯರು ಆ ಅವತಾರಕಾಲವನ್ನು ಸುಮಧ್ವವಿಜಯದಲ್ಲಾಗಲೀ ಭಾವಪ್ರಕಾಶಿಕೆಯಲ್ಲಾಗಲೀ ವ್ಯಕ್ತವಾಗಿ ಹೇಳಿಲ್ಲ. ಆದರೂ ಸುಮಧ್ವವಿಜಯವು ಕೇವಲ ಕಾವ್ಯವಲ್ಲದೇ ಒಂದು ಇತಿಹಾಸವೂ ಆಗಿರುವುದರಿಂದ ಕಥಾನಾಯಕನ ಅವತಾರಕಾಲದಂತಹ ಮುಖ್ಯಮಾಹಿತಿಯನ್ನು ತೊರೆಯಲು ಅವರಿಗೆ ಮನಸ್ಸಾಗಿಲ್ಲ. ಆದ್ದರಿಂದ ಮುಖತಃ ಅಲ್ಲದಿದ್ದರೂ ಆ ಅವತಾರಕಾಲವು ಸೂಚಿಸಲ್ಪಡದೇ ಉಳಿದಿಲ್ಲ ಎಂದೆನಿಸುತ್ತದೆ.

ಸುಮಧ್ವವಿಜಯದ ದ್ವಿತೀಯಸರ್ಗದಲ್ಲಿ 4 ಶ್ಲೋಕಗಳು (ಶ್ಲೋಕ 23 ರಿಂದ 26) ಶ್ರೀಮದಾಚಾರ್ಯರ ಅವತಾರವನ್ನು ವರ್ಣಿಸಲೆಂದೇ ಮೀಸಲಾಗಿವೆ.

ಇವುಗಳಲ್ಲಿ **ಮೊದಲ** ಶ್ಲೋಕದ **ಮೊದಲ** ಪಾದವು

''**ಕಾ**ಂತಾದೃತೌ ಸಮುಚಿತೇಽಥ ಬಭಾರ ಗರ್ಭಂ'' ಎಂದು.

**ಎರಡನೆಯ** ಶ್ಲೋಕದ **ಎರಡನೆಯ** ಪಾದವು

''**ಯಾ**ವತ್ ದ್ವಿಜೇಂದ್ರವನಿತಾ ಸುಷುವೇಽತ್ರ ತಾವತ್'' ಎಂದು.

**ಮೂರನೆಯ** ಶ್ಲೋಕದ **ಮೂರನೆಯ** ಪಾದವು

''**ರಾ**ಜೇವ ಸತ್ಪುರವರಂ ಭುವನಾಧಿರಾಜಃ'' ಎಂದು.

**ನಾಲ್ಕನೆಯ** ಶ್ಲೋಕದ **ನಾಲ್ಕನೆಯ** ಪಾದವು

''**ಪ್ರಾ**ಶ್ರಾವಿ ಕೌತುಕವಶೈರಿವ ಮಾನವೈಶ್ಚ'' ಎಂದು.

ಈ ನಾಲ್ಕು ಪಾದಗಳ ಮೊದಲ ಅಕ್ಷರಗಳಿಗೆ ಕಟಪಯಾದಿ ಸಂಕೇತದಂತೆ ಕ=1, ಯ=1, ರ=2, ಪ್ರ=2 ಎಂಬ ಅರ್ಥವಿದೆ. ಆದ್ದರಿಂದ ಈ ಅಕ್ಷರಗಳನ್ನು ಜೋಡಿಸಿದಾಗ 1122 ಎಂಬ ಸಂಖ್ಯೆ ಪ್ರಾಪ್ತವಾಗುತ್ತದೆ. ಆ ಕಾಲದ ಬಳಕೆಯಂತೆ ಇದನ್ನು **ಶಾಲಿವಾಹನ ಶಕ** 1122 ವರ್ಷಗಳೆಂದುಕೊಂಡರೆ ಅದು ಕ್ರಿ.ಶ. 1200ಕ್ಕೆ ಸರಿಹೊಂದುತ್ತದೆ.[2] ಇದು ಶ್ರೀಮದಾಚಾರ್ಯರ ವಾಕ್ಯಗಳಿಗೆ ನಿಸ್ಸಂಕೋಚವಾಗಿ ಅನುಗುಣವಾಗುವ ಕಾಲ !

---

1. ÊáÖÝ»ÝÃññÝñ¿áì ¯ | ì¿á & 9/100, 32/122, 32/125.
2. ±Ì GíŸá¨ÃÈ® ±PÝÃ©í¨ 1 GíŸ ÓíTÂ¿áã ÓÝ«ÂËÃáÊâ¨Äí¨ Jí¨á A¥ÊÝ A« ì ÊÐì¨ ÊÂñÝÂÓWÙá D ÇàS®¨ ÊÝÂ²W ŸÃáÊâ©Æ.

ಈ ರೀತಿ 4 ವಿಭಿನ್ನ ಶ್ಲೋಕಗಳ 4 ವಿಭಿನ್ನ ಪಾದಗಳಲ್ಲಿ ಅವತಾರಕಾಲವನ್ನು "ಬಚ್ಚಿಡುವ" ವಿಚಿತ್ರ ವಿಧಾನವೇಕೆ? ಚಿತ್ರ-1ನ್ನು ಗಮನಿಸಿ. ಸಾಮಾನ್ಯವಾಗಿ ಹಿಂದಿನ ಶ್ಲೋಕ ಮುಕ್ತಾಯಗೊಂಡಮೇಲೆ ಅದರ **ಕೆಳಗೆ** ಮುಂದಿನ ಶ್ಲೋಕವನ್ನು ಬರೆಯಲಾಗುತ್ತದೆ/ಮುದ್ರಿಸಲಾಗುತ್ತದೆ. ಇದನ್ನು ಚಿತ್ರ-1ರ rowಗಳಲ್ಲಿ ರೂಪಿಸಲಾಗಿದೆ. ಇಲ್ಲಿ $S_1$ರಿಂದ $S_4$ ಎಂಬುದು ಪ್ರಸಕ್ತವಾದ 4 ಶ್ಲೋಕಗಳಿಗೆ ಸಂಕೇತ. ಅದೇರೀತಿಯೇ ಪ್ರತಿಶ್ಲೋಕದಲ್ಲಿನ ಪಾದಗಳನ್ನು 4 columnಗಳಲ್ಲಿ ರೂಪಿಸಲಾಗಿದೆ. $P_1$ರಿಂದ $P_4$ ಎಂಬುದು 4 ಪಾದಗಳಿಗೆ ಸಂಕೇತ. ಅವತಾರಕಾಲವನ್ನು ಸೂಚಿಸುವ ಪಾದಗಳನ್ನು ಒತ್ತುನೀಡಿ ಗುರುತಿಸಲಾಗಿದೆ. **ಈ 4 ಪಾದಗಳು ಹಾಗೂ ಅವನ್ನು ಓದುವ ಕ್ರಮವು ಅವತಾರಕಾರ್ಯಕ್ಕೆ ಮೆಟ್ಟಿಲುಗಳನ್ನು ಕಲ್ಪಿಸಿದಂತಿವೆ !** ಇದನ್ನು ಚಿತ್ರ-2ರಲ್ಲಿ ತೋರಿಸಲಾಗಿದೆ. ಏಕಪದಾಧಿಷ್ಠಾನ ಇಲ್ಲದಿರುವುದರಿಂದ "ಅಂಕಾನಾಂ ವಾಮತೋ ಗತಿಃ" ಎಂಬುದರ ಉಲ್ಲಂಘನೆಯಾಗಿಲ್ಲವೆಂದೆನಿಸುತ್ತದೆ.




ಚಿತ್ರ-1




ಚಿತ್ರ-2

| | |
|---|---|
| 0 – 935 | 5 – 296 |
| 1 – 565 | 6 – 329 |
| 2 – 436 | 7 – 468 |
| 3 – 183 | 8 – 213 |
| 4 – 579 | 9 – 028 |

ಕೋಷ್ಟಕ




ಚಿತ್ರ-3

**ಸಮಗ್ರ** ಸುಮಧ್ವವಿಜಯದ ಪ್ರತಿಶ್ಲೋಕದ ಪ್ರತಿಪಾದದ ಆದ್ಯಕ್ಷರಗಳಿಗೆ ಸಂಬಂಧಿಸಿದಂತೆ ಕಟಪಯಾದಿ ಸಂಕೇತವಾಗಿ ಯಾವ ಯಾವ ಸಂಖ್ಯೆಗಳು ಎಷ್ಟೆಷ್ಟು ಬಾರಿ ತೋರ್ಪಡಿಸಿಕೊಂಡಿವೆ ಎಂಬುದನ್ನು ಕೋಷ್ಟಕದಲ್ಲಿ ಕೊಡಲಾಗಿದೆ. ಪ್ರಾಸಾದಿನಿಮಿತ್ತವಾದ ಸಂಖ್ಯೆಗಳ ಪುನರಾವರ್ತನೆಗಳು ಪ್ರತಿಸಂಖ್ಯೆಗೂ ಸಮಾನವೆಂದಿಟ್ಟುಕೊಂಡು ಪ್ರತಿಸಂಖ್ಯೆಯು ಗೋಚರವಾಗುವ ಸಾಪೇಕ್ಷ ಸಂಭವಗಳನ್ನು ಚಿತ್ರ-3ರಲ್ಲಿ ಚಿತ್ರೀಕರಿಸಲಾಗಿದೆ. ಪ್ರಸಕ್ತಸಂಖ್ಯೆಗಳು (1,1,2,2) 4 ವಿಭಿನ್ನ ಶ್ಲೋಕಗಳಿಗೆ ಸಂಬಂಧಿಸಿರುವುದರಿಂದ ಪ್ರಾಸಾದಿಗಳ ಪಾತ್ರ ಇಲ್ಲದಿರುವುದರಿಂದ ಅವತಾರಕಾಲವು ಯಾದೃಚ್ಛಿಕವಾಗಿ ಸೂಚಿತವಾಗಿರುವ ಸಂಭವ ಕೇವಲ 0.00023 ಮಾತ್ರ ಎಂದು ಅಂದಾಜಿಸಬಹುದು.

ಯಥೇಚ್ಛವಾಗಿ ಮಾಡಬಹುದಾದ ಇಂತಹ ಅಕ್ಷರಜೋಡಣೆಗಳಿಗೆ ಸಾಮಾನ್ಯವಾಗಿ ಸಂಶೋಧಕರ ಪೂರ್ವಾಗ್ರಹ ಹಾಗೂ ಬುದ್ಧಿಚಾತುರ್ಯಗಳ ಚೌಕಟ್ಟನ್ನು ಮೀರಿದ ಎಲ್ಲೆ ಇರುವುದಿಲ್ಲ. ಆದರೆ, ಶ್ರೀಮದಾಚಾರ್ಯರದೇ ಅನೇಕವಾಕ್ಯಗಳಿಂದ, ತದನುಗುಣ-ವಾಗುವ ಅನೇಕಾನೇಕ ಟೀಕಾಟಿಪ್ಪಣಿಗಳ ವಾಕ್ಯಗಳಿಂದ ಹಾಗೂ ಇತರ ಪ್ರಮಾಣಗಳಿಂದ ಸಿದ್ಧವಾಗುವ ಶ್ರೀಮದಾಚಾರ್ಯರ ಅವತಾರಕಾಲಕ್ಕೆ ಸಂವಾದಿಯಾದ, ಸುಮಧ್ವ-ವಿಜಯದಲ್ಲಿನ ಅವತಾರಪ್ರಸಂಗದಿಂದಲೇ ಉದ್ಧೃತವಾದ, ಅವತರಣಕ್ಕೆ ''ಸೋಪಾನ-ಪ್ರಾಯ''ವಾಗಿರುವ ಈ ಅಕ್ಷರಜೋಡಣೆಯನ್ನು ಕಾಕತಾಳೀಯವೆನ್ನದೇ ಗ್ರಂಥಕರ್ತೃಗಳ ಅಭಿಪ್ರಾಯವೆನ್ನುವುದೇ ಹೆಚ್ಚು ಸೂಕ್ತ.

ಅವತಾರಪರವಾದ ಶ್ಲೋಕಗಳ ಹಿನ್ನೆಲೆಯಲ್ಲಿ ಅವತಾರಕಾಲದ ಅನ್ವೇಷಣೆ ಸಾಧ್ಯ ಎಂಬುದಕ್ಕೆ ಈ ಹಿಂದೆ ಕೆಲವು ಪ್ರಯತ್ನಗಳು ನಡೆದಿದ್ದು[1,2] ಈ ಲೇಖನಕ್ಕೆ ಅವುಗಳಿಂದ ಸ್ಫೂರ್ತಿ ದೊರೆತಿದೆ.

*****

**ಶಾಕವ್ರತಸಮರ್ಪಣ ಮಂತ್ರ (ಶ್ರಾವಣ ಶುಕ್ಲ ದ್ವಾದಶೀ):**

**ವಾಸುದೇವ ನಮಸ್ತುಭ್ಯಂ ಪ್ರಥಮೇ ಮಾಸಿ ಯತ್ಕೃತಮ್ ।**
**ಶಾಕವ್ರತಂ ಮಯಾ ತೇನ ಸಂತುಷ್ಟೋ ಭವ ಮಾಧವ ॥**

**ಶ್ರಾವಣಶುಕ್ಲ ಏಕಾದಶಿಯಂದು ಶಾಕಗಳನ್ನು ದಾನ ಮಾಡಿ ದ್ವಾದಶಿಯಂದು ಅವುಗಳನ್ನು ಶ್ರೀಹರಿಗೆ ಸಮರ್ಪಿಸಿ ಸ್ವೀಕರಿಸಬೇಕು ಎಂಬುದು ವಿಧಿ :**

**ಶಾಕದಾನಮಂತ್ರ (ಶ್ರಾವಣ ಶುಕ್ಲ ದ್ವಾದಶೀ):**

**ಉಪಾಯನಮಿದಂ ದೇವ ವ್ರತಸಂಪೂರ್ತಿಹೇತವೇ ।**
**ಶಾಕಂ ತು ದ್ವಿಜವರ್ಯಾಯ ಸಹಿರಣ್ಯಂ ದದಾಮ್ಯಹಮ್ ॥**

---

1. ±ä | ì ¸ãà« ÊÞÓ±£ÌP(ÊáçÓãÃ)¿á DÍÌÃ ÓíÊñÃ¨ ÓíbP Êáñá ÊáíWÙãÃ ñÃá | ÊÞÓ±£ÌP¿á ®ÝvÖÝ¨ ËÍàÐÝíP, ®ÊíŸÃ..., 1951.
2. ÎÌà BÃ.... GÓ.... ±íaÊááU, P®Ýì oP¨ ÖÄ¨ÝÓÓÝ×ñÂ (±ÄÎÐ 2), P®v ÓÝ×ñÂ ±ÄÐñá , 1952.

# ಚಾತುರ್ಮಾಸ್ಯದಲ್ಲಿ ವಿಹಿತವಾದ ಕೆಲವು ವಿಶೇಷವ್ರತಗಳು

ಶಾಕವ್ರತ, ದಧಿವ್ರತ ಮೊದಲಾದವುಗಳು ಚಾತುರ್ಮಾಸ್ಯದಲ್ಲಿ ಸಕಲರಿಗೂ ವಿಹಿತವಾಗಿರುವ ಕಡ್ಡಾಯ ವ್ರತಗಳಾದರೆ ಯಥಾಯೋಗ್ಯವಾಗಿ ಇನ್ನಿತರ ವ್ರತಗಳೂ ಸಹ ವಿಹಿತವಾಗಿದ್ದು ಅವುಗಳ ಆಚರಣೆ ವಿಶೇಷವಾಗಿ ಶ್ರೀಹರಿಪ್ರೀತಿಕರ ಎನ್ನಿಸಿದೆ. ಅವುಗಳ ಸಂಕ್ಷಿಪ್ತವಿವರ ಹೀಗಿದೆ :

| ವ್ರತ | ಫಲ |
|---|---|
| ಮಧೂಕ ತೈಲತ್ಯಾಗ | ಅತುಲಸೌಭಾಗ್ಯ |
| ಗುಡವರ್ಜನ(ಬೆಲ್ಲದ ತ್ಯಾಗ) | ಮಧುರಸ್ವರ |
| ತೈಲತ್ಯಾಗ | ಸುಂದರ ಶರೀರ |
| ಯೋಗಾಭ್ಯಾಸ | ಸತ್ಯಲೋಕಪ್ರಾಪ್ತಿ |
| ತಾಂಬೂಲವರ್ಜನ | ಕಂಠಮಾಧುರ್ಯ, ಭೋಗ |
| ಘೃತತ್ಯಾಗ | ಲಾವಣ್ಯ, ಶರೀರಮಾರ್ದವ |
| ಶಾಕಪತ್ರತ್ಯಾಗ | ಭೋಗ |
| ಹಸಿಪದಾರ್ಥಗಳ ಸೇವನೆ | ನೈರ್ಮಲ್ಯ |
| ಅಭ್ಯಂಗತ್ಯಾಗ | ಶರೀರದಲ್ಲಿ ಸೌಗಂಧ್ಯ |
| ಹಾಲು ಮೊಸರು ಮಜ್ಜಿಗೆಗಳ ತ್ಯಾಗ | ದೇವಲೋಕಪ್ರಾಪ್ತಿ |
| ಸ್ಥಾಲೀಪಾಕವರ್ಜನ | ವಂಶವೃದ್ಧಿ |
| ದರ್ಭಾಸನ ಶಯನ | ವಿಷ್ಣುಭೃತ್ಯತ್ವ |
| ನೆಲದ ಮೇಲೆ ಭೋಜನ | ರಾಜಪದವಿ |
| ಮಧುಮಾಂಸ ತ್ಯಾಗ | ಮುನಿತ್ವ, ಯೋಗಸಿದ್ಧಿ |
| ಧಾರಣಪಾರಣವ್ರತ | ವಿಷ್ಣುಲೋಕಪ್ರಾಪ್ತಿ |
| ಕ್ಷೌರವರ್ಜನ | ಪ್ರತಿನಿತ್ಯಗಂಗಾಸ್ನಾನ ಫಲ |
| ಮೌನವ್ರತ | ಅಧಿಕಾರಪ್ರಾಪ್ತಿ |
| ನಾರಾಯಣಮಂತ್ರಜಪ | ಮಾನಸಜಫಲ |
| ವಿಷ್ಣುನಮಸ್ಕಾರ | ಗೋದಾನಫಲ |
| ವಿಷ್ಣುಪಾದಸ್ಪರ್ಶ | ಮೋಕ್ಷ |
| ವಿಷ್ಣುಮಂದಿರಮಾರ್ಜನ, ಉಪಲೇಪನ | ಕಲ್ಪಾವಧಿರಾಜಪದವಿ |
| ನೂರುಪ್ರದಕ್ಷಿಣ(ಸ್ತೋತ್ರಪಾಠ) | ವಿಷ್ಣುಲೋಕ |
| ತೀರ್ಥಸಂದರ್ಶನ | ಅಪ್ಸರೋಲೋಕಪ್ರಾಪ್ತಿ |
| ತೀರ್ಥಸ್ನಾನ | ದೇಹನೈರ್ಮಲ್ಯ |
| ಏಕಭುಕ್ತ | ಅಗ್ನಿಹೋತ್ರಫಲ |
| ಅಯಾಚಿತವ್ರತ | ಕೆರೆ, ಭಾವಿ ಕಟ್ಟಿಸಿದ ಪುಣ್ಯ |
| ಷಷ್ಠಕಾಲ ಭೋಜನ | ದೀರ್ಘಕಾಲ ಸ್ವರ್ಗ |
| ಎಲೆಯಲ್ಲಿ ಭೋಜನ | ಕುರುಕ್ಷೇತ್ರವಾಸ ಫಲ |
| ಕಲ್ಲಿನ ಮೇಲೆ ಭೋಜನ | ಪ್ರಯಾಗಸ್ನಾನಫಲ |

ಇವುಗಳಲ್ಲಿ ಧಾರಣಪಾರಣ, ತಾಂಬೂಲವರ್ಜನ, ಎಣ್ಣೆ ತುಪ್ಪಗಳನ್ನು ಬಿಡುವುದು, ಮೌನವ್ರತ, ಲಕ್ಷನಮಸ್ಕಾರ, ಲಕ್ಷಪ್ರದಕ್ಷಿಣೆ, ಏಕಭುಕ್ತ, ಅಯಾಚಿತ, ಎಲೆಯಲ್ಲಿ ಭೋಜನ ಮೊದಲಾದ ವ್ರತಗಳನ್ನು ವಿಶೇಷವಾಗಿ ಆಚರಿಸುವುದುಂಟು. ಇವುಗಳು ಸ್ತ್ರೀಪುರುಷ-ರೆಲ್ಲರಿಗೂ ವಿಹಿತ ; ಈ ವ್ರತಗಳು ಐಚ್ಛಿಕ. ಶಾಕವ್ರತಾದಿಗಳು ಕಡ್ಡಾಯವಾಗಿರುವುದರಿಂದ ಅವುಗಳನ್ನು ಆಚರಿಸುತ್ತಲೇ ಇವುಗಳನ್ನು ಆಚರಿಸಬೇಕೆಂಬುದು ವಿಧಿ.

*****

# ವಿಷ್ಣುವಿಗೆ ಪವಿತ್ರಾರೋಪಣದ ವಿಶೇಷ

**ಲೇ : ವಿಪ್ರ**

ಶ್ರಾವಣಮಾಸದ ಶುಕ್ಲಪಕ್ಷದ ದ್ವಾದಶೀ (೨೦.೦೭.೧೨)ದಿನದಂದು ಶ್ರೀಮಹಾ-ವಿಷ್ಣುವಿಗೆ ಪವಿತ್ರಾರೋಪಣವನ್ನು ಮಾಡಬೇಕು. ಹಾಗೆ ಮಾಡುವುದರಿಂದ ಇಡೀ ವರ್ಷ ಮಾಡಿದ ದೇವಪೂಜಾದಿಸಕಲಕಾರ್ಯಗಳೂ ಪೂರ್ಣವೆನ್ನಿಸುವವು. ಇಲ್ಲದಿದ್ದಲ್ಲಿ ನಿಷ್ಫಲವೆನ್ನಿಸುವವು.

ಪವಿತ್ರವನ್ನು ಮಾಡುವ ವಿಧಾನ ಹೀಗಿದೆ : ಹತ್ತಿ ಅಥವಾ ರೇಷ್ಮೆಯ ದಾರವನ್ನು ಮೂರು ಮಡಿಕೆ ಮಾಡಬೇಕು. ಅದರ ಉದ್ದ ಪ್ರತಿಮೆಯ ಪಾದದ ವರೆಗೆ ಅಥವಾ ಮೊಳಕಾಲಿನವರೆಗೆ ಅಥವಾ ನಾಭಿಯವರೆಗೆ ಇರತಕ್ಕದ್ದು. ಈ ರೀತಿ ನೂರೆಂಟು ದಾರ-ಗಳು ಇರಬೇಕು. ೩೬ ಅಥವಾ ೨೪ ಅಥವಾ ೧೨ ಗಂಟುಗಳು ಇರಬೇಕು. ಏಕಾದಶೀ ದಿನದಂದು ಈ ರೀತಿ ಪವಿತ್ರವನ್ನು ಸಿದ್ಧಪಡಿಸಿ ಅದನ್ನು ದೇವಸ್ಯ ತ್ವಾ ಸವಿತುಃ ಪ್ರಸವೇಽ-ಶ್ವಿನೋರ್ಬಾಹುಭ್ಯಾಂ ಪೂಷ್ಣೋ ಹಸ್ತಾಭ್ಯಾಂ ಎಂಬ ಮಂತ್ರದಿಂದ ೩ಬಾರಿ ಪ್ರೋಕ್ಷಿಸಿ,

**ಯೇನ ದೇವಾಃ ಪವಿತ್ರೇಣಾತ್ಮಾನಂ ಪುನತೇ ಸದಾ ।**
**ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಮ್ ॥**
**ಪ್ರಾಜಾಪತ್ಯಂ ಪವಿತ್ರಂ ಶತೋದ್ಯಾಮಂ ಹಿರಣ್ಮಯಮ್ ।**
**ತೇನ ಬ್ರಹ್ಮವಿದೋ ವಯಂ ಪೂತಂ ಬ್ರಹ್ಮ ಪುನೀಮಹೇ ॥**

ಎಂಬ ಮಂತ್ರದಿಂದ ಅಭಿಮಂತ್ರಿಸಿ, 'ನಾರಾಯಣಂ ಆವಾಹಯಾಮಿ' ಎಂಬುದಾಗಿ ನಾರಾಯಣಾದಿ ಪಂಚಮೂರ್ತಿಗಳನ್ನೂ, 'ಕೇಶವಂ ಆವಾಹಯಾಮಿ' ಇತ್ಯಾದಿಯಾಗಿ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನೂ ಆವಾಹಿಸಿ, ಗಂಟುಗಳಲ್ಲಿ ವಿಶ್ವಾದಿ ೮, ವಾಸುದೇವಾದಿ ೪, ಮತ್ಸ್ಯಾದಿ ೧೨, ಅಗ್ನ್ಯಂತರ್ಗತ ಅನಿರುದ್ಧ, ವಾಯ್ವಂತರ್ಗತ ಪ್ರದ್ಯುಮ್ನ ಮತ್ತು ಸೂರ್ಯಾಂತರ್ಗತ ಸಂಕರ್ಷಣನನ್ನೂ ಆವಾಹಿಸಬೇಕು. ಒಟ್ಟಾಗಿ 'ಪ್ರಜಾಪತಿಗ್ಂ ವಾಸುದೇವಂ ಆವಾಹಯಾಮಿ' ಎಂದು ವಿಷ್ಣುವನ್ನು ಆವಾಹಿಸಿ ಷೋಡಶೋಪಚಾರಗಳಿಂದ ಪೂಜಿಸಬೇಕು. ದ್ವಾದಶಿಯಂದು ಬೆಳಿಗ್ಗೆ :

**ದೇವದೇವ ನಮಸ್ತುಭ್ಯಂ ಪವಿತ್ರಂ ಪೂತಮುತ್ತಮಮ್ ।**
**ಗೃಹೀತ್ವಾ ವಾರ್ಷಿಕೀಂ ಪೂಜಾಂ ಭಗವನ್ ಪರಿಪೂರಯ ॥**
**ಅತೋ ದೇವಾ ಅವಂತು ನೋ ಯತೋ ವಿಷ್ಣುರ್ವಿಚಕ್ರಮೇ ।**
**ಪೃಥಿವ್ಯಾಃ ಸಪ್ತಧಾಮಭಿಃ ॥**

ಎಂಬ ಮಂತ್ರಗಳಿಂದ ಪ್ರಾರ್ಥಿಸಿ ಸಮರ್ಪಿಸಬೇಕು. ಬಳಿಕ ಪೂಜೆಯ ನಂತರ ಮಹಾಲಕ್ಷ್ಮಿಗೂ ಬ್ರಹ್ಮವಾಯು ಮೊದಲಾದ ದೇವತೆಗಳಿಗೂ ಅದನ್ನು ಸಮರ್ಪಿಸಿ ಈ ಕೆಳಗಿನ ಮಂತ್ರವನ್ನು ಪಠಿಸುತ್ತಾ ಧರಿಸಿಕೊಳ್ಳಬೇಕು:

**ಪವಿತ್ರಂ ವೈಷ್ಣವಂ ತೇಜಃ ಸರ್ವವಿಘ್ನನಿವಾರಣಮ್ ।**
**ಪೂಜಾಷಾಡ್ಗುಣ್ಯಸಿದ್ಧ್ಯರ್ಥಂ ಮಮಾಂಗೇ ಧಾರಯಾಮ್ಯಹಮ್ ॥**

*****

## ಅಧಿಕಮಾಸ ನಿಮಿತ್ತ ಸಾಮೂಹಿಕ ಗೋದಾನ ಕಾರ್ಯಕ್ರಮ

ದಿನಾಂಕ ೦೮.೦೯.೨೦೧೨ ಶನಿವಾರ ಮತ್ತು ೦೯.೦೯.೨೦೧೨ಭಾನುವಾರ

**ಸ್ಥಳ : ಪ್ರಮೋದಾತ್ಮ ಗೋ ಸಂರಕ್ಷಣಾ ಕೇಂದ್ರ, ಉತ್ತರಾದಿಮಠ,**
**ಯಲಗೂರ ತಾ. ಮುದ್ದೇಬಿಹಾಳ ಜಿ. ವಿಜಾಪೂರ.**

ಈ ವರ್ಷ ಬರುವ ಅಧಿಕ ಮಾಸದಲ್ಲಿ ಅಂದರೆ ದಿನಾಂಕ ೮,೯/೯/೨೦೧೨ (ಅಧಿಕ ಭಾದ್ರಪದಮಾಸ) ಈ ಎರಡು ದಿನಗಳಲ್ಲಿ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಸಾಮೂಹಿಕ ಗೋದಾನದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಅಲ್ಲದೇ ಈ ಕಾರ್ಯಕ್ರಮಕ್ಕೆ ೫೦೦೦ ಜನ ಭಕ್ತರ ಅವಶ್ಯಕತೆ ಇದೆ. ಎಲ್ಲ ಭಗವದ್ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿ ಶ್ರೀಸತ್ಯಾತ್ಮತೀರ್ಥಾದಿ ಸಮಸ್ತ ಗುರ್ವಂತರ್ಗತ ಶ್ರೀಯಲಗೂರೇಶಾಂತರ್ಗತ ಶ್ರೀಗೋಪಾಲಕೃಷ್ಣನ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ.

**ಸೇವಾ ವಿವರ : ಸಾಮೂಹಿಕ ಗೋದಾನ - ೨೦೦೦ ರೂ.**
**ಅನ್ನದಾನ ಸೇವಾ - ೫೦೦ ರೂ.**

ಸಂಪರ್ಕಿಸಬೇಕಾದ ವಿಳಾಸ :

Prasannacharya G. Katti

Pramodatma Go Samrakshana Kendra
"Satyatma Sannidhi' Plot 22,
Uttaradimuth, Yalagur-586213

Shantveer Nagar,Ibrahimpur
Tq. Muddebihal Dist.Bijapur
BIJAPUR - 586 101

**Mobile No.09448846835**

# ಶ್ರೀಕೃಷ್ಣಾಷ್ಟಮೀವ್ರತದ ಮಹಿಮೆ

## ೧. ಬ್ರಹ್ಮಾಂಡಪುರಾಣೋಕ್ತ ಕಥೆ

ಕರೂಶ ದೇಶ ; ಚಂದ್ರಮುಖ ಅದರ ರಾಜ ; ಅವನಿಗೆ ನೂರಾರು ಪತ್ನಿಯರು ; ತಾರಂಗಿ ಅವನ ಪಟ್ಟದರಸಿ ; ಇಬ್ಬರೂ ಅನುರೂಪ ದಂಪತಿಗಳು ; ಪರಮ ಧರ್ಮಿಷ್ಠರು. ತಾರಂಗಿಯಂತೂ ಪರಮ ದೈವಭಕ್ತಳು. ಅರಮನೆಗೆ ಸಮೀಪದಲ್ಲೇ ಒಂದು ವಿಷ್ಣುಮಂದಿರ ; ಪ್ರತಿನಿತ್ಯ ಅಲ್ಲಿಗೆ ತೆರಳಿ ಪರಿಪರಿಯಾಗಿ ಸೇವೆ ಮಾಡುವುದು ಅವಳ ಹವ್ಯಾಸ. ಸಾವಿರಾರು ದಾಸದಾಸಿಯರಿದ್ದರೂ ದೇವಾಲಯದ ಕಸ ಗುಡಿಸುವುದೂ, ಸ್ವಚ್ಛಗೊಳಿಸುವುದೂ, ರಂಗವಲ್ಲಿ ಹಾಗೂ ತಳಿರುತೋರಣಗಳಿಂದ ಸಿಂಗರಿಸುವುದೂ ಅವಳದ್ದೇ ಕೆಲಸ. ಅಂತಹ ಅವಳ ವಿಶಿಷ್ಟಸೇವೆಯನ್ನು ಅಲ್ಲಿಗೊಮ್ಮೆ ಆಗಮಿಸಿದ ಶ್ರೀಶುಕಮುನಿಗಳು ಗಮನಿಸಿದರು; ಅಚ್ಚರಿಯಿಂದ ಅವಳನ್ನು ಕೇಳಿದರು ಸಹ – 'ಅಮ್ಮಾ, ನಿನ್ನದು ಇದೆಂಥ ಅಪೂರ್ವಸೇವೆ; ಇದಕ್ಕೆ ಹಿನ್ನೆಲೆ ಏನಾದರೂ ಉಂಟೆ?' ಅವರಿಗೆ ಭಕ್ತಿಯಿಂದ ನಮಸ್ಕರಿಸಿ ತಾರಂಗಿ ಹೇಳತೊಡಗಿದಳು : ''ಪೂಜ್ಯರೇ ತಮಗೆ ತಿಳಿಯದ್ದೇನಿದೆ ; ಆದರೂ ತಾವು ಕೇಳಿರುವುದರಿಂದ ತಪ್ಪದೆ ತಿಳಿಸುವೆ.

ಹಿಂದಿನ ಜನ್ಮದಲ್ಲಿ ನಾನೊಬ್ಬ ಶೂದ್ರಸ್ತ್ರೀ. ನನ್ನ ತಂದೆ ಆಭೀರದೇಶದಲ್ಲಿ ಬೇಟೆ-ಯಾಡಿಕೊಂಡಿದ್ದವನು ; ನನಗೆ ನಾಲ್ವರು ಅಣ್ಣಂದಿರು; ಎಲ್ಲರೂ ಪರಮ ಪಾಪಿಗಳು ; ಬೇಟೆ, ಕೊಲೆ, ಸುಲಿಗೆ ಅವರಿಗೆ ನಿತ್ಯವಿಧಿ; ಒಮ್ಮೆ ನನ್ನ ಅಣ್ಣಂದಿರು ಬ್ರಾಹ್ಮಣ ಯಾತ್ರಿಕರನ್ನು ಕೊಂದು ಅವರಲ್ಲಿದ್ದ ಹಣವನ್ನು ಲೂಟಿ ಮಾಡಿದರು ; ವಿಷಯ ತಿಳಿದ ರಾಜ ಅವರನ್ನೆಲ್ಲಾ ಹಿಡಿಸಿ ಮರಣದಂಡನೆ ವಿಧಿಸಿದ ; ನನ್ನ ತಂದೆಗೂ ಅದೇ ಗತಿಯಾಯಿತು. ನನ್ನ ತಾಯಿ ಸೆರೆಯಲ್ಲೇ ಸತ್ತಳು. ರಾಜಭಟರು ನನ್ನನ್ನು ಮಗಧದೇಶಕ್ಕೆ ಕರೆದೊಯ್ದು ಸುಘೋಷ ಎಂಬ ಬ್ರಾಹ್ಮಣನಿಗೆ ಮಾರಿಬಿಟ್ಟರು. ಅವನ ಪತ್ನಿ ತುಂಬಾ ಸ್ನೇಹಮಯಿ ; ಅವರಿಬ್ಬರ ರಕ್ಷಣೆಯಲ್ಲಿ ನಾನು ಸುಖವಾಗಿಯೇ ಬೆಳೆದೆ.

ಆಗೊಮ್ಮೆ ವಿಶೇಷ ಸಂದರ್ಭದಲ್ಲಿ ಆ ವಿಪ್ರಪತ್ನಿಯಿಂದ ಶ್ರೀಕೃಷ್ಣಜನ್ಮಾಷ್ಟಮೀವ್ರತದ ಮಹಿಮೆ ತಿಳಿಯಿತು. ಆಕೆ ಅದನ್ನು ಆಚರಿಸಲು ನನಗೆ ಪ್ರೇರಣೆ ಇತ್ತು ಹಾಗೆ ಆಚರಿಸಿದಲ್ಲಿ ಮುಂದಿನ ಜನ್ಮದಲ್ಲಿ ಮಹಾರಾಣಿಯಾಗುವೆ ಎಂದಳು. ಅದರಂತೆ ಅದರ ವಿಧಿ-ವಿಧಾನಗಳನ್ನು ಹೇಳಿದಳು. ಆ ವ್ರತವನ್ನು ಆಚರಿಸಿದೆ. ಅಂದು ಪೂರ್ಣ ಉಪವಾಸವಿದ್ದು ಮಾರನೆಯ ದಿನ ಪ್ರಾತಃಕಾಲ ಪಾರಣೆ ಮಾಡಿದೆ. ಮುಂದೊಮ್ಮೆ ಆ ಬ್ರಾಹ್ಮಣ ಮೃತನಾದ; ಅವನ ಹೆಂಡತಿ ಸಹಗಮನ ಮಾಡಿದಳು ; ಜ್ವರಬಾಧೆಯೊಂದಕ್ಕೆ ತುತ್ತಾಗಿ ನಾನೂ ಮೃತಳಾದೆ.

ದೇಹ ಬಿಡುತ್ತಿದ್ದಂತೆಯೇ ನಾಲ್ವರು ವಿಷ್ಣುದೂತರು ಆಗಮಿಸಿ ವಿಮಾನವೊಂದರಲ್ಲಿ ನನ್ನನ್ನು ಕುಳ್ಳಿರಿಸಿ ವಿಷ್ಣುಲೋಕಕ್ಕೆ ಕರೆದೊಯ್ದರು. ಆದರೆ ಅಲ್ಲಿ ನನಗೆ ಪ್ರವೇಶ

ದೊರೆಯದಾಯಿತು. ಅಶರೀರವಾಣಿಯೊಂದು ಕಿವಿಗೆ ಬಿತ್ತು : 'ನಿನಗಿನ್ನೂ ಇದನ್ನು ಪ್ರವೇಶಿಸುವ ಕಾಲ ಒದಗಿಲ್ಲ'. ಅಲ್ಲಿಂದ ನನ್ನನ್ನು ಇಂದ್ರಲೋಕಕ್ಕೂ, ಅಲ್ಲಿಂದ ಯಮಲೋಕಕ್ಕೂ ಕರೆದೊಯ್ದರು. ಯಮದೇವರು ನನ್ನನ್ನು ಆದರದಿಂದ ಕಂಡು ಅನುಗ್ರಹಿಸಿದರು. ಆ ವೇಳೆಗೆ ಅಲ್ಲಿಗೆ ಯಮದೂತರು ಆಗಮಿಸಿದರು. ಅವರು ತುಂಬಾ ವ್ಯಥೆಯಿಂದ ಯಮನಲ್ಲಿ ವಿಜ್ಞಾಪಿಸಿಕೊಂಡರು: 'ಪ್ರಭು ! ತಮ್ಮ ಅಪ್ಪಣೆಯಂತೆ ನಾವಿಂದು ಮಗಧದೇಶದ ಪರಮಪಾಪಿಯಾದ ಬ್ರಾಹ್ಮಣನೊಬ್ಬನನ್ನು ಕರೆತರಲು ಹೋಗಿದ್ದೆವು. ಆದರೆ ಎಂಥಾ ಆಶ್ಚರ್ಯ ! ನಾವು ಅವನ ಕಂಠಕ್ಕೆ ಹಾಕಿದ ಪಾಶ ತುಂಡಾಯಿತು, ಎತ್ತಿದ ದಂಡ ಪುಡಿಯಾಯಿತು. ಚಾಚಿದ ಕೈ ಸ್ತಬ್ಧವಾಯಿತು. ಅವನ ಬಿಸಿಯುಸಿರು ನಮ್ಮನ್ನು ಸುಡತೊಡಗಿತು. ಭೀತರಾದ ನಾವು ಮರಳಿಬಿಟ್ಟೆವು'. ಯಮದೇವರ ಅಪ್ಪಣೆಯಂತೆ ಚಿತ್ರಗುಪ್ತ ಅದರ ರಹಸ್ಯವನ್ನು ಹೊರಹಾಕಿದ : 'ಅವನೊಬ್ಬ ಪರಮ ಪಾಪಿ, ಆದರೆ ಶ್ರೀಕೃಷ್ಣಜನ್ಮಾಷ್ಟಮೀವ್ರತ ಆಚರಿಸಿದ ಈ ತಾರಂಗಿಗೆ ಆಶ್ರಯ ಕೊಟ್ಟ ಪುಣ್ಯದ ಫಲವಾಗಿ ಅಂತಹ ಹಿರಿಮೆ ಗಳಿಸಿದ್ದಾನೆ. ಅವನನ್ನು ಗೌರವದಿಂದ ಕರೆತಂದಲ್ಲಿ ಬರುವನು' ಅದರಂತೆಯೇ ಅವನನ್ನು ಕರೆತಂದು ಸನ್ಮಾರ್ಗದಲ್ಲಿರಲು ಉಪದೇಶಿಸಿದರು. ಯಮದೇವರು ತಾರಂಗಿಗೆ ತಿಳಿಸಿದರು ; 'ಇವನು ಮುಂದೆ ಕರೂಶದೇಶಕ್ಕೆ ರಾಜನಾಗಿ ಹುಟ್ಟುವನು ; ನೀನು ಅವನ ಪತ್ನಿಯಾಗಿ ಮಹಾರಾಣಿ-ಯಾಗುವೆ ; ಶ್ರೀಕೃಷ್ಣಾಷ್ಟಮೀವ್ರತವನ್ನು ಆಚರಿಸಿದಲ್ಲಿ ನೀನು ಮಹಾರಾಣಿಯಾಗುವಿ, ಎಂದು ನಿನ್ನ ಒಡತಿ ಹೇಳಿದ್ದಳಲ್ಲವೇ ; ಆ ಬಯಕೆ ನಿನ್ನ ಮನದಾಳದಲ್ಲಿ ಇದ್ದದ್ದರಿಂದ ನಿನಗೆ ಆಗ ವೈಕುಂಠದ ಬಾಗಿಲು ತೆರೆಯಲಿಲ್ಲ. ನಿನ್ನ ಅಣ್ಣಂದಿರು ನರಕವಾಸವನ್ನು ಅನುಭವಿಸಿ ಹೀನಯೋನಿಗಳಲ್ಲಿ ಜನಿಸಿ ಈಗ ಮತ್ತೆ ವ್ಯಾಧರಾಗಿ ಹುಟ್ಟಿರುವರು. ನಿನ್ನ ತಂದೆತಾಯಿಗಳು ನಾಡಹಂದಿಗಳಾಗಿ ಜನಿಸಿರುವರು. ನಿನ್ನಿಂದಲೇ ಅವರೆಲ್ಲರ ಉದ್ಧಾರವಾಗಬೇಕು'. ಹೀಗೆ ತಿಳಿಸಿದ ಯಮದೇವರು ಇದೆಲ್ಲ ತನಗೆ ಜ್ಞಾಪಕವಿರುವಂತೆ ವರವಿತ್ತರು.

ಅದರಂತೆ ನಾನೀಗ ಜನಿಸಿರುವೆ. ನನಗೆ ಏಳನೆಯ ವರ್ಷದಲ್ಲಿ ಪೂರ್ವಜನ್ಮದ ಸ್ಮೃತಿ ಲಭಿಸಿತು. ಆಗೊಮ್ಮೆ ನಾಲ್ವರು ವ್ಯಾಧರು ಎರಡು ನಾಡ ಹಂದಿಗಳನ್ನು ಕೊಲ್ಲಲು ಹೊರಟಿದ್ದನ್ನು ನೋಡಿದೆ. ಆ ವ್ಯಾಧರೇ ನನ್ನ ಅಣ್ಣಂದಿರು ; ಆ ನಾಡಹಂದಿಗಳು ನನ್ನ ತಂದೆತಾಯಿಯರು. ನನ್ನನ್ನು ನೋಡುತ್ತಲೇ ಅವರಿಗೂ ಜ್ಞಾನೋದಯವಾಗಿ ಸದ್ಗತಿಗೆ ತೆರಳಿದರು. ನಾನು ನಾರಾಯಣಮಂತ್ರದಿಂದ ಅಭಿಮಂತ್ರಿಸಿದ ಜಲವನ್ನು ಆ ಹಂದಿಗಳ ಮೇಲೆ ಪ್ರೋಕ್ಷಿಸಿದೆ. ಅವು ಪಾಪಮುಕ್ತವಾಗಿ ವೈಕುಂಠಕ್ಕೆ ತೆರಳಿದವು. ಕೌಸಲದೇಶದ ರಾಜಕುಮಾರಿಯಾಗಿದ್ದ ನಾನು ಈಗ ಕರೂಶದೇಶಕ್ಕೆ ಮಹಾರಾಣಿಯಾಗಿರುವೆ. ಇದೆಲ್ಲ ಶ್ರೀಕೃಷ್ಣಾಷ್ಟಮೀವ್ರತದ ಫಲ. ಅದಕ್ಕೆಂದೇ ಶ್ರೀಹರಿಯನ್ನು ಇಷ್ಟು ಭಕ್ತಿಯಿಂದ ಆರಾಧಿ ಸುತ್ತಿರುವೆ. ಇನ್ನು ಮುಂದೆ ನಾನು ವಿಷ್ಣುಲೋಕಕ್ಕೆ ತೆರಳುವೆನು''. ಶುಕಮುನಿಗಳು ಅವಳನ್ನು ಆಶೀರ್ವದಿಸಿ ಮುಂದಕ್ಕೆ ತೆರಳಿ ಪರೀಕ್ಷಿತ್‌ರಾಜನ ಪುತ್ರನಾದ ಜನ-ಮೇಜಯರಾಜನಿಗೆ ಆ ವ್ರತವನ್ನು ಉಪದೇಶಿಸಿ ಉದ್ಧರಿಸಿದರು.

## ೨. ಭವಿಷ್ಯೋತ್ತರಪುರಾಣೋಕ್ತ ಕಥೆ

ಮಿತ್ರಜಿತ್ ಅಂಗದೇಶದ ರಾಜ ; ಸತ್ಯಜಿತ್ ಅವನ ಮಗ. ಸತ್ಯಜಿತ್ ತಂದೆಯ ಅನಂತರ ಪಟ್ಟವನ್ನೇರಿದ. ಪ್ರಜೆಗಳನ್ನು ಧರ್ಮದಿಂದಲೇ ಪಾಲಿಸಿದ. ಅವನ ಪ್ರಾರಬ್ಧಕರ್ಮದಿಂದಾಗಿ ಮುಂದೊಮ್ಮೆ ಅವನಿಗೆ ಪಾಷಂಡಜನಗಳ ಸಹವಾಸ ಒದಗಿತು. ಸಹವಾಸದೋಷದಿಂದ ಅವನು ಅಧರ್ಮಾಚರಣೆಯಲ್ಲಿ ತೊಡಗಿದ. ವೇದಶಾಸ್ತ್ರ-ಪುರಾಣಗಳನ್ನು ನಿಂದಿಸತೊಡಗಿದ. ಬ್ರಾಹ್ಮಣರಲ್ಲಿ ದ್ವೇಷಬುದ್ಧಿಯನ್ನೂ ಹೊಂದಿದ. ಬಹುಕಾಲ ಹೀಗೆಯೇ ಬದುಕಿ ಕೊನೆಗೆ ಮೃತನಾದ. ಯಮದೂತರಿಂದ ಬಂಧಿತನಾಗಿ ನರಕವನ್ನು ಸೇರಿದ. ಬಹುಕಾಲ ನರಕದುಃಖವನ್ನು ಅನುಭವಿಸಿ, ಪಾಪಶೇಷದಿಂದಾಗಿ ಪಿಶಾಚಯೋನಿಯನ್ನು ಹೊಂದಿದ. ಅಲ್ಲಿಯೂ ಅವನಿಗೆ ಹಸಿವು, ಬಾಯಾರಿಕೆಗಳ ಚಿತ್ರಹಿಂಸೆ. ಕೊನೆಗೊಬ್ಬ ವೈಶ್ಯನಲ್ಲಿ ಪ್ರವೇಶಿಸಿದ. ಅವನೊಂದಿಗೆ ಮಧುರಾಪಟ್ಟಣವನ್ನೂ ಸೇರಿದ. ಆದರೆ ಆ ಪುಣ್ಯಪಟ್ಟಣವನ್ನು ತಲುಪಲಾಗದೆ, ಅವನ ದೇಹದಿಂದ ಹೊರಬಂದು ಮತ್ತೆ ಕಾಡುಗಳಲ್ಲಿ ಅಲೆಯತೊಡಗಿದ. ಆಗೊಮ್ಮೆ ಆಶ್ರಮವೊಂದರಲ್ಲಿ ಋಷಿಗಳು ನಡೆಸುತ್ತಿದ್ದ ವಿಶೇಷಪೂಜೆಯನ್ನು ಕಾಣುವ ಯೋಗ ಒದಗಿತು. ಅಂದು ಕೃಷ್ಣಾಷ್ಟಮೀ. ಅದನ್ನು ಕಾಣುತ್ತಲೇ ಪ್ರಾರಬ್ಧಕರ್ಮ ಸವೆದು, ಪಿಶಾಚಯೋನಿಯನ್ನು ಕಳೆದುಕೊಂಡು, ವಿಷ್ಣುಲೋಕವನ್ನು ಪಡೆದ.

ಕೃಷ್ಣಾಷ್ಟಮೀ ಉತ್ಸವವನ್ನು ಕಂಡಮಾತ್ರಕ್ಕೆ ಒದಗಿದ ಫಲ ಇಂತಹುದು. ಇನ್ನು ವಿಧ್ಯುಕ್ತವಾಗಿ ಕೃಷ್ಣಾಷ್ಟಮೀವ್ರತವನ್ನು ಆಚರಿಸಿದರೆ ಒದಗುವ ಫಲವನ್ನು ಊಹಿಸಲೂ ಅಸಾಧ್ಯ.

ಇದು ಸ್ವತಃ ಶ್ರೀಕೃಷ್ಣನು ಧರ್ಮರಾಜನಿಗೆ ನಿರೂಪಿಸಿದ ಕೃಷ್ಣಾಷ್ಟಮೀವ್ರತದ ಹಿರಿಮೆ.

*****

### ಶ್ರೀಕೃಷ್ಣಾರ್ಘ್ಯಮಂತ್ರ

**ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ ।**
**ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ ॥**

**ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ ।**
**ಗೃಹಾಣಾರ್ಘ್ಯಂ ಮಯಾ ದತ್ತಂ ದೇವಕ್ಯಾ ಸಹಿತೋ ಹರೇ ॥–ಜಯಂತೀನಿರ್ಣಯ**

### ಚಂದ್ರಾರ್ಘ್ಯಮಂತ್ರ

**ಕ್ಷೀರೋದಾರ್ಣವಸಂಭೂತ! ಅತ್ರಿನೇತ್ರಸಮುದ್ಭವ !**
**ಗೃಹಾಣಾರ್ಘ್ಯಂ ಮಯಾ ದತ್ತಂ ರೋಹಿಣ್ಯಾ ಸಹಿತಃ ಶಶಿನ್ ॥–ಜಯಂತೀನಿರ್ಣಯ**

# ಶ್ರೀಕೃಷ್ಣಾಷ್ಟಮೀ ವ್ರತದ ಬಗ್ಗೆ ಕೆಲವು ವಿಶೇಷಾಂಶಗಳು :

೧. ಏಕಾದಶೀ ದಿನದಂತೆ ಶ್ರೀಕೃಷ್ಣಾಷ್ಟಮಿಯಂದೂ ಸಹ ಪೂರ್ಣ ನಿರ್ಜಲ ಉಪ-ವಾಸವನ್ನೇ ಮಾಡಬೇಕು ; ಇದು ಸಕಲವರ್ಣಾಶ್ರಮದವರಿಗೂ ಕಡ್ಡಾಯ.

೨. ಕೃಷ್ಣಾಷ್ಟಮಿಯಂದು ರಾತ್ರಿ ಚಂದ್ರೋದಯದ ಬಳಿಕವೇ ಅರ್ಘ್ಯವನ್ನು ನೀಡಬೇಕು.

೩. ಶ್ರೀಕೃಷ್ಣನಿಗೆ ಅರ್ಘ್ಯಪ್ರದಾನದ ಅನಂತರ ಚಂದ್ರಾರ್ಘ್ಯವನ್ನು ಕೊಡಬೇಕು. ಈ ದಿನವು ದುರ್ಗಾವತಾರವಾದ ದುರ್ಗಾಷ್ಟಮಿಯೂ ಆಗಿರುವುದರಿಂದ ದುರ್ಗಾ-ಪೂಜೆಯನ್ನೂ ಸಹ ಮಾಡುವುದು ವಿಹಿತ.

೪. ಅರ್ಘ್ಯಪ್ರದಾನ ಪೂರೈಸಿದ ನಂತರ ಮೂರು ಸಲ ತೀರ್ಥಪ್ರಾಶನ ಮಾಡಬೇಕು; ಗಂಧಾಕ್ಷತೆ ತಪ್ಪದೇ ಧರಿಸಲೇ ಬೇಕು.

೫. ಕೃಷ್ಣಾಷ್ಟಮಿಯಂದು ತೀರ್ಥಕ್ಕೆ ಗಂಧೋದಕ, ಸ್ವಾದೂದಕಗಳನ್ನು ಹಾಕಲೇಬೇಕು.

೬. ಕೃಷ್ಣಾಷ್ಟಮಿ ಉಪವಾಸವು ಸೂತಕದವರು ಸಹ ಆಚರಿಸಲೇಬೇಕು; ಸ್ತ್ರೀಯರು ರಜಸ್ವಲೆಯರಾಗಿದ್ದರೂ ಉಪವಾಸವನ್ನು ಆಚರಿಸಲೇಬೇಕು.

೭. ಕೃಷ್ಣಾಷ್ಟಮಿ ಮಧ್ಯರಾತ್ರಿಯಂದು ಭಗವಂತನಾದ ಶ್ರೀಕೃಷ್ಣನಿಗೆ ಮಾತ್ರ ನೈವೇದ್ಯ ಸಮರ್ಪಣೆ; ರಮಾಬ್ರಹ್ಮಾದಿ ನೈವೇದ್ಯ, ವೈಶ್ವದೇವ, ಬ್ರಹ್ಮಯಜ್ಞ, ತರ್ಪಣಗಳನ್ನು ಮಾಡುವಂತಿಲ್ಲ.

೮. ಅರ್ಘ್ಯಪ್ರದಾನದ ಅನಂತರ ಫಲಹಾರ ಇತ್ಯಾದಿಗಳನ್ನು ಸ್ವೀಕರಿಸದೆ ಉಪ-ವಾಸವನ್ನು ಮುಂದುವರೆಸಬೇಕು ; ಮಾರನೆಯ ದಿನ ಅವರವರ ಸಂಪ್ರದಾಯ-ಕ್ಕನುಗುಣವಾಗಿ ಪಾರಣೆ ಮಾಡಬೇಕು.

೯. ಕೃಷ್ಣಾಷ್ಟಮಿಯಂದು ಯಾವುದೇ ರೀತಿಯ ಆಹಾರವನ್ನು ಸ್ವೀಕರಿಸಿದರೂ ಅದು ಪೂಯೋದ ಎಂಬ ಘೋರನರಕಪ್ರಾಪ್ತಿಗೆ ಕಾರಣ.

೧೦. ಯಾವುದೇ ಮಾಧ್ವಮಠಗಳಲ್ಲೂ ರಾತ್ರಿ ಅರ್ಘ್ಯಪ್ರದಾನದ ನಂತರ ಫಲಹಾರಾದಿ-ಗಳನ್ನು ಸ್ವೀಕರಿಸುವ ಪದ್ಧತಿ ಇರುವುದಿಲ್ಲ;

೧೧. ಶಕ್ತರಾದವರು ಕೃಷ್ಣಾಷ್ಟಮಿಯಂದು ಜಾಗರಣೆ ಮಾಡಬಹುದು; ಶ್ರೀಮದ್ಭಾಗ-ವತಾದಿಗಳ ಪಾರಾಯಣ ವಿಶೇಷಫಲದಾಯಕ.

೧೨. ಅಂದು ಅರ್ಘ್ಯದ ವೇಳೆಗೆ ಶ್ರೀಕೃಷ್ಣನ ವಿಶೇಷ ಪೂಜಾದಿಗಳನ್ನು ಪೂರೈಸಿ, ಶ್ರೀಕೃಷ್ಣನಿಗೆ ಮಾತ್ರ ನೈವೇದ್ಯವನ್ನು ಸಮರ್ಪಣೆ ಮಾಡಿರಬೇಕು.

*****

ವಿ.ಸೂ : ಶ್ರೀಕೃಷ್ಣಾಷ್ಟಮಿ, ಶ್ರೀಕೃಷ್ಣಜಯಂತಿ ವ್ರತದ ಬಗ್ಗೆ ಸಮಗ್ರ ವಿವರಗಳನ್ನು ಹಾಗೂ ಪೂಜಾಪದ್ಧತಿಯನ್ನು ನಮ್ಮ ಪ್ರಕಾಶನದ ''ಶ್ರೀಕೃಷ್ಣಜಯಂತೀವ್ರತ'' ಎಂಬ ಗ್ರಂಥದಲ್ಲಿ ನೋಡಬಹುದು(ಬೆಲೆ : ರೂ. ೨೫/-).

# ಶ್ರೀಕನಕದಾಸರ ಹರಿಭಕ್ತಿಸಾರ

ಅನುವಾದ – ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ

(ಹಿಂದಿನ ಸಂಚಿಕೆಯಿಂದ)

**ಮಂಗಳಾತ್ಮಕ ದುರಿತತಿಮಿರಪ-**
**ತಂಗ ಗರುಡತುರಂಗ ರಿಪುಮದ-**
**ಭಂಗ ಕೀರ್ತಿತುರಂಗ ಪುರಹರಸಂಗ ನೀಲಾಂಗ ।**
**ಅಂಗದಪ್ರಿಯನಂಗಪಿತ ಕಾ-**
**ಳಿಂಗಮರ್ದನ ಅಮಿತ ಕರುಣಾ-**
**ಪಾಂಗ ಶ್ರೀನರಸಿಂಗ ರಕ್ಷಿಸು ನಮ್ಮನನವರತ ॥೧೦॥**

ಮಂಗಳಸ್ವರೂಪನೇ ! ದುರಿತವೆಂಬ ಕತ್ತಲೆಗೆ ಸೂರ್ಯನಂಥವನೇ ! ಗರುಡವಾಹನನೇ ! ಶತ್ರುಗಳ ಸೊಕ್ಕಡಗಿಸುವವನೇ ! ಕೀರ್ತಿಪತಾಕನೇ ! ಮುರಹರನಾದ ಶಿವನಿಗೆ ಹಿತೈಷಿಯೇ ! ನೀಲಮೇಘ ಶರೀರನೇ ! ಅಂಗದನಿಗೆ ಪ್ರಿಯನಾದವನೇ ! ಅನಂಗನಾದ ಮನ್ಮಥನ ಜನಕನೇ ! ಕಾಳಿಂಗನನ್ನು ನಿಗ್ರಹಿಸಿದವನೇ ! ಮಿತಿಯಿರದ ಕರುಣೆ ತೋರುವ ಕುಡಿನೋಟದವನೇ ! ಲಕ್ಷ್ಮೀನರಸಿಂಹನೇ ನಮ್ಮನ್ನು ಅನವರತ ರಕ್ಷಿಸು.

೧.ಮಂಗಳಾತ್ಮಕ – ಮಂಗಳಸ್ವರೂಪ – ಎಂದರೆ ಅನಂತಕಲ್ಯಾಣಗುಣಗಳ ಸ್ವರೂಪ-ನಾದವನು ಎಂದರ್ಥ. ಆತ್ಮಕ ಎಂಬ ಪದದಿಂದ ಶ್ರೀಹರಿಗೂ ಅವನ ಗುಣಗಳಿಗೂ ಯಾವುದೇ ವಿಧದ ಬೇಧವಿಲ್ಲ ಎಂಬ ವಿಶೇಷಾಂಶ ಸೂಚಿತ. ಇದು **ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥** ಎಂಬ ಶ್ರುತಿಯ ಅರ್ಥವೂ ಆಗಿದೆ.

೨.ದುರಿತತಿಮಿರಪತಂಗ – ದುರಿತ ಎಂದರೆ ಅನಿಷ್ಟ ; ತಿಮಿರ ಎಂದರೆ ಕತ್ತಲೆ ; ಪತಂಗ ಎಂದರೆ ಸೂರ್ಯ. ಕತ್ತಲೆಯು ಸೂರ್ಯನಿಂದ ನಾಶವಾಗುವಂತೆ ಸಕಲ-ದುರಿತಗಳು ಶ್ರೀಹರಿಯ ಅನುಗ್ರಹದಿಂದ ದೂರಾಗುವುವು ಎಂದರ್ಥ. ಇದು **ನರಸಿಂಹೋಽಖಿಲಾಜ್ಞಾನಮತಧ್ವಾಂತದಿವಾಕರಃ** ಎಂಬ ಶ್ರೀಮದಾಚಾರ್ಯರ ಮಾಯಾ-ವಾದಖಂಡನಕೃತಿಯ ಮಂಗಲಪದ್ಯದಲ್ಲಿನ ವಿಶೇಷಣದ ವಿವರಣೆಯಂತಿದೆ.

೩.ಗರುಡತುರಂಗ – ತುರಂಗ ಎಂದರೆ ಕುದುರೆ. ವೇಗವಾಗಿ ಸಂಚರಿಸುವುದರಿಂದ ಅದಕ್ಕೆ ಆ ಹೆಸರು. ಇಲ್ಲಿ ವಾಹನ ಎಂಬ ಅರ್ಥದಲ್ಲಿ ಇದು ಪ್ರಯೋಗಿಸಲ್ಪಟ್ಟಿದೆ. ಶ್ರೀಹರಿಗೆ ಗರುಡನೇ ವಾಹನ ಎಂಬುದರಿಂದ ಗಗನಗಾಮಿಯಾದ ವಾಹನವುಳ್ಳ ವಿಶಿಷ್ಟದೇವತೆ ಶ್ರೀಹರಿ. ಆದ್ದರಿಂದ ಅವನು ಸರ್ವೋತ್ತಮ ಎಂಬ ಭಾವ ಸೂಚಿತ. ಬೇರಾವ ದೇವತೆಗಳಿಗೂ ಗರುಡನಂತಹ ಗಗನಗಾಮಿಯಾದ ವಾಹನ ಪ್ರತೀತವಾಗಿಲ್ಲ ಎಂಬುದು ಗಮನಾರ್ಹ. ಇದು 'ಗಗನದಲಿ ಸಂಚರಿಪ ಗರುಡದೇವನೆ ತುರಗ' (ಈ

ಪರಿಯ ಸೊಬಗಾವ ದೇವರಲಿ ನಾ ಕಾಣೆ) ಎಂಬ ಶ್ರೀಪುರಂದರದಾಸರ ವಚನದ ರೂಪಾಂತರದಂತಿದೆ.

೪.ರಿಪುಮದಭಂಗ – ಶತ್ರುಗಳ ಸೊಕ್ಕನ್ನು ಅಡಗಿಸುವವನು ಎಂದರ್ಥ. ಕಂಸ, ಜರಾಸಂಧ, ಪೌಂಡ್ರಕವಾಸುದೇವ ಮೊದಲಾದ ಬ್ರಹ್ಮ ಶಿವಾದಿದೇವತೆಗಳ ವರದಿಂದ ಸೊಕ್ಕಿದ್ದ ದೈತ್ಯರನ್ನು ಶ್ರೀಕೃಷ್ಣ ಲೀಲಾಜಾಲವಾಗಿ ಸದೆಬಡೆದ ಮಹತ್ತ್ವಕ್ಕೆ ಸೂಚಕ.

೫.ಕೀರ್ತಿತುರಂಗ – ಹಿಂದೆ ತಿಳಿಸಿದಂತೆ ತುರಂಗ ಎಂದರೆ ಕುದುರೆ ಎಂದರ್ಥ. ಶ್ರೀಹರಿಯು ಭಕ್ತರ ಬಳಿಗೆ ಧಾವಿಸಲು ಅವನ ಕೀರ್ತಿಯು ವಾಹಕವಾಗಿರುವುದರಿಂದ ಅವನಿಗೆ ಆ ಹೆಸರು ; ಎಂದರೆ ಶ್ರೀಹರಿಯ ಮಹಿಮೆಯನ್ನು ಅವನ ಕೀರ್ತಿಯಿಂದಲೇ ತಿಳಿಯಲು ಸಾಧ್ಯ ಎಂದರ್ಥ.

೬.ಪುರಹರಸಂಗ – ಪುರಹರ ಎಂದರೆ ತ್ರಿಪುರಾಸುರನನ್ನು ಸಂಹಾರಮಾಡಿದ ಶಿವ ಎಂದರ್ಥ. ಅವನಿಗೆ ಮಿತ್ರನಂತೆ ಸದಾ ರಕ್ಷಕನಾಗಿರುವವನು ಶ್ರೀಹರಿ ಎಂಬ ಭಾವ ಇದರಿಂದ ಸೂಚಿತ.

೭.ನೀಲಾಂಗ – ಇಲ್ಲಿ ನೀಲ ಎಂದರೆ ನೀಲಮೇಘ ಎಂದರ್ಥ. ನೀಲಮೇಘಶ್ಯಾಮನಾದವನು ಶ್ರೀಹರಿ ಎಂದರ್ಥ. ಶ್ರೀಹರಿಯು ನೀಲವರ್ಣದವನು ಎಂಬ ಮಾತಿನಲ್ಲಿ ಅವನು ಸಾಕಲ್ಯೇನ ಅರಿಯಲಾಗದ ಮಹಿಮೆ ಉಳ್ಳವನು ಎಂಬ ಭಾವ ಸೂಚಿತ. ಗಗನ ಹಾಗೂ ಸಮುದ್ರಗಳು ನೀಲವರ್ಣದಿಂದ ಕಂಗೊಳಿಸಲು ಅವುಗಳ ವೈಶಾಲ್ಯ ಒಂದು ಬಗೆಯ ಕಾರಣ. ಅದರಂತೆ ಇಲ್ಲೂ ಸಹ ಎಂದು ತಿಳಿಯಬೇಕು.

೮.ಅಂಗದಪ್ರಿಯ – ಅಂಗದ ಎಂದರೆ ವಾಲಿಪುತ್ರ. ಅವನು ಚಂದ್ರನ ಅವತಾರ. ಅವನಲ್ಲಿ ಇಂದ್ರನ ಆವೇಶ. ಇದರಿಂದಾಗಿ ಅವನಿಗೆ ವಿಶೇಷ ಹಿರಿಮೆ ಬರುವಂತಾಗಿತ್ತು. ವಾಲಿಯ ಸಂಹಾರದ ಬಳಿಕ ಅಂಗದನಿಗೆ ಯುವರಾಜಪದವಿ ಲಭಿಸಿ ಅವನು ಶ್ರೀರಾಮನ ಅಂತರಂಗಭಕ್ತರಲ್ಲಿ ಒಬ್ಬನು ಎನಿಸಿದ ವಿವರ ರಾಮಾಯಣದಲ್ಲಿದೆ. ಅದು ಈ ಪದದಿಂದ ಸೂಚಿತ.

೯. ಅನಂಗಪಿತ – ಅನಂಗ ಎಂದರೆ ಮನ್ಮಥ. ಶಿವನ ಹಣೆಗಣ್ಣಿಗೆ ಮನ್ಮಥನ ದೇಹ ನಾಶವಾಗಿ ಅಂದಿನಿಂದ ಅವನು ಅನಂಗ ಎನ್ನಿಸಿದ್ದು ಪುರಾಣಗಳಲ್ಲಿ ಪ್ರಸಿದ್ಧ. ಹೀಗೆ ಅನಂಗನೆನಿಸಿದ ಮನ್ಮಥನಿಗೆ ಜನಕ ಎಂಬುದು ಶ್ರೀಹರಿಯ ಹಿರಿಮೆಗಳಲ್ಲೊಂದು.

೯.ಕಾಳಿಂಗಮರ್ದನ – ಕಾಳಿಂಗನು ಯಮುನಾನದಿಯ ಮಡುವೊಂದರಲ್ಲಿ ಆಶ್ರಯ ಪಡೆದು ಅದರ ಜಲವನ್ನು ಕಲುಷಿತಗೊಳಿಸಿ ಗೋ–ಗೋಪರಿಗೆ ಪೀಡಕನಾಗಿದ್ದ ಮಹಾಸರ್ಪ. ಶ್ರೀಕೃಷ್ಣ ಆ ಮಡುವಿನಲ್ಲಿ ಧುಮುಕಿ ಅದನ್ನು ನಿಗ್ರಹಿಸಿ ಯಮುನೆಯ ಜಲವನ್ನು ಪುನಃ ನಿರ್ಮಲಗೊಳಿಸಿದ ವಿವರ ಶ್ರೀಮದ್ಭಾಗವತದಲ್ಲಿದೆ. ಕಾಳಿಂಗನಂತಹ ಮಹಾವಿಷಸರ್ಪವನ್ನು ನಿಗ್ರಹಿಸುವ ಮೂಲಕ ತಾನು ಅಮೃತಸ್ವರೂಪನಾದವನು ಎಂಬ ವಿಶೇಷ ಪ್ರಮೇಯವನ್ನು ಲೋಕಕ್ಕೆ ಸಾರಿದ ಎಂಬುದು ಇಲ್ಲಿಯ ಭಾವ.

೧೦.ಅಮಿತ - ಮಿತಿಯುಳ್ಳವನು ಮಿತ ; ಶ್ರೀಹರಿಗೆ ದೇಶತಃ ಕಾಲತಃ ಹಾಗೂ ಗುಣತಃ ಮಿತಿಯಿಲ್ಲದಿರುವುದರಿಂದ ಅವನು ಅಮಿತ ಎನಿಸಿಕೊಳ್ಳುವನು. ಅನಂತ ಎಂಬುದು ಇಲ್ಲಿ ವಿಶೇಷ ಭಾವ.

೧೧.ಕರುಣಾಪಾಂಗ - ಅಪಾಂಗ ಎಂದರೆ ಕುಡಿನೋಟ; ಶ್ರೀಹರಿಯು ತನ್ನ ಭಕ್ತರನ್ನು ತನ್ನ ಕರುಣೆತುಂಬಿದ ಕುಡಿನೋಟದಿಂದ ನೋಡಿ ಅನುಗ್ರಹಿಸುವನು ಎಂದರ್ಥ. ಕೇವಲ ಕುಡಿನೋಟದಿಂದಲೇ ಸೃಷ್ಟಿಸಂಹಾರಾದಿ ಸಕಲಕಾರ್ಯಗಳನ್ನು ಮಾಡುವ ಶ್ರೀಹರಿಯು ಸರ್ವೋತ್ತಮ ಎಂಬುದು ಮಥಿತಾರ್ಥ.

೧೨.ಶ್ರೀನರಸಿಂಗ - ಶ್ರೀ ಎಂದರೆ ಮಹಾಲಕ್ಷ್ಮಿ ; ನರಸಿಂಗ ಎಂದರೆ ನರಸಿಂಹ. ಇದರಿಂದ ಶ್ರೀನರಸಿಂಗ ಎಂಬುದಕ್ಕೆ ಲಕ್ಷ್ಮೀನರಸಿಂಹ ಎಂದರ್ಥವಾಗುವುದು. ನರ ಎಂದರೆ ಪುರುಷ ; ಸಿಂಹ ಎಂದರೆ ಶ್ರೇಷ್ಠ ; ಪುರುಷೋತ್ತಮ ಎಂದರ್ಥ. ಇದು ಭಗವದ್ಗೀತೆ ಕೊನೆಯ ೫ ಶ್ಲೋಕಗಳಲ್ಲಿ ನಿರೂಪಿತವಾದ ಕ್ಷರಾಕ್ಷರ ಪುರುಷೋತ್ತಮತ್ತ್ವ-ರೂಪವಾದ ಹಿರಿಮೆಯನ್ನು ಸಾರುವ ವಿಶೇಷಣ.

ಹೀಗೆ ಒಟ್ಟು ಹನ್ನೆರಡು ವಿಶೇಷಣಗಳಿಂದ ಶ್ರೀಹರಿಯ ಬಗೆಬಗೆಯ ಹಿರಿಮೆಯನ್ನು ಈ ಪದ್ಯದಲ್ಲಿ ತಿಳಿಸಿರುವರು.

**-ಮುಂದುವರೆಯುವುದು**

*****


**ಶ್ರೀಭಂಡಾರಕೇರಿಮಠಾಧೀಶರಾದ**

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥಶ್ರೀಪಾದರು**

**ತಮ್ಮ 2010ರ ಹರಿದ್ವಾರ ಚಾತುರ್ಮಾಸ್ಯದ ಸಂದರ್ಭದಲ್ಲಿ ನಡೆಸಿಕೊಟ್ಟ**

**"ಮಹಾಭಾರತತಾತ್ಪರ್ಯನಿರ್ಣಯ"ದ**

**ಸಮಗ್ರಪಾಠದ ಸಿ.ಡಿ.ಗಳು (MP3) ಲಭ್ಯವಿವೆ.**

**ಭಾಗ - 1 (ಅಧ್ಯಾಯ 1 ರಿಂದ 10) - ರೂ. 200**

**ಭಾಗ - 2 (ಅಧ್ಯಾಯ 11 ರಿಂದ 21) - ರೂ. 200**

**ಭಾಗ - 3 (ಅಧ್ಯಾಯ 22 ರಿಂದ 32) - ರೂ. 200**

ಪ್ರತಿನಿತ್ಯ ಕನಿಷ್ಠ ೭ ಘಂಟೆಗಳ ಅವಧಿಯಲ್ಲಿ ಈ ಪಾಠವು ನಡೆದಿದ್ದು, ಶ್ರೀವಾದಿರಾಜ-ಸ್ವಾಮಿಗಳ ಭಾವಪ್ರಕಾಶಿಕಾವ್ಯಾಖ್ಯಾನ ಹಾಗೂ ಇತರ ವ್ಯಾಖ್ಯಾನಗಳನ್ನೂ ಒಳಗೊಂಡಿ-ರುವುದು ಇದರ ವೈಶಿಷ್ಟ್ಯವಾಗಿದೆ.

**ಸಿ.ಡಿ. ಪಡೆಯಲು ಸಂಪರ್ಕಿಸಬೇಕಾದ ವಿಳಾಸ:**

**ಶ್ರೀಭಾಗವತಾಶ್ರಮಪ್ರತಿಷ್ಠಾನ, ಶ್ರೀಭಂಡಾರಕೇರಿಮಠ, 1343, ಗಿರಿನಗರ, ಬೆಂಗಳೂರು - 85. ದೂರವಾಣಿ : 26721527, 26721068**

# ಮಾಸದ ವಿಶೇಷಗಳು

## ಆಷಾಢಮಾಸ ಕೃಷ್ಣಪಕ್ಷ

೧೩.೦೭.೧೨ : ದಶಮೀ

**೧೪.೦೭.೧೨ : ಸರ್ವರಿಗೂ ಏಕಾದಶೀ (ಕಾಮಿಕಾ)**

**೧೫.೦೭.೧೨ : ಅತಿರಿಕ್ತ ಏಕಾದಶೀ ಉಪವಾಸ (ಕೆಲವು ಮತಗಳಿಗೆ ಮಾತ್ರ[1])**

೧೬.೦೭.೧೨ : ಕಲಾಮಾತ್ರಸಾಧನೀ, ದಕ್ಷಿಣಾಯನಪರ್ವಪುಣ್ಯಕಾಲ[2]

೧೭.೦೭.೧೨ : ದಕ್ಷಿಣಾಯನ ಪರ್ವಕಾಲನಿಮಿತ್ತ ಕರಿದಿನ

೧೮.೦೭.೧೨ : ದರ್ಶ, ಅನ್ವಾಧಾನ

೧೯.೦೭.೧೨ : ಅಮಾವಾಸ್ಯೆ, ದೀಪಸ್ತಂಭಗೌರೀವ್ರತ, ವಿಷ್ಣುಪಂಚಕವ್ರತ

## ಶ್ರಾವಣಮಾಸ ಶುಕ್ಲಪಕ್ಷ

### (ಮಾಸನಿಯಾಮಕ : ಧನ್ಯಾ - ಶ್ರೀಧರ)

೨೦.೦೭.೧೨ : ಚಂದ್ರದರ್ಶನ, ಮಹಾಲಕ್ಷ್ಮೀ ಕಲಶಸ್ಥಾಪನೆ

೨೨.೦೭.೧೨ : ನಾಗಚತುರ್ಥೀ

೨೩.೦೭.೧೨ : ನಾಗಪಂಚಮೀ

೨೪.೦೭.೧೨ : ಕಲ್ಕಿಜಯಂತೀ, ಮಂಗಳಗೌರೀವ್ರತ

**೨೭.೦೭.೧೨ : ವರಮಹಾಲಕ್ಷ್ಮೀವ್ರತ**

**೨೮.೦೭.೧೨ : ದಶಮೀ**

---

1. EñÃÝ©Êás, Evá²¿á Óãà¨, PÐÝ±âÃ, PÝ~¿áãÃá ÖÝWã ÎàÃãÃá ÊásWÚW 14.07.12Ãí¨á HPÝ¨Îà ÖÝWã 15.07.12Ãí¨á A£ÄP ¨Ýì¨Îà & ×àW GÃvá E±ÊÝÓWÙá. 16.07.12Ãí¨á PÇÝÊÞñ ÓÝ«¯à ¨Ýì¨Îà ±ÝÃO. ÊáíñÝÆ¿á ÎàÃÝZÊàí¨Êás, ÎàÊÝÓÃÝgÊás, ÊááÙ¸ÝXÆá ÎàÎà±Ý¨ÃÝgÊás ÖÝWã Evá²¿á ±ÈÊÞÃá, ±àhÝÊÃ, A¨ÊÞÃá ÖÝWã ±â£W ÊásWÚW 14.07.12Ãí¨á HPÝ¨Îà E±ÊÝÓ, 15.07.12Ãí¨á ¨Ýì¨Îà ÖÄÊÝÓÃ(ÎàÊÝÓÃÝgÊásP ¸ÚW 10.09& ÃÊÃW ; ÊáíñÝÆ¿á ÎàÃÝZÊàí¨Êás ÖÝWã ÊááÙ¸ÝXÆá ÎàÎà±Ý¨ÃÝg ÊásP ¸ÚW 9.13ÃÊÃW ; Evá²¿á ±ÈÊÞÃá Êã¨ÇÝ¨ ®ÝÆá ÊásWÚW ¸ÚW 10.22ÃÊÃW )
2. A£ÄP ¨Ýì¨Îà E±ÊÝÓ BaÄÓáÊ ÊásWÚW ©. 16.07.12Ãí¨á ÓãÁãàì¨¿á¨ Êáá®Êà¨üOÝ¿á® ±ÊìPÝÆ¯Ëáñ ñ±ìOÝ©WÙ®áPãoá, ÓãÁãàì¨¿áÊÝWá£¨íñà ±ÝÃO BaÄÓñP¨á. CñÃÄW (16.07.12Ãí¨á) ¨üOÝ¿á® ±â|ÂPÝÆ & ÊáíñÝÆ¿á ÎàÃÝZÊàí¨ÊásP ¸ÚW 10.45Äí¨ Óã¿ÞìÓ¨ÊÃW ; ÎàÊÝÓÃÝgÊásP ¸ÚW 8.41Ã®íñÃ ; ÎàÎà±Ý¨ÃÝgÃ ÊásP ¸ÚW 8.45Äí¨ Óã¿ÞìÓ¨ÊÃW

**೨೯.೦೭.೧೨ : ಸರ್ವರಿಗೂ ಏಕಾದಶೀ(ಪುತ್ರದಾ), ಶಾಕವ್ರತ ಸಮಾಪ್ತಿ, ದಧಿವ್ರತಾರಂಭ**

೩೦.೦೭.೧೨ :**ದ್ವಾದಶೀ, ಶ್ರೀಮಹಾವಿಷ್ಣುವಿಗೆ ಪವಿತ್ರಾರೋಪಣ**

೩೧.೦೭.೧೨ : ಮಂಗಳಗೌರೀವ್ರತ

೦೨.೦೮.೧೨ : **ನೂಲಹುಣ್ಣಿಮೆ, ಹಯಗ್ರೀವಜಯಂತೀ, ಋಗ್ವೇದಿಗಳಿಗೆ ಹಾಗೂ ಯಜುರ್ವೇದಿಗಳಿಗೆ ಉಪಾಕರ್ಮ (ನೂತನ ಉಪಾಕರ್ಮ ಸಹಿತ),** ವಿಷ್ಣುಪಂಚಕವ್ರತ

## ಶ್ರಾವಣಮಾಸ ಕೃಷ್ಣಪಕ್ಷ

೦೩.೦೮.೧೨ : ಅಶೂನ್ಯಶಯನವ್ರತ

೦೭.೦೮.೧೨ : ಮಂಗಳಗೌರೀವ್ರತ

**೦೯.೦೮.೧೨ : ಶ್ರೀಕೃಷ್ಣಜನ್ಮಾಷ್ಟಮೀ** (ಚಂದ್ರೋದಯ ರಾತ್ರಿ. ೧೧.೪೭)

೧೦.೦೮.೧೨ : ತಿಥ್ಯಂತೇ ಪಾರಣೆ – ಮಧ್ಯಾಹ್ನ೧೨.೩೦ರ ನಂತರ, ಮನ್ವಾದಿ

**೧೨.೦೮.೧೨ : ದಶಮೀ**

**೧೩.೦೮.೧೨ : ಸರ್ವರಿಗೂ ಏಕಾದಶೀ(ಅಜಾ)**

**೧೪.೦೮.೧೨ : ದ್ವಾದಶೀ,** ಮಂಗಳಗೌರೀವ್ರತ

೧೬.೦೮.೧೨ : ಗುರುಪುಷ್ಯಾಮೃತಯೋಗ

೧೭.೦೮.೧೨ : ಅಮಾವಾಸ್ಯೆ, ಸಿಂಹ ಸಂಕ್ರಮಣ (ವಿಷ್ಣುಪದಪರ್ವಪುಣ್ಯಕಾಲ ಬೆಳಿಗ್ಗೆ೮.೧೭), ಕುಶಗ್ರಹಣ, ಅನ್ವಾಧಾನ, **ವಿಷ್ಣುಪಂಚಕವ್ರತ**

## ಗುರುಗಳ ಪುಣ್ಯದಿನಗಳು

೧೯.೦೭.೧೨ : ಶ್ರೀಸತ್ಯಾಧೀಶತೀರ್ಥರು(ಉ.ಮ) ರಾಜಮಹೆಂದ್ರೀ

೨೧.೦೭.೧೨: ಶ್ರೀತೇಜೋನಿಧಿತೀರ್ಥರು (ಶ್ರೀಪಾ.ಮ.), ಓಡಪ್ಪಳ್ಳಿ

೨೪.೦೭.೧೨: ಶ್ರೀವಿದ್ಯಾಪೂರ್ಣತೀರ್ಥರು (ವ್ಯಾ.ಮ.), ಸೋಸಲೆ

೨೫.೦೭.೧೨ : ಶ್ರೀಲಕ್ಷ್ಮೀಕಾಂತತೀರ್ಥರು (ವ್ಯಾ.ಮ.), ಪೆನುಗೊಂಡ
ಶ್ರೀಸತ್ಯವರತೀರ್ಥರು(ಉ.ಮ) ಸಂತೇಬಿದನೂರು

೩೧.೦೭.೧೨: ಶ್ರೀಲಕ್ಷ್ಮೀನಾಥತೀರ್ಥರು (ವ್ಯಾ.ಮ.), ಶ್ರೀರಂಗ

೦೨.೦೮.೧೨: ಶ್ರೀಗೋಪಾಲಸ್ವಾಮಿತೀರ್ಥರು (ಶ್ರೀಪಾ.ಮ), ಮುಳಬಾಗಿಲು

೦೪.೦೮.೧೨ : ಶ್ರೀರಾಘವೇಂದ್ರತೀರ್ಥರು, ಮಂತ್ರಾಲಯ

೧೫.೦೮.೧೨ : ಶ್ರೀಸತ್ಯಧರ್ಮತೀರ್ಥರು(ಉ.ಮ) ಹೊಳೆಹೊನ್ನೂರು

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

೦೨.೦೮.೨೦೧೨ ಗುರುವಾರ ಪ್ರವಚನ ಸಂಜೆ ೫.೩೦ಕ್ಕೆ

ಸ್ಥಳ : ಶ್ರೀರಾಘವೇಂದ್ರಸ್ವಾಮಿಗಳ ಮಠ, ಎನ್.ಆರ್.ಕಾಲೋನಿ, ಬೆಂಗಳೂರು

*****

೦೩.೦೮.೨೦೧೨ ಸೋಮವಾರ ಪ್ರವಚನ ಸಂಜೆ ೬.೪೫ಕ್ಕೆ

ವಿಷಯ : ಶ್ರೀರಾಘವೇಂದ್ರಸ್ವಾಮಿಗಳ ಹಿರಿಮೆ

ಸ್ಥಳ : ಶ್ರೀರಾಘವೇಂದ್ರಸ್ವಾಮಿಗಳ ಮಠ, ಇಟ್ಟಮಡು, ಬೆಂಗಳೂರು

*****

೦೪.೦೮.೨೦೧೨ ಶನಿವಾರ ಪ್ರವಚನ ಸಂಜೆ ೬.೪೫ಕ್ಕೆ

ಸ್ಥಳ : ಶ್ರೀವ್ಯಾಸಮಧ್ವಸಭಾಂಗಣ, ಹನುಮಂತನಗರ, ಬೆಂಗಳೂರು

ವಿಷಯ : ಶ್ರೀರಾಘವೇಂದ್ರಸ್ವಾಮಿಗಳ ಬಹುಮುಖವ್ಯಕ್ತಿತ್ವ

*****

೦೫.೦೮.೨೦೧೨ ಭಾನುವಾರ ಪ್ರವಚನ ಸಂಜೆ ೬.೪೫ಕ್ಕೆ

ವಿಷಯ : ಶ್ರೀರಾಘವೇಂದ್ರಸ್ವಾಮಿಗಳ ಮಹಿಮೆಗಳು

ಸ್ಥಳ : ಶ್ರೀರಾಘವೇಂದ್ರಸ್ವಾಮಿಗಳ ಮಠ, ಗಿರಿನಗರ, ಬೆಂಗಳೂರು

*****

೦೯.೦೮.೨೦೧೨ ಗುರುವಾರ ಪ್ರವಚನ ಸಂಜೆ ೬.೩೦ಕ್ಕೆ

ವಿಷಯ : ಶ್ರೀಕೃಷ್ಣಾಷ್ಟಮೀನಿಮಿತ್ತ ಪ್ರವಚನ

ಸ್ಥಳ : ಶ್ರೀವ್ಯಾಸಮಧ್ವಸಭಾಂಗಣ, ಹನುಮಂತನಗರ, ಬೆಂಗಳೂರು

*****

೦೯.೦೮.೨೦೧೨ ಗುರುವಾರ ಪ್ರವಚನ ರಾತ್ರಿ ೮.೦೦ಕ್ಕೆ

ವಿಷಯ : ಶ್ರೀಕೃಷ್ಣಾಷ್ಟಮೀನಿಮಿತ್ತ ಪ್ರವಚನ

ಸ್ಥಳ : ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

*****

೧೯.೦೮.೨೦೧೨ ಭಾನುವಾರ ಪ್ರವಚನ ಸಂಜೆ ೬.೦೦ಕ್ಕೆ

ವಿಷಯ : ಅಧಿಕಮಾಸನಿಮಿತ್ತ ಪ್ರವಚನ

ಸ್ಥಳ : ಶ್ರೀರಾಮಮಂದಿರ, ಮಲ್ಲೇಶ್ವರ, ಬೆಂಗಳೂರು

*****

೨೦.೦೮.೨೦೧೨ರಿಂದ ೨೬.೦೮.೨೦೧೨ವರೆಗೆ ಪ್ರವಚನ ಸಂಜೆ ೬.೩೦ಕ್ಕೆ

ವಿಷಯ : ಅಧಿಕಮಾಸನಿಮಿತ್ತ ಪ್ರವಚನ

ಸ್ಥಳ : ಶ್ರೀಮಾಧ್ವಸಂಘ, ಬಳ್ಳಾರಿ

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

'Pajaka', # 89/24, III Cross, Mount Joy Road, Hanumanthanagar, Bangalore - 560 019.

Website: www.vyasamadhwa.org Ph:26602802 Email: info@vyasamadhwa.org


# ನಮ್ಮ ಪ್ರಕಾಶನಗಳು

ಕನ್ನಡ ಪುಸ್ತಕಗಳು

| | |
|---|---|
| **ಸಂಗ್ರಹ ರಾಮಾಯಣ(ಕನ್ನಡ ಅನುವಾದ ಸಮೇತ)** | **- 300** |
| **ಹರಿಕಥಾಮೃತಸಾರ (ಕಮಲಾಪತಿದಾಸರ ಟೀಕಾ ಸಮೇತ)** | **- 225** |
| **ಹರಿಕಥಾಮೃತಸಾರ (ಅನುವಾದ, ವಿವರಣೆಗಳ ಸಹಿತ)** | **- 350** |
| **ಸುಮಧ್ವವಿಜಯ(ಅನುವಾದ, ವಿವರಣೆಗಳ ಸಮೇತ)** | **- 300** |
| **ಸರ್ವ ಮೂಲ ಸೌರಭ** | **- 125** |
| **ತೀರ್ಥಪ್ರಬಂಧ(ಕನ್ನಡ ಅನುವಾದ ಸಮೇತ)** | **- 120** |
| **ಸ್ತೋತ್ರಮಾಲಿಕಾ-1** | **- 60** |
| **ಲಕ್ಷ್ಮೀಸ್ತೋತ್ರಮಾಲಿಕಾ** | **- 60** |
| **ಕೃಷ್ಣಾಮೃತಮಹಾರ್ಣವ(ಅನುವಾದ ಸಮೇತ)** | **- 60** |
| **ಲಕ್ಷ್ಮೀಭಜನಾಮೃತ** | **- 60** |
| **ಗೋಪಾಲದಾಸರ ಕೃತಿಗಳು** | **- 60** |
| **ಸ್ತೋತ್ರಮಾಲಿಕಾ - 3** | **- 50** |
| **ಶ್ರೀಮದ್ಭಗವದ್ಗೀತಾ(ಅನುವಾದ ಸಮೇತ)** | **- 50** |
| **ಗೀತಾಮಧು** | **- 50** |
| **ಶ್ರೀಹರಿವಾಯುಸ್ತುತಿ(ಅನುವಾದ ಸಮೇತ)** | **- 30** |
| **ಕೃಷ್ಣಜಯಂತೀವ್ರತ** | **- 25** |
| **ಅಂಭೃಣೀ ಸೂಕ್ತಮ್(ಶ್ರೀವಾದಿರಾಜರ ಟೀಕಾ ಹಾಗೂ ಅನುವಾದ)** | **- 25** |
| **ಅಂಭೃಣೀ ಸೂಕ್ತಮ್(ಶ್ರೀರಾಘವೇಂದ್ರಸ್ವಾಮಿಗಳ ಟೀಕಾ ಹಾಗೂ ಅನುವಾದ)** | **- 25** |
| **ಏಕಾದಶೀ ವ್ರತ** | **- 25** |
| **ಸುಂದರಕಾಂಡ ನಿರ್ಣಯ(ಅನುವಾದ ಸಮೇತ)** | **- 20** |
| **ಸಂಪ್ರದಾಯಪದ್ಧತಿ(ಅನುವಾದ ಸಮೇತ)** | **- 20** |
| **ಭಾಗವತದ ಬೆಳಕು** | **- 20** |

| | |
|---|---|
| ತಪ್ತಮುದ್ರಾಧಾರಣ | - 15 |
| ವಿಜಯದಾಸದರ್ಶನ | - 100 |
| ವೇದವ್ಯಾಸದರ್ಶನ | - 60 |
| ಹರಿಭಜನಕಲ್ಪದ್ರುಮ | - 80 |
| ಜಯತೀರ್ಥದರ್ಶನ | - 50 |
| ಪೂರ್ಣಪ್ರಜ್ಞದರ್ಶನ | - 100 |
| ಪದ್ಯಮಾಲಾ | - 60 |

## English Books :

| | |
|---|---|
| Life & Works of Sri Madhwacharya | - 350 |
| Ekadasi Vrata | - 25 |
| Glimpses of Bhagavatam | - 30 |

# ನಮ್ಮ ಮುಂದಿನ ಪ್ರಕಾಶನಗಳು

## ಸಂಸ್ಕೃತ ಗ್ರಂಥಗಳು

1. ಶ್ರೀಜಯಂತೀನಿರ್ಣಯ
   (ಶ್ರೀರಾಮಚಂದ್ರತೀರ್ಥರು ಹಾಗೂ ಶ್ರೀ ಸತ್ಯಪರಾಯಣತೀರ್ಥರ ವ್ಯಾಖ್ಯಾನಗಳ ಸಮೇತ)
2. ಬಿಲ್ವಮಂಗಲಃ ಸಾಧುಃ
   (ಶ್ರೀವಿಜ್ಞಾನತೀರ್ಥರು ಹಾಗೂ ಶ್ರೀಸತ್ಯಪರಾಯಣತೀರ್ಥರ ವ್ಯಾಖ್ಯಾನಗಳ ಸಮೇತ)
3. ತತ್ತ್ವಸಾರ ಸಮುದ್ಧೃತಿ (ಶ್ರೀತಾಮ್ರಪರ್ಣಿ ಆನಂದತೀರ್ಥಾಚಾರ್ಯರ ಕೃತಿ)
4. ಶ್ರೀಮದ್ಭಾಗವತ (ಪರಿಷ್ಕೃತ ಪಾಠ, ಶ್ರೀಮದ್ಭಾಗವತತಾತ್ಪರ್ಯ ಸಮೇತ)
5. ಋಙ್ಮಂತ್ರಸುಧಾ
6. ಶ್ರೀವಾದಿರಾಜಸ್ವಾಮಿಗಳ ಪ್ರಮೇಯಮಾಲಿಕಾ

## ಕನ್ನಡ ಕೃತಿಗಳು

1. ಮಧ್ವಭಾರತ – ಮಹಾಭಾರತತಾತ್ಪರ್ಯನಿರ್ಣಯದ ಕಥಾರೂಪ
2. ಮಧ್ವಸಿದ್ಧಾಂತ – ಮಧ್ವಸಿದ್ಧಾಂತದ ಸ್ಥೂಲಪರಿಚಯ
3. ಚಾತುರ್ಮಾಸ್ಯವ್ರತ

4. ಉಪನಯನ

5. ವಿವಾಹ

6. ರುಗ್ಮಿಣೀಶವಿಜಯ - ಮೂಲ, ಅನುವಾದ, ವಿವರಣೆಗಳ ಸಮೇತ

7. ಶ್ರೀಮದ್ಭಾಗವತ
(ಮೂಲಶ್ಲೋಕಗಳು, ಅನುವಾದ, ವಿವರಣೆಗಳ ಸಮೇತ - 10 ಸಂಪುಟಗಳಲ್ಲಿ)

8. ಋಗ್ಭಾಷ್ಯ (ಮೂಲ, ವೇದಮಂತ್ರಗಳು, ಭಾಷ್ಯ, ಅನುವಾದ, ವಿವರಣೆಗಳ ಸಮೇತ)

9. ದ್ವಾದಶಸ್ತೋತ್ರ (ಅನುವಾದ, ವಿವರಣೆಗಳ ಸಮೇತ)

10. ಸ್ತೋತ್ರಮಾಲಿಕಾ - ಭಾಗ 9, 10, 11 (ವೈಷ್ಣವಗುರುಸ್ತೋತ್ರಮಾಲಿಕೆಗಳು)

11. ಸ್ತೋತ್ರಮಾಲಿಕಾ - ಭಾಗ 12 (ಪೌರಾಣಿಕಸ್ತೋತ್ರಮಾಲಿಕಾ)

12. ಪಿತೃಯಜ್ಞ

13. ಗೋವಿನ ಮಹಿಮೆ

14. ಶ್ರೀಮನ್ಮಧ್ವಾಚಾರ್ಯರ ಅಪ್ರಸಿದ್ಧ ಶ್ರುತಿಗಳು
(ಪ್ರೊ. ರೋಖಿ ಮೆಸ್ಕಿಟಾ ಮಾಡಿರುವ ಆಕ್ಷೇಪಗಳಿಗೆ ಉತ್ತರ -
ಆಂಗ್ಲ ಹಾಗೂ ಕನ್ನಡ ಭಾಷೆಗಳಲ್ಲಿ)

15. ವೈಷ್ಣವಮುನಿವೃಂದಚರಿತೆ - ಸಕಲವೈಷ್ಣವ ಮಹಾಪುರುಷರ ಪರಿಚಯ

16. ದ್ವೈತವೇದಾಂತಗ್ರಂಥಸೂಚೀ

# ಧಾರ್ಮಿಕಪ್ರವಚನಗಳ ಸಿ.ಡಿ./ಎಂಪಿ ೩ ಗಳು ಲಭ್ಯ

ನಮ್ಮ ಪ್ರಕಾಶನದಿಂದ ಬಿಡುಗಡೆಯಾಗಿರುವ ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ-
ರಿಂದ ನಡೆದ ಪ್ರವಚನಮಾಲಿಕೆಗಳ ಸಿ.ಡಿ.ಗಳ ವಿವರ

| ವಿಷಯ | ಒಟ್ಟು ಅವಧಿ(ಗಂಟೆಗಳು) | ಬೆಲೆ(ರೂಗಳಲ್ಲಿ) |
|---|---|---|
| 1. ಶ್ರೀಮದ್ಭಾಗವತ | 26 | 100 |
| 2. ಮಹಾಭಾರತ (4 ಸಿಡಿಗಳು - mp3) | 150 | 400 |
| 3. ಸುಂದರಕಾಂಡ | 16 | 50 |
| 4. ಸುಮಧ್ವವಿಜಯ | 18 | 50 |
| 5. ಶ್ರೀನಿವಾಸಕಲ್ಯಾಣ | 12 | 50 |
| 6. ರಾಮಾಯಣ | 18 | 50 |
| 7. ದ್ವಾದಶಸ್ತೋತ್ರ | 15 | 50 |
| 8. ಅಧಿಕಮಾಸಮಾಹಾತ್ಮ್ಯೆ | 3 | 20 |

| | | |
|---|---|---|
| 9. ವಿಷ್ಣುಸಹಸ್ರನಾಮ | 3 | 20 |
| 10. ಹರಿವಾಯುಸ್ತುತಿಃ | 25 | 100 |
| 11. ಸದಾಚಾರಸ್ಮೃತಿ | 3 | 20 |
| 12. ಹರಿವಂಶ | 10 | 50 |
| 13. ಹರಿಕಥಾಮೃತಸಾರ | 20 | 50 |
| 14. ಮಹಾಭಾರತದಲ್ಲಿ ಧರ್ಮರಾಜ, ಅರ್ಜುನ | 16 | 60 |
| 15. ಮಹಾಭಾರತದಲ್ಲಿ ಕರ್ಣನ ಪಾತ್ರ | 10 | 60 |
| 16. ಮಹಾಭಾರತದಲ್ಲಿ ವಿದುರ, ಭೀಷ್ಮರ ಪಾತ್ರ | 18 | 60 |
| 17. ಚಾತುರ್ಮಾಸ್ಯ, ಧಾತ್ರಿಹವನ | 8 | 20 |
| 18. ಶ್ರೀವಿಷ್ಣುಪುರಾಣ | 8 | 50 |
| 19. ಮಹಾಭಾರತತಾತ್ಪರ್ಯನಿರ್ಣಯ | 40 | 150 |
| 20. ಸರ್ವಮೂಲ - ಪರಿಚಯ | 40 | 150 |
| 21. ಪ್ರಾತಃಸಂಕಲ್ಪಗದ್ಯ | 3 | 25 |
| 22. ದೇವರು, ಏಕಾದಶಿ, ಉಪನಯನ ಲಕ್ಷ್ಮೀಶೋಭಾನೆ, ರಾಘವೇಂದ್ರಮಂಗಳಾಷ್ಟಕ | 8 | 50 |
| 23. ಮಧ್ವ ಫಾರ್ ಯೂತ್ | 18 | 50 |
| 24. ಮಾಧ್ವ ಯತಿಗಳು ಮತ್ತು ಹರಿದಾಸರು | 15 | 50 |
| 25. ಗೀತಾಮಹಾತ್ಮೆ | 15 | 50 |
| 26. ಸಮಗ್ರ ಭಾಗವತ (10 ಸಿಡಿಗಳ ಸೆಟ್) | 450 | 1500 |
| 27. ಪ್ರಪಂಚಮಿಥ್ಯಾತ್ವಾನುಮಾನಖಂಡನ, ತತ್ತ್ವಸಂಖ್ಯಾನ, ಉಪಾಧಿಖಂಡನ, ಕಥಾಲಕ್ಷಣ, ಮಾಯಾವಾದಖಂಡನ, ತತ್ತ್ವವಿವೇಕ, ಪ್ರಮಾಣಲಕ್ಷಣ | 3 | each 25 |

## ಡಿ. ವಿ. ಡಿ.

| | | |
|---|---|---|
| 1. ಸಮಗ್ರ ಭಾಗವತ (4 ಡಿವಿಡಿಗಳ ಸೆಟ್) | 450 | 1500 |
| 2. ಮಹಾಭಾರತ | 150 | 400 |
| 3. ಭಗವದ್ಗೀತೆ (3 ಡಿವಿಡಿಗಳ ಸೆಟ್) | 225 | 600 |
| 4. ಭಾಗವತ ಸಾರೋದ್ಧಾರ | 70 | 150 |

ಪ್ರತಿಗಳಿಗಾಗಿ ಸಂಪರ್ಕಿಸಿ :

**ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)**

ನಂ. 89/24, ಪಾಜಕ, 3ನೇ ಕ್ರಾಸ್, ಮೌಂಟ್‌ಜಾಯ್ ಎಕ್ಸಟೆನ್ಷನ್, ಹನುಮಂತನಗರ, ಬೆಂಗಳೂರು-560 019. ದೂರವಾಣಿ (080)26602802; 26611011

**ಸಮಯ : ಬೆಳಿಗ್ಗೆ 9.30ರಿಂದ ಮಧ್ಯಾಹ್ನ 2.30ರವರೆಗೆ**

॥ಶ್ರೀಗೋಪಾಲಕೃಷ್ಣೋ ವಿಜಯತೇ॥

# ಗೋವರ್ಧನಗಿರಿ ಟ್ರಸ್ಟ್

## ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿ - ೫೭೬ ೧೦೧

**ನೀಲಾವರ ಗೋಶಾಲೆಯಲ್ಲಿ ಗೋಮೂತ್ರ ಮತ್ತು ಗೋಮಯದಿಂದ ತಯಾರಿಸಿದ ಔಷಧಿಗಳು**

**೧. ಗೋಮೂತ್ರ ಅರ್ಕ(ಪ್ರತಿರೋಧಿ)**-500ML Rs.60/-; 200ML Rs.30/-

**ಉಪಯೋಗಗಳು :** ಪಚನ ತಂತ್ರ ಜೀರ್ಣಸಂಬಂಧದ ಖಾಯಿಲೆಗಳಿಗೆ ರಾಮಬಾಣ. ಲಿವರ್, ಕಿಡ್ನಿ, ಹೃದಯರೋಗ, ಕ್ಯಾನ್ಸರ್ ಇತ್ಯಾದಿ, ಕೊಲೆಸ್ಟ್ರಾಲ್‌ನ್ನು ಮತ್ತು ಶರೀರದ ತೂಕವನ್ನು ಕಡಿಮೆ ಮಾಡುತ್ತದೆ.

**ಉಪಯೋಗಿಸುವ ವಿಧಾನ :** 10 ರಿಂದ 15 ಮಿ.ಲೀ. ಬೆಳಿಗ್ಗೆ ಮತ್ತು ರಾತ್ರಿ ಬಿಸಿನೀರು ಅಥವಾ ಜೇನುತುಪ್ಪದೊಂದಿಗೆ ತೆಗೆದುಕೊಳ್ಳಬಹುದು.

**೨. ಉಜ್ಜೀವನೀ (ಘನವಟೀ)** - 120 ಮಾತ್ರೆ - Rs.60/-

**ಉಪಯೋಗಗಳು :** ಈ ಔಷಧವು ಶ್ವಾಸಕೋಶದ ರೋಗಗಳು, ಮಾನಸಿಕ ಖಾಯಿಲೆ, ಡಯಾಬಿಟೀಸ್, ಕ್ಯಾನ್ಸರ್ ಖಾಯಿಲೆಗಳಿಗೆ ಪ್ರಯೋಜನಕಾರಿ.

**ಉಪಯೋಗಿಸುವ ವಿಧಾನ :** ಬೆಳಿಗ್ಗೆ 2 ಮಾತ್ರೆ, ಸಂಜೆ
2 ಮಾತ್ರೆ ಅಥವಾ ಬೆಳಿಗ್ಗೆ 1 ಮಾತ್ರೆ, ಸಂಜೆ 1 ಮಾತ್ರೆ ತೆಗೆದುಕೊಳ್ಳಬಹುದು.

**೩. ಜೀರ್ಣಕಾರಿ** - 50 gms. - Rs.35/-

**ಉಪಯೋಗಗಳು :** ಈ ಔಷಧವು ಜೀರ್ಣಶಕ್ತಿ, ಅಸಿಡಿಟಿ, ಗ್ಯಾಸ್, ಅಪಚನ, ಪಿತ್ತ , ಕಬ್ಜ (ಮಲವಿಸರ್ಜನೆ ಬಂದಾಗುವಿಕೆ), ಹೊಟ್ಟೆನೋವುಗಳಿಗೂ ಪ್ರಯೋಜನಕಾರಿ.

**ಉಪಯೋಗಿಸುವ ವಿಧಾನ :** ದಿನವೂ 5 ಗ್ರಾಂ.ನಂತೆ ಬಿಸಿನೀರಿನಲ್ಲಿ ಊಟದ ನಂತರ ಅಥವಾ ರಾತ್ರಿ ಮಲಗುವ ಮುಂಚೆ ತೆಗೆದುಕೊಳ್ಳಬಹುದು.

**೪. ಉನ್ಮೀಲಿನಿ** - 20 ML - Rs.20/-

**ಉಪಯೋಗಗಳು :** ಕಣ್ಣಿನ ಸಂಬಂಧಪಟ್ಟ ಎಲ್ಲಾ ಖಾಯಿಲೆಗಳನ್ನು ಗುಣಪಡಿಸುತ್ತದೆ. (ನಿತ್ಯ ಉಪಯೋಗಿಸುವುದರಿಂದ ಕಣ್ಣಿನ ದೃಷ್ಟಿಶಕ್ತಿ ಕಡಿಮೆಯಾಗುವುದಿಲ್ಲ). ಶಸ್ತ್ರಚಿಕಿತ್ಸೆ ಆದ ಕಣ್ಣಿಗೆ ಒಂದು ವರ್ಷ ಈ ಔಷಧ ಬಳಸಬಾರದು. **ಉಪಯೋಗಿಸುವ ವಿಧಾನ:** ದಿನಕ್ಕೆ 2 ಬಾರಿ 2 ಹನಿ.

**೫. ವಜ್ರಾಂಗ ತೈಲ** - 50 ML - Rs.40/-

**ಉಪಯೋಗಗಳು :** ಈ ತೈಲವು ಮೂಳೆ, ಗಂಟುನೋವು, ಉಳುಕುವುದು, ಬೀಗುವುದು, ಸುಟ್ಟಗಾಯಗಳಿಗೆ, ಇತ್ಯಾದಿ ಎಲ್ಲಾ ನೋವುಗಳಿಗೆ ಹಚ್ಚಬಹುದು.

**ಉಪಯೋಗಿಸುವ ವಿಧಾನ :** ದಿನಕ್ಕೆ 2 ಬಾರಿಯಂತೆ ಉಪಯೋಗಿಸಬಹುದು. ಬಿಸಿನೀರಿನಲ್ಲಿ ಶಾಖ ಕೊಡುವುದು.

**೬. ಶುಭ್ರದಂತಿ ಹಲ್ಲುಪುಡಿ** - 50 Gms. - Rs.20/-

**ಉಪಯೋಗಗಳು:** ಹಲ್ಲಿನ ಎಲ್ಲ ತರಹದ ರೋಗಗಳನ್ನು ಗುಣಪಡಿಸುತ್ತದೆ ಮತ್ತು ಸ್ವಚ್ಛಗೊಳಿಸುತ್ತದೆ.

**ಸಂಖ್ಯೆ :** 9986258076, 65330798

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

'Pajaka', # 89/24, III Cross, Mount Joy Road, Hanumanthanagar, Bangalore - 560 019.
Website: www.vyasamadhwa.org Ph:26602802 Email: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧. ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨. ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩. 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವ-ಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪. 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫. ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬. ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವಸೇವಾಪ್ರಶಸ್ತಿ'.

೭. ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮. ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯. ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

### ವಿಶೇಷ ಸೂಚನೆ :

೧. ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.

೨. 80G ಅನ್ವಯ ಆದಾಯ ತೆರಿಗೆ ವಿನಾಯಿತಿಯನ್ನು ಬಯಸುವವರು ನಮ್ಮ ಪ್ರತಿಷ್ಠಾನಕ್ಕೆ ''Sri Vyasa Madhwa Research Foundation (R)'' ಎಂಬ ಹೆಸರಿಗೆ ದೇಣಿಗೆ ನೀಡಬಹುದು.